ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೪
ವಿಚಾರ ಸಾಹಿತ್ಯಮಾಲೆ – ೨೫
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ.ವಿ. ನರಸಿಂಹಮೂರ್ತಿ

ಬ್ರಿಟಿಷ್ ಸಾಮ್ರಾಜ್ಯವಾದ
ಮತ್ತು
ಭಾರತೀಯ ರಾಷ್ಟ್ರೀಯತೆ

ಬ್ರಿಟಿಷ್ ಸಾಮ್ರಾಜ್ಯವಾದ
ಮತ್ತು
ಭಾರತೀಯ ರಾಷ್ಟ್ರೀಯತೆ

ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ಕೆ. ಸಂತಾನಂ

ಅನುವಾದ
ಎ. ಆರ್. ರಂಗರಾವ್

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

British Samrajyavada mattu Bharatiya Rashtriyate : Kannada translation of *British Imperialism and Indian Nationalism* by **K. Santhanam;** Kannada translation by **A.R. Ranga Rao;** Editor-in-Chief: **Dr. Pradhan Gurudatta;** Editor of the series: **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxvi + 67; Price: Rs. 10/-

ಮುದ್ರಣ : ೨೦೧೦
ಪುಟಗಳು : xxvi + ೬೭
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝುಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚಯವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ

– ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀನೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–

ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ. ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ

ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತುಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾ ಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಎ.ಆರ್. ರಂಗರಾವ್ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಂ. ನಾಗರಾಜರಾವ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ಭಾರತೀಯ ರಾಷ್ಟ್ರೀಯತೆ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಎ. ಆರ್. ರಂಗರಾವ್ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ	**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು	ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಭಾರತೀಯ ವಿದ್ಯಾಭವನ, ಕರ್ನಾಟಕ	ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಸಾಮಾನ್ಯ ಸಂಪಾದಕರ ಮುನ್ನುಡಿ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು, ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗಳಿಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

೧. ಕ್ವೀನ್ ವಿಕ್ಟೋರಿಯಾ ರೋಡ್
ನವದೆಹಲಿ **ಕೆ. ಎಂ. ಮುನ್ಷಿ**
೩, ಅಕ್ಟೋಬರ್, ೧೯೫೧

ಪ್ರಾಸ್ತಾವಿಕ

ಲಾಲಾ ಲಜಪತ್‌ರಾಯ್ ಅವರ ನೆನಪಿನಲ್ಲಿ ಮೂರು ಉಪನ್ಯಾಸಗಳನ್ನು ನೀಡುವಂತೆ, ೧೯೭೦ರ ಉತ್ತರಾರ್ಧದಲ್ಲಿ ಮಧುರೈ ವಿಶ್ವವಿದ್ಯಾಲಯದ ಉಪಕುಲಪತಿಗಳಿಂದ ನನಗೆ ಆಹ್ವಾನ ಬಂದಿತು. ಈ ಉದ್ದೇಶಕ್ಕಾಗಿ ಈ ಮಹಾನ್ ದೇಶಭಕ್ತನ ಅಭಿಮಾನಿಗಳು ಒಂದು ಪುದುವಟ್ಟನ್ನು ರಚಿಸಿದ್ದರು. ನಾನು ೧೯೭೦ರ ನವೆಂಬರ್ ೧೮, ೧೯ ಮತ್ತು ೨೦ ರಂದು, ಮಧುರೈಯಲ್ಲಿ ಈ ಉಪನ್ಯಾಸಗಳನ್ನು ನೀಡಿದೆ. "೧೯೨೦ರವರೆಗೆ ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ಭಾರತದ ರಾಷ್ಟ್ರೀಯವಾದ" ಎಂಬುದೇ ಈ ಉಪನ್ಯಾಸಗಳ ವಿಷಯವಾಗಿತ್ತು. ಈ ಉಪನ್ಯಾಸಗಳಲ್ಲಿ ೧೯೨೦ ರಿಂದ ೧೯೪೭ರವರೆಗೆ ನಡೆದ ಅಹಿಂಸಾತ್ಮಕ ಹೋರಾಟದ ವಿಷಯವನ್ನು ಸೇರಿಸುವುದು ಬೇಡವೆಂಬ ಅಭಿಪ್ರಾಯವಿತ್ತು. ಈಗಿನ ಪೀಳಿಗೆಯ ಜನರಿಗೆ ಈ ವಿಷಯ ಚೆನ್ನಾಗಿ ತಿಳಿದೇ ಇರುತ್ತದೆ. ಆದ್ದರಿಂದ ಅದನ್ನು ಸೇರಿಸುವುದು ಅನಾವಶ್ಯಕವೆಂಬ ಭಾವನೆ ವ್ಯಕ್ತವಾಯಿತು. ಆದ್ದರಿಂದ ೧೯೨೦ಕ್ಕೆ ಮುಂಚಿನ ವಿಷಯಗಳನ್ನು ಜನರ ನೆನಪಿಗೆ ತರುವುದು ಹೆಚ್ಚು ಸೂಕ್ತವೆಂದು ಪರಿಗಣಿಸಲಾಯಿತು.

ನನಗೆ ಈ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳ ಪರಿಜ್ಞಾನವಿತ್ತು: ಆದರೂ, ನನಗೆ ದೊರೆತಿದ್ದ ಈ ಆಮಂತ್ರಣದಿಂದ ಮೂರು ತಿಂಗಳ ಕಾಲ ಈ ವಿಷಯಗಳ ತೀವ್ರ ಅಧ್ಯಯನ ನಡೆಸಲು ನನಗೆ ಒಳ್ಳೆಯ ಪ್ರೇರಣೆ ದೊರೆಯಿತು. ನಾನು ಆರ್.ಸಿ. ದತ್ ಅವರ "ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ" ಮತ್ತು ಡಾ. ತಾರಾಚಂದ್ ಅವರ "ಹಿಸ್ಟರಿ ಆಫ್ ಇಂಡಿಯನ್ ಫ್ರೀಡಮ್" ಸೇರಿದಂತೆ, ಹಲವಾರು ಪುಸ್ತಕಗಳನ್ನು ಓದಿದೆ. ಬ್ರಿಟಿಷರ ಆಳ್ವಿಕೆಯ ಮತ್ತು ರಾಷ್ಟ್ರೀಯ ಜಾಗೃತಿಗೆ ಸಂಬಂಧಿಸಿದ ಅತಿ ಮುಖ್ಯವಾದ ವಿಷಯಗಳನ್ನು ಆರಿಸುವುದೇ ನನಗೆ ಬಹಳ ಕಷ್ಟವಾಯಿತು. ಈ ಅವಧಿಯಲ್ಲಿ ಕಂಡುಬಂದ ರಾಜಕೀಯ ಬೆಳವಣಿಗೆಯನ್ನಷ್ಟೇ ಅಲ್ಲದೆ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಬೆಳವಣಿಗೆಗಳನ್ನು ಸಹ ಈ ಉಪನ್ಯಾಸಗಳಲ್ಲಿ ತರಲು ನಾನು ಪ್ರಯತ್ನಿಸಿದ್ದೇನೆ.

ಈ ಉಪನ್ಯಾಸಗಳು ಪುಸ್ತಕ ರೂಪದಲ್ಲಿ ಹೊರಬಂದಲ್ಲಿ, ಅದನ್ನು ಜನರು, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಸಮುದಾಯದವರು ಖಂಡಿತ ಸ್ವಾಗತಿಸುವರೆಂಬ ದೃಢ ನಂಬಿಕೆ ನನಗಿದೆ.

ಕೆ. ಸಂತಾನಮ್

ಪ್ರಕಾಶಕರ ನುಡಿ

ಲಾಲಾ ಲಜಪತ್‌ರಾಯ್ ಸ್ಮಾರಕ ಉಪನ್ಯಾಸವನ್ನು ಮಧುರೈ ವಿಶ್ವವಿದ್ಯಾನಿಲಯದಲ್ಲಿ ನವೆಂಬರ್ 18, 19 ಮತ್ತು 20 ರಂದು ನೀಡಿದ ವಿಷಯವನ್ನೇ ಈ ಪುಸ್ತಕ ಒಳಗೊಂಡಿದೆ.

ಈ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಅನುಮತಿ ನೀಡಿದ ಮಧುರೈ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ವಂದನೆಗಳು.

Blank Page

ಪರಿವಿಡಿ

Blank Page

ಬ್ರಿಟಿಷ್ ಸಾಮ್ರಾಜ್ಯವಾದ

ಮತ್ತು

ಭಾರತೀಯ ರಾಷ್ಟ್ರೀಯತೆ

೧. ಪೀಠಿಕೆ

ಲಾಲಾ ಲಜಪತ್‌ರಾಯ್ ಆಧುನಿಕ ಭಾರತದ ಅಗ್ರಪಂಕ್ತಿಯ ನಾಯಕರಾಗಿದ್ದರು. ಅವರ ಸ್ಮಾರಕ ಉಪನ್ಯಾಸಗಳನ್ನು ನೀಡುವಂತೆ ನನ್ನನ್ನು ಆಹ್ವಾನಿಸಿರುವುದು ನಿಜಕ್ಕೂ ನನಗೆ ಸಂದ ಗೌರವವೆಂದು ನಾನು ಭಾವಿಸುತ್ತೇನೆ. ಅವರ ಜೀವಮಾನದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಲಾಯಿತು. ಈ ಅಭಿವೃದ್ಧಿ ಕಾರ್ಯದಲ್ಲಿ ಲಜಪತ್‌ರಾಯ್ ತುಂಬ ಪ್ರಮುಖ ಪಾತ್ರ ವಹಿಸಿದ್ದರು. ಹದಿನಾರರ ಎಳೆಯ ವಯಸ್ಸಿನಲ್ಲೇ ಅವರು ತಮ್ಮ ಬಹುಪಾಲು ಸಮಯವನ್ನು ಸಾರ್ವಜನಿಕ ಸೇವೆಗಾಗಿ ವಿನಿಯೋಗಿಸುತ್ತಿದ್ದರು. ತಮ್ಮ ಗಳಿಕೆಯನ್ನು ಇಂತಹ ಸೇವೆಗಾಗಿಯೇ ಅವರು ಖರ್ಚು ಮಾಡುತ್ತಿದ್ದರು. ಆರ್ಯಸಮಾಜದ ಸಂಸ್ಥಾಪಕ ಸ್ವಾಮಿ ದಯಾನಂದ ಸರಸ್ವತಿಯವರಿಂದ ಅವರು ತುಂಬ ಪ್ರಭಾವಿತರಾಗಿದ್ದರು. ಪಂಜಾಬ್ ಅಲ್ಲದೆ, ಇಡೀ ಭಾರತದಲ್ಲಿ ಆರ್ಯ ಸಮಾಜವನ್ನು ಸಂಘಟಿಸಿದವರಲ್ಲಿ ಲಜಪತ್‌ರಾಯ್ ಪ್ರಮುಖರು. ಲಾಹೋರ್‌ನ ಡಿಎವಿ ಕಾಲೇಜಿನ ಸಂಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದರು. ಅಷ್ಟೇ ಅಲ್ಲದೆ, ಅವರು ಅನೇಕ ಪಾಠಶಾಲೆಗಳನ್ನು ಮತ್ತು ಅನಾಥಾಶ್ರಮಗಳನ್ನು ಆರಂಭಿಸಿದರು. ಆರ್ಯ ಸಮಾಜದ ಮೇಲಿನ ಅವರ ಒಲವು ಬಹಳ ಹೆಚ್ಚಾಗಿತ್ತು. ಆದರೆ ಅವರು ಧರ್ಮಾಂಧರಾಗಿರಲಿಲ್ಲ: ಲಜಪತ್‌ರಾಯ್ ತಮ್ಮ ತಂದೆಗೆ ಬಹಳ ನಿಕಟವಾಗಿದ್ದರು. ಅವರ ತಂದೆ ಹಿಂದೂ ಧರ್ಮಿಯರಾಗಿದ್ದರೂ, ಅವರ ಒಲವು ಮಾತ್ರ, ಇಸ್ಲಾಮ್‌ನ ಕಡೆಗಿತ್ತು. ಸಿಖ್ ಧರ್ಮಿಯರಾಗಿದ್ದ ತಮ್ಮ ತಾಯಿಯ ಮೇಲೆ ಲಜಪತ್‌ರಾಯ್ ಅವರಿಗೆ ಅತಿ ಹೆಚ್ಚಿನ ಪ್ರೀತಿಯಿತ್ತು. ಇಂತಹ ಹಿನ್ನೆಲೆಯಲ್ಲಿ ಬೆಳೆದು ಬಂದಿದ್ದ ಲಜಪತ್‌ರಾಯ್ ಅವರನ್ನು ಮುಸ್ಲಿಮರು ಮತ್ತು ಸಿಖ್ಖರು ಸೇರಿದಂತೆ, ಎಲ್ಲ ವರ್ಗಗಳ ಜನರು ಅತ್ಯಂತ ಗೌರವದಿಂದ ಕಾಣುತ್ತಿದ್ದರು.

ಲಜಪತ್‌ರಾಯ್ ೧೮೮೮ರಿಂದ, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದರು. ಅವರು ಗೋಪಾಲಕೃಷ್ಣ ಗೋಖಲೆ ಮತ್ತು ಬಾಲಗಂಗಾಧರ್ ತಿಲಕ್ ಅವರ ನಿಕಟ ಗೆಳೆಯರಾಗಿದ್ದರು. ಅವರಿಬ್ಬರ ಪ್ರೀತಿ ಗೌರವಗಳನ್ನು ಸಂಪಾದಿಸಿದ್ದರು. ದೇಶವು

ಸ್ವಾತಂತ್ರ್ಯ ಪಡೆಯುವ ವಿಷಯದಲ್ಲಿ ತಾಳ್ಮೆ ತೋರಬಾರದೆಂಬ ಬಾಲಗಂಗಾಧರ ತಿಲಕ್ ಅವರ ವಿಚಾರದಲ್ಲಿ, ಅವರು ಸಹಭಾಗಿಯಾಗಿದ್ದರು. ಆದರೆ ಸ್ವಾತಂತ್ರ್ಯವನ್ನು ಗಳಿಸಲು ಶಾಂತಿಯುತ ಮಾರ್ಗವನ್ನು ಅನುಸರಿಸಬೇಕೆಂಬ ಗೋಪಾಲಕೃಷ್ಣ ಗೋಖಲೆಯವರ ನಿಲುವನ್ನೇ ಅವರು ಹೆಚ್ಚು ಸಮರ್ಥಿಸಿದರು.

ಬ್ರಿಟಿಷ್ ಸರ್ಕಾರಕ್ಕೆ ಮತ್ತು ಇಂಗ್ಲೆಂಡಿನ ಜನರಿಗೆ ಭಾರತದ ಧ್ಯೇಯೋದ್ದೇಶಗಳನ್ನು ವಿವರಿಸಲು ಕಾಂಗ್ರೆಸ್ ಸಂಸ್ಥೆ, ಎರಡು ಬಾರಿ, ಲಜಪತ್‌ರಾಯ್ ಅವರನ್ನು ಇಂಗ್ಲೆಂಡ್‌ಗೆ ಕಳಿಸಿಕೊಟ್ಟಿತ್ತು.

ಬಂಗಾಳದ ವಿಭಜನೆಯಾಯಿತು. ಇದರ ಪರಿಣಾಮವಾಗಿ ಸ್ವದೇಶಿ ಚಳವಳಿ, ದೇಶದ ಎಲ್ಲ ಭಾಗಗಳಿಗೂ ವ್ಯಾಪಿಸಿತು. ಲಜಪತ್‌ರಾಯ್ ಪಂಜಾಬ್‌ನಲ್ಲಿ, ಸ್ವದೇಶಿ ಚಳವಳಿಯನ್ನು ಅತಿ ಉತ್ಸಾಹದಿಂದ ಪ್ರತಿಪಾದಿಸತೊಡಗಿದರು. ಇದರಿಂದ ಬ್ರಿಟಿಷ್ ಅಧಿಕಾರಿಗಳು ಭಯಗ್ರಸ್ತರಾದರು. ಭಾರತೀಯ ಸೈನ್ಯದ ಮಾಜಿ ಸೈನಿಕರು ಮತ್ತು ನೇಮಕವಾಗಲಿರುವ ಭಾವಿ ಸೈನಿಕರು, ಲಜಪತ್‌ರಾಯ್ ಅವರ ಸ್ವದೇಶೀ ಚಳವಳಿಯ ಪ್ರಚಾರದ ಪ್ರಭಾವಕ್ಕೊಳಗಾಗಬಹುದೆಂಬುದೇ ಅವರಿಗಿದ್ದ ಚಿಂತೆಯಾಗಿತ್ತು. ಆದ್ದರಿಂದ ೧೮೧೮ರ ನಿಯಮ – ೩ ರ ಪ್ರಕಾರ ಲಜಪತ್‌ರಾಯ್ ಅವರನ್ನು ೧೯೦೭ ರ ನವೆಂಬರ್ ೯ ರಂದು ಮ್ಯಾಂಡಲೆಗೆ ಗಡೀಪಾರು ಮಾಡಲಾಯಿತು. ಇದರಿಂದ ಎಲ್ಲೆಲ್ಲೂ ಪ್ರತಿಭಟನೆಗಳು ಆರಂಭವಾದವು. ತಿಲಕ್ ಅವರ ನಾಯಕತ್ವದಲ್ಲಿನ ತೀವ್ರವಾದಿ ಗುಂಪುಗಳ ಮಾತು ಹಾಗಿರಲಿ, ಗೋಖಲೆ ಮತ್ತು ಇತರ ಉದಾರವಾದಿಗಳು ಸಹ ಈ ಗಡೀಪಾರಿನ ಬಗ್ಗೆ ಪ್ರಬಲವಾದ ಪ್ರತಿಭಟನೆ ವ್ಯಕ್ತಪಡಿಸಿದರು. ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಮೋರ್ಲಿ ಸಹ ಲಜಪತ್‌ರಾಯ್ ಅವರ ಗಡೀಪಾರಿಗೆ ನ್ಯಾಯಬದ್ಧವಾದ ಕಾರಣವಿಲ್ಲವೆಂದು ಒಪ್ಪಿಕೊಂಡರು. ಇದಾದ ಆರು ತಿಂಗಳ ಬಳಿಕ, ಗಡೀಪಾರನ್ನು ರದ್ದುಗೊಳಿಸಲಾಯಿತು. ಲಜಪತ್‌ರಾಯ್, ೧೯೦೭ರಲ್ಲಿ ಸೂರತ್‌ನಲ್ಲಿ, ಕಾಂಗ್ರೆಸ್ ವಿಭಜನೆಗೊಂಡ ಸಮಯಕ್ಕೆ ಸರಿಯಾಗಿ ಭಾರತಕ್ಕೆ ಹಿಂದಿರುಗಿದರು. ಅನಂತರ ಕೆಲವು ವರ್ಷಗಳ ಕಾಲ ಲಜಪತ್‌ರಾಯ್, ರಾಜಕಾರಣದಿಂದ ದೂರವಿದ್ದರು. ಆಗ, ಅವರು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕಲಾಪಗಳಿಗೆ ಹೆಚ್ಚಿನ ಗಮನ ನೀಡಿದರು. ಜಾಗತಿಕ ಯುದ್ಧ ಆರಂಭವಾಗುವುದಕ್ಕೆ ಮೊದಲು, ಅವರು ಇಂಗ್ಲೆಂಡಿಗೆ ತೆರಳಿದರು. ಅಲ್ಲಿಂದ, ಅವರು ಅಮೆರಿಕಾಗೆ ಯಾನ ಮಾಡಿದರು. ಯುದ್ಧ ಅಂತ್ಯಗೊಳ್ಳುವವರೆಗೆ ಅವರು ಅಮೆರಿಕಾದಲ್ಲೇ ಉಳಿದುಕೊಂಡರು. ಜಲಿಯನ್‌ವಾಲಾಬಾಗ್ ಹತ್ಯೆಗಳು ಮತ್ತು ಪಂಜಾಬ್‌ನ ದೌರ್ಜನ್ಯಗಳು ನಡೆದ ದಿನಗಳಲ್ಲಿ, ಅವರು ಹುತಾತ್ಮರಾಗದೇ ಇರುತ್ತಿರಲಿಲ್ಲವೆಂದು ನಾನು ಖಚಿತವಾಗಿ ಹೇಳಲಾರೆ. ಅವರು ೧೯೨೦ರಲ್ಲಿ ಭಾರತಕ್ಕೆ ಹಿಂದಿರುಗಿದರು. ಅವರು ಕಲ್ಕತ್ತಾದಲ್ಲಿ ನಡೆದ ವಿಶೇಷ ಕಾಂಗ್ರೆಸ್

ಅಧಿವೇಶನಗಳು ನಡೆದಾಗ, ಅವರನ್ನು ಕಾಣುವ ಸುಯೋಗ ನನಗೆ ಲಭಿಸಿತ್ತು : ೧೯೨೩ರಲ್ಲಿ ಸಹ ನಾನು ಲಜಪತ್‌ರಾಯ್ ಅವರನ್ನು ಸೋಲನ್‌ನಲ್ಲಿ ಭೇಟಿಯಾಗಿದ್ದೆ. ಆಗ ಅವರು ತೀವ್ರ ಅಸ್ವಸ್ಥತೆಯಿಂದ ಚೇತರಿಸಿಕೊಳ್ಳುತ್ತಿದ್ದರು.

೧೯೨೬ರಲ್ಲಿ ಅವರು ಭಾರತೀಯ ಶಾಸನ ಸಭೆಯ (Indian Legislative Assembly) ಸದಸ್ಯರಾದರು. ಅವರು ಪಂಡಿತ್ ಮೋತಿಲಾಲ್ ನೆಹರೂ ಅವರೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರು. ಆದರೂ ಅವರು ರಾಷ್ಟ್ರದ ಮುಂದಿದ್ದ ಧ್ಯೇಯೋದ್ದೇಶಗಳ ಪ್ರಬಲ ಸಮರ್ಥಕರಾಗಿದ್ದರು. ೧೯೨೮ರ ಅಕ್ಟೋಬರ್ ೩೦ ರಂದು ಬಹಿಷ್ಕಾರಾರ್ಥ ಮೆರವಣಿಗೆಯೊಂದನ್ನು ಲಾಹೋರ್‌ನಲ್ಲಿ ನಡೆಸಲಾಯಿತು. ಈ ಮೆರವಣಿಗೆಯಲ್ಲಿ, ಕೆಲವು ಪೊಲೀಸ್ ಅಧಿಕಾರಿಗಳೂ, ಲಜಪತ್‌ರಾಯ್ ಅವರ ಎದೆಯ ಮೇಲೆ ಲಾಠಿ ಪ್ರಹಾರ ಮಾಡಿದರು, ಎದೆಯ ಮೇಲೆ ಬಿದ್ದ ಪೆಟ್ಟಿನಿಂದ, ಚೇತರಿಸಿಕೊಳ್ಳಲಾಗದೆ, ೧೯೨೮ರ ನವೆಂಬರ್ ೧೭ರಂದು ಅವರು ನಿಧನರಾದರು. ಈ ಮಹಾನ್ ನಾಯಕ ಹಾಗೂ ದೇಶಪ್ರೇಮಿಯನ್ನು ಸ್ಮರಿಸಿ, ಅವರ ನೆನಪು ಭಾರತೀಯರ ಹೃದಯದಲ್ಲಿ ಚಿರಂತನವಾಗಿ ಉಳಿಯುವಂತೆ ನೋಡಿಕೊಳ್ಳುವುದು ಅತ್ಯಂತ ಸೂಕ್ತವೆನಿಸುತ್ತದೆ.

ಇತಿಹಾಸ ಪುನರಾವರ್ತನೆಯಾಗುವುದೆಂದು ಹೇಳುತ್ತಾರೆ. ಇದು ಸ್ವಲ್ಪಮಟ್ಟಿಗೆ ಸತ್ಯ. ಆದರೆ, ಎರಡು ಐತಿಹಾಸಿಕ ಬೆಳವಣಿಗೆಗಳು ಒಂದೇ ರೀತಿ ಆಗುವುದಿಲ್ಲವೆಂಬುದು ಇನ್ನೂ ಹೆಚ್ಚಿನ ಸತ್ಯ. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ಭಾರತದಲ್ಲಿನ ರಾಷ್ಟ್ರೀಯವಾದ ಇವುಗಳ ಬೆಳವಣಿಗೆ ಮತ್ತು ಘರ್ಷಣೆಯಲ್ಲಿ ಏಕರೂಪತೆಯಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯವಾದವು, ಈಸ್ಟ್ ಇಂಡಿಯಾ ಕಂಪೆನಿಯೆಂಬ ಹೆಸರಿನ ಒಂದು ವ್ಯಾಪಾರ ಸಂಸ್ಥೆಯಾಗಿ ಪ್ರಾರಂಭವಾಯಿತು. ಈ ಸಾಮ್ರಾಜ್ಯವಾದ ಸುಮಾರು ೧೫೦ ವರ್ಷಗಳ ಕಾಲ ಮುಂದುವರಿದುಕೊಂಡು ಹೋಯಿತು. ಮೊದಲು ಭಾರತದ ಕೆಲವು ಭಾಗಗಳಲ್ಲಿ ಅದು ತನ್ನ ಆಳ್ವಿಕೆಯನ್ನು ಸ್ಥಾಪಿಸಿಕೊಂಡಿತು. ಕಡೆಗೆ ಅದರ ಆಳ್ವಿಕೆ ಇಡೀ ದೇಶವನ್ನು ವ್ಯಾಪಿಸಿತು. ಬ್ರಿಟಿಷರು ಭಾರತದಲ್ಲಿ ತಮ್ಮ ಹತೋಟಿಯನ್ನು ಸ್ಥಾಪಿಸಿಕೊಳ್ಳುತ್ತಿದ್ದಂತೆ, ಜನರಲ್ಲಿ ರಾಷ್ಟ್ರೀಯ ಭಾವನೆ ಜಾಗೃತಗೊಂಡಿತು. ದೇಶದ ಅನೇಕ ಭಾಗಗಳಲ್ಲಿ ವ್ಯಾಪಿಸುತ್ತಿದ್ದ ಬ್ರಿಟಿಷರ ಸಾಮ್ರಾಜ್ಯವಾದವನ್ನು ಜನರು ವಿರೋಧಿಸಿದರು. ಪ್ರಬಲವಾಗಿ ಪ್ರತಿಭಟಿಸಿದರು. ಕಡೆಗೆ, ಈ ಭಾವನೆ ಭುಗಿಲೆದ್ದು, ೧೮೫೭ರಲ್ಲಿ ಒಂದು ದೊಡ್ಡ ದಂಗೆಯಾಗಿ ಮಾರ್ಪಟ್ಟಿತು. ಬ್ರಿಟಿಷ್ ಇತಿಹಾಸಕಾರರು ಇದನ್ನು 'ಭಾರತೀಯ ಬಂಡಾಯ' ಎಂದು ಕರೆದರು. ಈ ಬಂಡಾಯ ವಿಫಲಗೊಂಡಿತು. ಆಗ, ವಿಜಯಪಥದಲ್ಲಿ ಮುನ್ನಾಗುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯವನ್ನು ಪ್ರಬಲವಾಗಿ ವಿರೋಧಿಸಲು, ಸಮರ್ಥವಾದಂತಹ ಯಾವ ರಾಷ್ಟ್ರೀಯ ಆಂದೋಲನವಾಗಲಿ ಆರಂಭವಾಗುವ

ಸಾಧ್ಯತೆ ಕಂಡುಬರಲಿಲ್ಲ. ಆದರೆ, ಹೊಸ ರಾಷ್ಟ್ರೀಯವಾದವೊಂದು ತಲೆ ಎತ್ತಿಕೊಂಡಿತು. ಮೊದಲು ಈ ಆಂದೋಲನವನ್ನು ತಾತ್ಕಾಲಿಕವಾಗಿಯೇ ಆರಂಭಿಸಲಾಯಿತು. ಇದರ ಭವಿತವ್ಯ ಸಂದೇಹಾಸ್ಪದವಾಗಿಯೇ ಇತ್ತು. ಆದರೆ ಹೀಗೆ ಆರಂಭವಾದ ರಾಷ್ಟ್ರೀಯ ಚಳವಳಿ ೧೯೨೦ರವರೆಗೆ ಬಲಗೊಳ್ಳುತ್ತಾ ಹೋಯಿತು. ನಮ್ಮ ಕಾಲಮಾನದ ಅತ್ಯಂತ ಮಹಾನ್ ವ್ಯಕ್ತಿ ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ಈ ರಾಷ್ಟೀಯವಾದಕ್ಕೆ ಮತ್ತಷ್ಟು ಬಲ ಬಂದಿತು. ಆಗ ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಿರುದ್ಧ ಹೋರಾಟ ನಿರಂತರವಾಗಿ ಮುಂದುವರಿಯಿತು. ಈ ಅವಿರತ ಸಂಘರ್ಷದ ಫಲವಾಗಿ ೧೯೪೭ರ ಆಗಸ್ಟ್ ೧೫ ರಂದು, ಬ್ರಿಟಿಷ್ ಚಕ್ರಾಧಿಪತ್ಯ ಭಾರತೀಯ ಮುಖಂಡರಿಗೆ ಅಧಿಕಾರವನ್ನು ಹಸ್ತಾಂತರಿಸಿತು. ೧೯೫೦ರ ಜನವರಿ ೨೬ ರಂದು ಭಾರತೀಯ ಗಣರಾಜ್ಯದ ಸ್ಥಾಪನೆಯೊಂದಿಗೆ, ಅಧಿಕಾರದ ವರ್ಗಾವಣೆ ವಿಧ್ಯುಕ್ತವಾಗಿ ಮತ್ತು ಅಂತಿಮವಾಗಿ ಕೊನೆಗೊಂಡಿತು.

ಭಾರತ ಸ್ವಾತಂತ್ರ್ಯದ ವೃತ್ತಾಂತವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು: (೧) ಭಾರತದ ಮೇಲೆ ಬ್ರಿಟಿಷರು ಸಾಧಿಸಿದ ವಿಜಯ, (೨) ಸಾಮ್ರಾಜ್ಯವಾದದ ಜಯಭೇರಿಯ ನೆರಳಿನಲ್ಲೇ ಭಾರತದ ರಾಷ್ಟ್ರೀಯವಾದದ ಉಗಮ ಮತ್ತು (೩) ಇವೆರಡರ ನಡುವೆ ಅಂತಿಮ ಹೋರಾಟ. ಈ ನನ್ನ ಉಪನ್ಯಾಸಗಳಲ್ಲಿ ನಾನು ಮೊದಲೆರಡು ಭಾಗಗಳನ್ನು ಮಾತ್ರ ಪ್ರಸ್ತಾಪಿಸಬಯಸುತ್ತೇನೆ. ಭಾರತದ ರಾಷ್ಟ್ರೀಯ ಚಳವಳಿ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದದ ನಡುವಣ ಸಂಘರ್ಷದ ಕಡೇ ಹಂತಕ್ಕೆ ಸಂಬಂಧಿಸಿದ ವಿಷಯಗಳು ನಿಮಗೆ ಸಾಮಾನ್ಯವಾಗಿ ತಿಳಿದೇ ಇರುತ್ತದೆ. ಅದೂ ಅಲ್ಲದೆ, ನನಗೆ ನಿಗದಿಯಾಗಿರುವ ಸಮಯದ ಪರಿಮಿತಿಯೊಳಗೆ, ಆ ಅವಧಿಯಲ್ಲಿ ಬರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲು ಸಾಧ್ಯವಾಗುವುದಿಲ್ಲ.

* * * *

೨. ಭಾರತದ ಮೇಲೆ ಬ್ರಿಟಿಷರ ಜಯ

೧೭೫೭ರಲ್ಲಿ ನಡೆದ ಪ್ಲಾಸಿ ಕದನದಲ್ಲಿ ಕ್ಲೈವ್ ಜಯಶಾಲಿಯಾದನು. ಆಗಿನಿಂದಲೇ, ಭಾರತದ ಮೇಲೆ ಬ್ರಿಟಿಷರ ಜಯ ಆರಂಭವಾಯಿತೆನ್ನಬಹುದು. ಬ್ರಿಟಿಷರು ವಿಜಯದ ಹಾದಿಯಲ್ಲಿ ಹೇಗೆ ಮುನ್ನಡೆದರು ಎಂಬುದನ್ನು ಅರಿಯುವ ಮುನ್ನ, ಈಸ್ಟ್ ಇಂಡಿಯಾ ಕಂಪೆನಿಯ ಇತಿಹಾಸದ ಮೇಲೆ ಪಕ್ಷಿನೋಟ ಹರಿಸುವುದು ಅಗತ್ಯ. ೧೬೦೦ರ ಡಿಸೆಂಬರ್‌ನಲ್ಲಿ ರಾಣಿ ಎಲಿಜಬೆತ್, ಈಸ್ಟ್ ಇಂಡಿಯಾ ಕಂಪೆನಿಗೆ ಶಾಸನಾಧಿಕಾರ (charter) ನೀಡಿದರು. ಈ ಚಾರ್ಟರ್‌ನ ಪ್ರಕಾರ, ಕಂಪೆನಿಯ ಆಡಳಿತ ನಿರ್ವಹಣೆಗಾಗಿ, ಕಂಪೆನಿಯು ತನ್ನದೇ ಆದ ಆಡಳಿತ ಮಂಡಳಿಯನ್ನು ಹೊಂದಿತ್ತು. ಮಂಡಳಿಯು ಗವರ್ನರ್, ಡೆಪ್ಯುಟಿ ಗವರ್ನರ್ ಮತ್ತು ಸಮಿತಿಯ ಇಪ್ಪತ್ನಾಲ್ಕು ಸದಸ್ಯರನ್ನು ಒಳಗೊಂಡಿತ್ತು. ಆದರೆ ಕಂಪೆನಿಯ ಆಂತರಿಕ ಆಡಳಿತ ನಿರ್ವಹಣೆಯ ನಿಯಂತ್ರಣಾಧಿಕಾರ, ಬ್ರಿಟಿಷ್ ಪ್ರಭುಗಳ ಮತ್ತು ಪ್ರಿವಿ ಕೌನ್ಸಿಲ್‌ನ ಕೈಯ್ಯಲ್ಲಿತ್ತು.

ಈಸ್ಟ್ ಇಂಡಿಯಾ ಕಂಪೆನಿ, ಮೊದಲ ನೂರು ವರ್ಷಗಳ ತನ್ನ ಇತಿಹಾಸದಲ್ಲಿ ನಾನಾ ಬದಲಾವಣೆಗಳನ್ನು ಕಂಡಿತು. ಇಂಗ್ಲೆಂಡಿನಲ್ಲಿ ಸರ್ಕಾರ ಬದಲಾಗುತ್ತಿದ್ದಂತೆ, ಅದಕ್ಕನುಗುಣವಾಗಿ ಅದು ತನ್ನ ಸ್ವರೂಪದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತಿತ್ತು: ಒಂದನೆಯ ಚಾರ್ಲ್ಸ್ ಹಣದ ಮುಗ್ಗಟ್ಟಿನಿಂದ ಬಹಳ ಹತಾಶನಾಗಿದ್ದನು. ಅವನು ತನಗಿದ್ದ ಹಣದ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕಾಗಿ, ಪ್ರತಿಸ್ಪರ್ಧಿ ಕಂಪೆನಿಯೊಂದಕ್ಕೆ ಉತ್ತೇಜನ ನೀಡಿದನು. ಅವನು ಈಸ್ಟ್ ಇಂಡಿಯಾ ವ್ಯಾಪಾರ–ವಹಿವಾಟಿಗಾಗಿ ಆ ಕಂಪೆನಿಗೆ ಲೈಸೆನ್ಸ್ ಕೊಟ್ಟನು. ಅನಂತರ ಈ ಎರಡೂ ಕಂಪೆನಿಗಳ ನಡುವೆ ಪೈಪೋಟಿ ಹೆಚ್ಚಿತು. ಅವೆರಡರ ನಡುವಣ ಸಂಘರ್ಷ ದೀರ್ಘಕಾಲದವರೆಗೆ ಮುಂದುವರಿಯಿತು. ೧೬೫೭ರಲ್ಲಿ, ಕ್ರಾಮ್‌ವೆಲ್, ಹೊಸ ಚಾರ್ಟರ್ ಒಂದನ್ನು ನೀಡುವ ಮೂಲಕ ಈ ಎರಡು ಕಂಪೆನಿಗಳ ನಡುವಣ ಘರ್ಷಣೆಯನ್ನು ಅಂತ್ಯಗೊಳಿಸಿದನು. ಈ ಹೊಸ ಚಾರ್ಟರ್‌ನ ಮೇರೆಗೆ, ಎರಡು ಕಂಪೆನಿಗಳೂ ಐಕ್ಯಗೊಂಡು ಒಂದೇ ಕಂಪೆನಿಯಾಯಿತು.

ಆಗ ಯಾವುದೇ ಪೈಪೋಟಿಗೂ ಅವಕಾಶವಿಲ್ಲದಂತೆ ಅದು ಜಾಯಿಂಟ್ ಸ್ಟಾಕ್ ಕಾರ್ಪೊರೇಷನ್ ಆಗಿ ಮುಂದುವರಿಯಿತು. ಎರಡನೆಯ ಚಾರ್ಲ್ಸ್‌ಗೆ

ಈ ಕಂಪೆನಿಯ ಬಗ್ಗೆ ವಿಶ್ವಾಸ ಹಾಗೂ ಸದ್ಭಾವನೆ ಮೂಡಿತು. ಆತನು, ಈ ಕಂಪೆನಿಯ ಏಕಸ್ವಾಮ್ಯಕ್ಕೆ ಖಾತರಿ ದೊರೆಯುವ ಶಾಸನಾಧಿಕಾರವನ್ನು ಸಹ ಅದಕ್ಕೆ ನೀಡಿದನು. ಕೋಟೆಗಳನ್ನು ನಿರ್ಮಿಸಿ, ಅವುಗಳ ಕಾವಲಿಗಾಗಿ ಸೈನಿಕರನ್ನು ನಿಯೋಜಿಸುವ ಅಧಿಕಾರವನ್ನು ಸಹ ಈ ಕಂಪೆನಿ ಪಡೆಯಿತು. ೧೬೮೮ರ ಕ್ರಾಂತಿ ಸಂಭವಿಸಿ, ಬ್ರಿಟಿಷ್ ಪಾರ್ಲಿಮೆಂಟ್ ಪ್ರಬಲವಾಯಿತು. ಆಗ, ಅದು ಒಂದು ಕಾಯ್ದೆಯನ್ನು ಅಂಗೀಕರಿಸಿ, ಹೊಸ ಈಸ್ಟ್ ಇಂಡಿಯಾ ಕಂಪೆನಿಯ ಸ್ಥಾಪನೆಗೆ ಎಡೆ ಮಾಡಿಕೊಟ್ಟಿತು. ಸುದೈವದಿಂದ ೧೭೦೮ರಲ್ಲಿ ಎರಡು ಕಂಪೆನಿಗಳೂ ವಿಲೀನಗೊಂಡು, ಒಂದೇ ಕಂಪೆನಿಯಾಗಿ ರೂಪುಗೊಂಡಿತು. ಆದ್ದರಿಂದ ತನ್ನದೇ ಆದ ಸರ್ಕಾರದಿಂದ ಈ ಕಂಪೆನಿಗೆ ಯಾವ ತೊಂದರೆಯೂ ಉಂಟಾಗಲಿಲ್ಲ. ಆದರೂ ಈ ಕಂಪೆನಿಯು, ಇತರ ಐರೋಪ್ಯ ದೇಶಗಳಿಂದ ಅಂದರೆ ಪೋರ್ಚುಗಲ್, ಹಾಲೆಂಡ್ ಮತ್ತು ಫ್ರಾನ್ಸ್‌ನವರಿಂದ ತೀವ್ರ ಪೈಪೋಟಿಯನ್ನು ಎದುರಿಸಬೇಕಾಯಿತು, ಸುಯೋಗದಿಂದ, ಈಸ್ಟ್ ಇಂಡಿಯಾ ಕಂಪೆನಿಗೆ, ಪರಿಸ್ಥಿತಿ ತಾನಾಗಿಯೇ ಅನುಕೂಲವಾಯಿತು. ಹೇಗೆಂದರೆ, ಪೋರ್ಚುಗೀಸರಿಗೆ, ಡಚ್ಚರನ್ನು ಪೈಪೋಟಿಯಿಂದ ಹೊರದೂಡಲು ಸಾಧ್ಯವಾಯಿತು; ಅಷ್ಟೇ ಅಲ್ಲದೆ ಆ ವೇಳೆಗಾಗಲೇ ಪೋರ್ಚುಗೀಸರು ಇಂಡೊನೇಷಿಯಾ ಮತ್ತು ಮಲಯಾದಲ್ಲಿ ತಮ್ಮ ವ್ಯಾಪಾರ ವಹಿವಾಟುಗಳನ್ನು ಸುಸ್ಥಿರಪಡಿಸಿಕೊಂಡಿದ್ದರು. ಈ ಕಾರಣದಿಂದ ಅವರು ಭಾರತದಲ್ಲಿನ ತಮ್ಮ ಕಾರ್ಯಕ್ಷೇತ್ರದಿಂದ ನಿರ್ಗಮಿಸಿದರು.

ಈಸ್ಟ್ ಇಂಡಿಯಾ ಕಂಪೆನಿ, ತನ್ನ ಮೊಟ್ಟಮೊದಲ ವಸಾಹತುವನ್ನು ೧೬೫೦ರಲ್ಲಿ ಸೂರತ್‌ನಲ್ಲಿ ಸ್ಥಾಪಿಸಿಕೊಂಡಿತು. ಆಗ ಮುಘಲರು ಮತ್ತು ಮರಾಠರು ತುಂಬ ಪ್ರಬಲರಾಗಿದ್ದು ಉನ್ನತ ಸ್ಥಿತಿಯಲ್ಲಿದ್ದರು. ಈ ಎರಡೂ ಸಾಮ್ರಾಜ್ಯಗಳ ಏಜೆಂಟರುಗಳು ಕಂಪೆನಿಯ ಬಗ್ಗೆ ಆಗಾಗ ಬಹಳ ಅಸಮಾಧಾನವನ್ನು ತೋರಿಸುತ್ತಿದ್ದರು. ಇದರಿಂದ, ಕಂಪೆನಿ ಬಹಳ ಅನಿಶ್ಚಿತ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತ್ತು.

ಬ್ರಿಟಿಷರು ತಮ್ಮ ವಸಾಹತು ಸ್ಥಾಪನೆಗಾಗಿ, ಕೋರಮಂಡಲ್ ಕರಾವಳಿಯಲ್ಲಿದ್ದ ಅನೇಕ ಬಂದರುಗಳಲ್ಲಿ ಪ್ರಯತ್ನ ಮಾಡಿ ನೋಡಿದ ಬಳಿಕ, ೧೬೩೯ರಲ್ಲಿ ಮದ್ರಾಸ್‌ನಲ್ಲಿ ತಮ್ಮ ನೆಲೆಯನ್ನು ಸ್ಥಾಪಿಸಿಕೊಂಡರು. ಅಲ್ಲಿ, ಅವರು ಪೋರ್ಟ್ ಸೇಂಟ್ ಜಾರ್ಜ್ ನಿರ್ಮಿಸಿದರು. ಆಗ ಈಸ್ಟ್ ಇಂಡಿಯಾ ಕಂಪೆನಿ, ಭಾರತದಲ್ಲಿ ತಳ ಊರಿದಂತಾಯಿತು. ೧೬೫೦ ರಲ್ಲಿ ಬಂಗಾಳದಲ್ಲಿ ವ್ಯಾಪಾರ ನಡೆಸಲು ಕಂಪೆನಿಗೆ ಅನುಮತಿ ದೊರೆಯಿತು. ಆಗ ಬಂಗಾಳದಲ್ಲಿದ್ದ ಅದರ ಸಂಸ್ಥಾಪನೆಗಳನ್ನು ಮದ್ರಾಸ್‌ನಲ್ಲಿದ್ದ ಫೋರ್ಟ್ ಸೇಂಟ್ ಜಾರ್ಜ್‌ನ (Fort St. George) ನಿಯಂತ್ರಣದಲ್ಲಿಡಲಾಗಿತ್ತು. ದೀರ್ಘಕಾಲ ಪ್ರಯತ್ನಿಸಿದ ನಂತರ ಬಂಗಾಳದ

ನವಾಬರಿಂದ ಕಲ್ಕತ್ತಾ ಸೇರಿದಂತೆ, ಮೂರು ಗ್ರಾಮಗಳನ್ನು ಗೇಣಿಗೆ ತೆಗೆದುಕೊಳ್ಳಲು ಕಂಪೆನಿಗೆ ಸಾಧ್ಯವಾಯಿತು. ಅಲ್ಲಿ ಬ್ರಿಟಿಷರು ಫೋರ್ಟ್ ವಿಲಿಯಮ್ (Fort William) ನಿರ್ಮಿಸಿದರು. ೧೬೬೮ ರಲ್ಲಿ ಎರಡನೆಯ ಚಾರ್ಲ್ಸ್ ದೊರೆ ಬಾಂಬೆಯನ್ನು ಕಂಪೆನಿಗೆ ವರ್ಗಾಯಿಸಿದನು. ಇದನ್ನು ಚಾರ್ಲ್ಸ್, ಬಳುವಳಿಯಾಗಿ ಪಡೆದಿದ್ದನು. ಹದಿನೆಂಟನೆಯ ಶತಮಾನದ ಮೊದಲಾರ್ಧದ ಅವಧಿಯಲ್ಲಿ, ಕಂಪೆನಿಯು ಈ ಮೂರು ಕೇಂದ್ರಗಳಿಂದ ತನ್ನ ವ್ಯಾಪಾರವನ್ನು ನಡೆಸುತ್ತಿತ್ತು. ೧೭೦೮ರಲ್ಲಿ ಕಂಪೆನಿಯು ಭಾರತಕ್ಕೆ ೬೧,೦೦೦ ಪೌಂಡ್‌ಗಳಷ್ಟು ಮೌಲ್ಯದ ಇಂಗ್ಲಿಷ್ ಸರಕುಗಳನ್ನು ರಫ್ತು ಮಾಡಿತು. ೧೭೪೮ರ ವೇಳೆಗೆ, ಈ ರಫ್ತು ೧,೨೭,೦೦೦ ಪೌಂಡ್‌ಗಳ ಮೌಲ್ಯಕ್ಕೆ ಏರಿತು. ಇದೇ ಅವಧಿಯಲ್ಲಿ ಭಾರತದಿಂದ ಇಂಗ್ಲೆಂಡ್ ಆಮದು ಮಾಡಿಕೊಂಡ ಸರಕುಗಳ ಮೌಲ್ಯ ೫೦೦,೦೦೦ ಪೌಂಡ್‌ಗಳಿಂದ ಸುಮಾರು ಹತ್ತು ಲಕ್ಷ ಪೌಂಡ್‌ಗಳಿಗೆ ಏರಿತು. ಕಂಪೆನಿಯ ಏಳಿಗೆಯಿಂದ ಬ್ರಿಟಿಷ್ ಸರ್ಕಾರಕ್ಕೆ ಬಹಳ ಲಾಭವಾಯಿತು. ಅದು ೧೭೫೦ರಲ್ಲಿ ಕಂಪೆನಿಯಿಂದ ೪೦ ಲಕ್ಷ ಪೌಂಡ್‌ಗಳಷ್ಟು ಸಾಲವನ್ನು ಪಡೆಯಿತು. ಆದರೆ ತಾನು ಮಾಡಿಕೊಂಡ ಹೆಚ್ಚಿಗೆ ಸರಕುಗಳ ಆಮದಿಗೆ ಹಣ ಪಾವತಿ ಮಾಡಲು, ಕಂಪೆನಿಯು ಬ್ರಿಟನ್‌ನಿಂದ ಬಂಗಾರ ಮತ್ತು ಬೆಳ್ಳಿಯನ್ನು ಪಡೆದುಕೊಳ್ಳಬೇಕಾಯಿತು. ಗಣನೀಯ ಮೊತ್ತದಲ್ಲಿ ಆದಾಯವನ್ನು ತರುವಂತಹ ಕ್ಷೇತ್ರಗಳನ್ನು ಹತೋಟಿಯಲ್ಲಿಟ್ಟುಕೊಂಡರೆ, ಆಮದನ್ನು ತಡೆಗಟ್ಟಬಹುದೆಂದು ಕಂಪೆನಿಯ ಆಡಳಿತ ವ್ಯವಸ್ಥೆ ಯಾವಾಗಲೂ ಯೋಚಿಸುತ್ತಿತ್ತು. ಆ ಮೂಲಕ ಕಂಪೆನಿ ಮತ್ತಷ್ಟು ಏಳಿಗೆ ಹೊಂದಲು ಅವಕಾಶವಾಗುವುದೆಂದು ಅದು ಭಾವಿಸಿತ್ತು. ಕಂಪೆನಿಯ ವ್ಯವಹಾರಗಳನ್ನು ನಿಯಂತ್ರಿಸುತ್ತಿದ್ದ ಸರ್ ಜೊಸಿಯಾ ಚೈಲ್ಡ್ (Sir Josiah Child) ಈ ನಿಟ್ಟಿನಲ್ಲಿ ಪ್ರಯತ್ನವನ್ನು ಪ್ರಾರಂಭಿಸಿದರು. ಆದರೆ ಇಂತಹ ಪ್ರಯತ್ನಕ್ಕೆ ಕಾಲ ಇನ್ನೂ ಪರಿಪಕ್ವವಾಗಿರದಿದ್ದ ಕಾರಣ, ಅವರ ಶ್ರಮ ನಿರರ್ಥಕವಾಯಿತಷ್ಟೇ ಅಲ್ಲ, ವಿನಾಶಕಾರಿಯಾಗಿ ಪರಿಣಮಿಸಿತು. ಅವರು ಇಂಗ್ಲೆಂಡಿನ ಪ್ರಭುಗಳಿಗೆ ಶರಣಾಗಿ ಭಾರಿ ಮೊತ್ತದಲ್ಲಿ ದಂಡವನ್ನು ಸಹ ತೆತ್ತು, ಕಂಪೆನಿಯು ಒಂದು ವ್ಯಾಪಾರ ಸಂಸ್ಥೆಯಾಗಿ ಮತ್ತೆ ತನ್ನ ಕಾರ್ಯಕಲಾಪಗಳನ್ನು ಆರಂಭಿಸಲು ಅವಕಾಶ ಮಾಡಿಕೊಡಬೇಕಾಯಿತು.

ಹದಿನೆಂಟನೆಯ ಶತಮಾನದ ಆರಂಭದಲ್ಲಿ ಔರಂಗಜೇಬ್ ತೀರಿಕೊಂಡನು. ಅವನ ಮರಣಾನಂತರ, ಮುಘಲ್ ಸಾಮ್ರಾಜ್ಯ ಅತಿ ಬೇಗನೆ ವಿಚ್ಛಿದ್ರಗೊಂಡಿತು. ಹದಿನೆಂಟನೆಯ ಶತಮಾನದ ಮಧ್ಯ ಭಾಗದ ವೇಳೆಗೆ ಕೇಂದ್ರೀಯ ಅಧಿಕಾರ ವ್ಯವಸ್ಥೆ ಕಣ್ಮರೆಯಾಯಿತು. ದೇಶಾದ್ಯಂತ ಗೊಂದಲ ಹಾಗೂ ಅರಾಜಕತೆ ತಾಂಡವವಾಡುತ್ತಿತ್ತು. ೧೭೩೯ರಲ್ಲಿ ನಾದಿರ್‌ಶಾ ಮತ್ತು ೧೭೪೮ ರಿಂದ ೧೭೭೩ರ ನಡುವಣ ಅವಧಿಯಲ್ಲಿ ಅಹ್ಮದ್ ಶಾ ಅಬ್ದಾಲಿ, ಭಾರತದ ಮೇಲೆ ದಾಳಿ ಮಾಡಿದರು.

ಕುಸಿಯತೊಡಗಿದ್ದ ಸಾಮ್ರಾಜ್ಯವನ್ನು ವಿನಾಶದಂಚಿಗೆ ಒಯ್ದರು. ಪ್ರಬಲರಾಗಿದ್ದ ಮರಾಠರು ಗತಿಶೀಲತೆಯನ್ನು ಕಳೆದುಕೊಂಡಿದ್ದರು. ಮರಾಠ ಸಾಮ್ರಾಜ್ಯ, ಸ್ವಾರ್ಥಪರ ಗುಂಪುಗಳಾಗಿ ವಿಭಜನೆಗೊಂಡು, ಛಿದ್ರವಾಗಿತ್ತು. ಇಂತಹ ಪರಿಸ್ಥಿತಿಯಿದ್ದಾಗ, ೧೭೫೭ರಲ್ಲಿ ಪ್ಲಾಸಿ ಕದನ ನಡೆಯಿತು. ಈ ಕದನದಿಂದ ಬ್ರಿಟನ್ ಮತ್ತು ಭಾರತದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಯಿತು.

ಬ್ರಿಟಿಷರು ತಮ್ಮ ಅಧಿಕಾರ ಹಾಗೂ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಇದರಿಂದ ಬಂಗಾಳದ ನವಾಬ ಸಿರಾಜ್–ಉದ್–ದೌಲನಿಗೆ ಭಯ ಆವರಿಸಿತ್ತು. ಬ್ರಿಟಿಷರು ನವಾಬನ ಅನುಮತಿ ಪಡೆಯದೆ ಕಲ್ಕತ್ತಾದಲ್ಲಿ ಕೋಟೆಗಳನ್ನು ನಿರ್ಮಿಸಿಬಿಟ್ಟಿದ್ದರು. ಆದ್ದರಿಂದ ನವಾಬನು ಹಠಾತ್ತನೆ ಆಕ್ರಮಣ ನಡೆಸಿ ಫೋರ್ಟ್ ವಿಲಿಯಮ್‌ಅನ್ನು ತನ್ನ ವಶಕ್ಕೆ ತೆಗೆದುಕೊಂಡನು. ಆದರೆ, ತನ್ನ ಪಡೆಗಳೊಂದಿಗೆ ಪಲಾಯನ ಮಾಡಲು ನವಾಬನು, ಇಂಗ್ಲಿಷ್ ಗವರ್ನರ್‌ಗೆ ಅವಕಾಶ ಮಾಡಿಕೊಟ್ಟನು. ಅಷ್ಟರಲ್ಲಿ ಗವರ್ನರ್ ಮದ್ರಾಸ್‌ನಲ್ಲಿದ್ದ ಕ್ಲೈವ್‌ಗೆ ತುರ್ತಾಗಿ ಒಂದು ಮನವಿ ಕಳಿಸಿದನು. ಈ ಮನವಿಗೆ ಓಗೊಟ್ಟು, ಕ್ಲೈವ್ ಕೂಡಲೇ ತನ್ನ ಪಡೆಗಳೊಂದಿಗೆ ಕಲ್ಕತ್ತಾಗೆ ಧಾವಿಸಿದನು. ಇದರಿಂದಾಗಿ ೧೭೫೭ರ ಜೂನ್‌ನಲ್ಲಿ ಪ್ಲಾಸಿ ಕದನ ನಡೆಯಿತು. ಬ್ರಿಟಿಷರು ಸಿರಾಜ್–ಉದ್–ದೌಲನ ಪ್ರಧಾನ ಸೇನಾನಿಗೆ ಆಮಿಷ ತೋರಿಸಿ, ಅವನನ್ನು ತಮ್ಮ ಕಡೆಗೆ ಸೆಳೆದುಕೊಂಡರು. ಪ್ರಧಾನ ಸೇನಾನಿಯ ವಿಶ್ವಾಸಘಾತಕತನದಿಂದ ನವಾಬನಿಗೆ ಹೀನಾಯವಾದ ಸೋಲುಂಟಾಯಿತು. ಹೋರಾಟದಲ್ಲಿ ಉಂಟಾದ ಸಾವು–ನೋವು ಸಂಖ್ಯೆಯಿಂದಲೇ ಇದು ವೇದ್ಯವಾಗುತ್ತದೆ. ಬ್ರಿಟಿಷರ ಕಡೆ ಕೇವಲ ಏಳು ಮಂದಿ ಐರೋಪ್ಯರು ಮತ್ತು ಹದಿನಾರು ಮಂದಿ ಸೈನಿಕರು ಮಡಿದರು. ಗಾಯಗೊಂಡವರಲ್ಲಿ ಕೇವಲ ಹದಿನಾರು ಮಂದಿ ಐರೋಪ್ಯರು ಮತ್ತು ಮೂವತ್ತಾರು ಮಂದಿ ಸಿಪಾಯಿಗಳಿದ್ದರು. ಬ್ರಿಟಿಷರು ಈ ಪ್ರದೇಶದಲ್ಲಿ ಭಾರಿ ಮೊತ್ತದ ಕಪ್ಪ–ಕಾಣಿಕೆಗಳನ್ನು ಗಿಟ್ಟಿಸಿಕೊಂಡರು. ಒಟ್ಟಿನಲ್ಲಿ ಈ ಪ್ರದೇಶವನ್ನು ಚೆನ್ನಾಗಿ ದೋಚಿದರು. ಅವರು ಮಿರ್‌ಜಾಫರನನ್ನು ನವಾಬನನ್ನಾಗಿ ಮಾಡಿದರು. ಮೀರ್ ಜಾಫರ್ ತನ್ನ ಅಧಿಕಾರವನ್ನು ಸುದೃಢಪಡಿಸಿಕೊಳ್ಳಲು ಪ್ರಯತ್ನಿಸಿದಾಗ, ಅವನ ಸ್ಥಾನದಲ್ಲಿ ಆತನ ಅಳಿಯ ಮೀರ್ ಕಾಸಿಮ್‌ನನ್ನು ೧೭೬೦ರಲ್ಲಿ ನವಾಬನನ್ನಾಗಿ ನೇಮಿಸಿದರು. ಆದರೆ ಮೀರ್ ಕಾಸಿಮ್, ಬ್ರಿಟಿಷರ ಕೈಗೊಂಬೆಯಾಗಿ ವರ್ತಿಸಲು ನಿರಾಕರಿಸಿದನು. ಈಸ್ಟ್ ಇಂಡಿಯಾ ಕಂಪೆನಿಯ ನೌಕರರಿಂದ ಪ್ರಜೆಗಳ ಸುಲಿಗೆಯಾಗುವುದನ್ನು ಮತ್ತು ತಮ್ಮಿಂದ ಬಂದ ವರಮಾನವನ್ನು ಈ ನೌಕರರು ಸ್ವಂತಕ್ಕೆ ಬಳಸಿಕೊಳ್ಳುವುದನ್ನು ಮೀರ್ ಕಾಸಿಮ್ ಬಲವಾಗಿ ಪ್ರತಿರೋಧಿಸಿದನು. ೧೭೬೪ರಲ್ಲಿ ಬಕ್ಸಾರ್‌ನಲ್ಲಿ ಒಂದು ಕದನ ನಡೆಯಿತು. ಆಗ ಪುನಃ ಬ್ರಿಟಿಷರಿಗೆ ನಿರ್ಣಾಯಕ ಜಯ ಲಭಿಸಿತು. ಈ ಕದನದ ಬಳಿಕ, ಕ್ಲೈವ್

ತನ್ನ ಕೈಗೊಂಬೆಯಾಗಿದ್ದ ಶಾಹ್ ಆಲಮ್ ಚಕ್ರವರ್ತಿಯಿಂದ ಬಂಗಾಳ, ಬಿಹಾರ್ ಮತ್ತು ಒರಿಸ್ಸಾದ ದಿವಾನಿಯನ್ನು ಪಡೆದುಕೊಂಡನು. ಹೀಗೆ, ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಜನ್ಮ ತಳೆಯಿತು.

ತಾರಾಚಂದ್ "ಹಿಸ್ಟರಿ ಆಫ್ ಫ್ರೀಡಮ್ ಮೂವ್‌ಮೆಂಟ್ ಇನ್ ಇಂಡಿಯಾ" ಎಂಬ ತಮ್ಮ ಪುಸ್ತಕದ ಮೊದಲ ಸಂಪುಟದಲ್ಲಿ ಹೀಗೆ ಹೇಳಿದ್ದಾರೆ : "ಬಂಗಾಳದ ಮೇಲೆ ಇಂಗ್ಲಿಷರು ವಿಜಯ ಸಾಧಿಸಿದ ರೀತಿ ಜಾಗತಿಕ ಇತಿಹಾಸದಲ್ಲೇ ಅಭೂತಪೂರ್ವ. ಏಕೆಂದರೆ ಈ ಯುದ್ಧ ಬರಿ ವ್ಯಾಪಾರ ನಿಗಮವೊಂದರ (Trading Corporation) ವರ್ತಕರ ನಿರ್ದೇಶನದಲ್ಲೇ ನಡೆದ ಯುದ್ಧವಾಗಿತ್ತು. ಈ ವರ್ತಕರಲ್ಲಿ ಅನೇಕರು ಗುಮಾಸ್ತರಾಗಿದ್ದರು. ಅವರು ಕಾರಕೂನಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಯುದ್ಧ ಮಾಡಿದ ಅನುಭವವಾಗಲಿ ಅಥವಾ ಯುದ್ಧೋಪಾದಿಯ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ ಅನುಭವವಾಗಲಿ ಇರಲಿಲ್ಲ. ಅವರುಗಳು ಸ್ವಯಂ ಪ್ರೇರಣೆಯಿಂದ ಸೈನಿಕರಾಗಿ ಕೆಲಸ ಮಾಡಲು ಮುಂದೆ ಬಂದಿದ್ದರು". ಬಂಗಾಳ ಬಹಳ ವಿಶಾಲವಾದ ಪ್ರದೇಶವಾಗಿತ್ತು. ಆದ್ದರಿಂದ ತಕ್ಷಣವೇ ಅದರ ಆಡಳಿತವನ್ನು ತೆಗೆದುಕೊಳ್ಳಲು ಬ್ರಿಟಿಷರು ಸಿದ್ಧರಿರಲಿಲ್ಲ. ಆದ್ದರಿಂದ ಕ್ಲೈವ್ ಕೆಲವು ಮಂದಿ ಭಾರತೀಯರನ್ನು ತನ್ನ ಕೈಗೊಂಬೆಗಳಾಗಿ ಮಾಡಿಕೊಂಡು, ಅವರ ಮೂಲಕ ತನ್ನ ಉದ್ದೇಶಗಳನ್ನು ಸಾಧಿಸಿಕೊಳ್ಳಲಿಚ್ಛಿಸಿದನು. ಇದರಿಂದ ಕ್ಲೈವ್‌ಗೆ ಮತ್ತು ಕಂಪೆನಿಯ ನೌಕರರಿಗೆ ಬಹಳ ಲಾಭವಾಯಿತು. ವಂಚನೆ, ಬೆದರಿಕೆ ಮತ್ತು ಬಲಾತ್ಕಾರದ ಮೂಲಕ ಅವರೆಲ್ಲರೂ ಅಪಾರ ಹಣ ಮತ್ತು ಸಂಪತ್ತು ಮಾಡಿಕೊಂಡರು. ೧೭೫೭ ರಿಂದ ೧೭೬೬ರವರೆಗೆ ಬಂಗಾಳದ ರಾಜರುಗಳಿಂದ ಮತ್ತು ಬೇರೆ ವ್ಯಕ್ತಿಗಳಿಂದ ೬ ಕೋಟಿ ರೂಪಾಯಿಗಳಷ್ಟು ಹಣ ಬ್ರಿಟಿಷರ ಪಾಲಾಯಿತೆಂದು ಅಂದಾಜು ಮಾಡಲಾಗಿದೆ. ವರ್ಷಕ್ಕೆ ೩೦,೦೦೦ ಪೌಂಡ್‌ಗಳಷ್ಟು ಜಹಗಿರ್ ಪಡೆಯುತ್ತಿದ್ದ ಕ್ಲೈವ್ ತನ್ನ ಮೂವತ್ನಾಲ್ಕನೆಯ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು. ಅವನು ತನ್ನೊಂದಿಗೆ ೪೦,೦೦೦ ಪೌಂಡ್‌ಗಳಿಗೂ ಹೆಚ್ಚಿನ ಪ್ರಮಾಣದಷ್ಟು ಸಂಪತ್ತನ್ನು ಇಂಗ್ಲೆಂಡ್‌ಗೆ ಕೊಂಡೊಯ್ದನಲ್ಲದೆ, ತನ್ನ ನೆಂಟರಿಷ್ಟರಿಗೂ ೫೦,೦೦೦ ಪೌಂಡ್‌ಗಳಷ್ಟು ಸಂಪತ್ತನ್ನೊಯ್ದನು.

೧೭೬೧ರ ಜನವರಿಯಲ್ಲಿ ಅಹ್ಮದ್‌ಶಾಹ್ ಅಬ್ದಲಿ ನೇತೃತ್ವದಲ್ಲಿನ ಮುಸ್ಲಿಮ್ ಸಮ್ಮಿಶ್ರ ಪಂಗಡದ ಮತ್ತು ಪೇಶ್ವ ನೇತೃತ್ವದ ಮರಾಠ ಪಡೆಗಳ ನಡುವೆ ಹೋರಾಟ ನಡೆಯಿತು. ಇದರಲ್ಲಿ ಮರಾಠರು ದಾರುಣವಾಗಿ ಪರಾಭವಗೊಂಡರು.

ಕರ್ನಾಟಕದಲ್ಲಿ ತೀವ್ರ ಪ್ರತಿಸ್ಪರ್ಧಿಗಳಾಗಿದ್ದ ಮತ್ತು ಹಿಂದೊಮ್ಮೆ ಮದ್ರಾಸ್‌ನಲ್ಲಿ ಫೋರ್ಟ್ ಸೇಂಟ್ ಜಾರ್ಜ್‌ಅನ್ನು ಆಕ್ರಮಿಸಿಕೊಂಡಿದ್ದ ಫ್ರೆಂಚರು ಸಹ ೧೭೫೫ರಲ್ಲಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿದ ಬಳಿಕ, ಸೋಲನ್ನು ಅನುಭವಿಸಿದರು. ಅವರಿಗೆ

ಪ್ಯಾರಿಸ್‌ನಲ್ಲಿದ್ದ ಫ್ರೆಂಚ್ ಸರ್ಕಾರ ಯಾವುದೇ ಬೆಂಬಲವನ್ನು ಕೊಡಲಿಲ್ಲ. ಇವೆಲ್ಲ ಫ್ರೆಂಚರ ಸೋಲಿಗೆ ಕಾರಣವಾಗಿತ್ತು. ಇದರಿಂದ ಬ್ರಿಟಿಷರಿಗಿದ್ದ ಎಲ್ಲ ಅಡೆತಡೆಗಳು ದೂರವಾದವು. ಅವರು ಇಂತಹ ಪರಿಸ್ಥಿತಿಯ ಪೂರ್ಣ ಪ್ರಯೋಜನ ಪಡೆದರು. ಬ್ರಿಟಿಷರು, ಸ್ಥಾನಿಕ ರಾಜರುಗಳು ಮತ್ತು ಅಧಿಪತಿಗಳೊಂದಿಗೆ ತಾತ್ಕಾಲಿಕ ಮೈತ್ರಿಯನ್ನು ಏರ್ಪಡಿಸಿಕೊಳ್ಳುತ್ತಿದ್ದರು. ಇತರ ಎದುರಾಳಿಗಳನ್ನು ಪರಾಭವಗೊಳಿಸುವುದೇ ಅವರ ಈ ಮೈತ್ರಿಯ ಉದ್ದೇಶವಾಗಿರುತ್ತಿತ್ತು. ತಮ್ಮ ಉದ್ದೇಶ ಈಡೇರಿದ ಬಳಿಕ, ಅವರು ತಮ್ಮ ಮಿತ್ರಕೂಟದವರನ್ನು ಮುಗಿಸಿಬಿಡುತ್ತಿದ್ದರು. ಅಥವಾ ಅವರನ್ನು ಸಹಾಯಕರಾಗಿರುವಂತೆ ತಮ್ಮ ಅಧೀನದಲ್ಲಿಟ್ಟುಕೊಳ್ಳುತ್ತಿದ್ದರು.

ಕ್ಲೈವ್‌ನ ವಿಜಯದ ಸರಣಿ ಮತ್ತು ಅವನು ಕೊಳ್ಳೆ ಹೊಡೆದ ಸಂಪತ್ತು, ಇಂಗ್ಲೆಂಡ್‌ನ ಗಮನವನ್ನು ಸೆಳೆಯಿತು. ಆದ್ದರಿಂದ ಇಂಡಿಯಾದತ್ತ ಇನ್ನೂ ಹೆಚ್ಚಿನ ಗಮನ ಹರಿಸಬೇಕೆಂದು ಇಂಗ್ಲೆಂಡ್‌ನಲ್ಲಿ ಭಾವಿಸಲಾಯಿತು. ೧೭೭೨ರಲ್ಲಿ ವಾರೆನ್ ಹೇಸ್ಟಿಂಗ್ಸ್‌ನನ್ನು ಬಂಗಾಳದ ಗವರ್ನರ್ ಆಗಿ ನೇಮಕ ಮಾಡಲಾಯಿತು. ಅವನು ಗವರ್ನರ್ ಆದ ಕೂಡಲೇ, ಮುಘಲ್ ಚಕ್ರವರ್ತಿ ಮತ್ತು ಬಂಗಾಳದ ನವಾಬನೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು ಏಕಪಕ್ಷೀಯವಾಗಿ ತ್ಯಜಿಸಿದನು. ಅನಂತರ, ಹೇಸ್ಟಿಂಗ್ಸ್ ಬಂಗಾಳ, ಬಿಹಾರ ಮತ್ತು ಒರಿಸ್ಸಾದ ಆಡಳಿತವನ್ನು ನೇರವಾಗಿ ತನ್ನ ವಶಕ್ಕೆ ತೆಗೆದುಕೊಂಡನು. ಅಲಹಾಬಾದ್ ಮತ್ತು ಕೋರಾಹ್ ಸುಬ್ಬಾಗಳನ್ನು ಮೊದಲು ಚಕ್ರವರ್ತಿಯ ವಶಕ್ಕೆ ಒಪ್ಪಿಸಲಾಗಿತ್ತು. ಅನಂತರ ಈ ಸುಬ್ಬಾಗಳನ್ನು ೫೦,೦೦೦ ಪೌಂಡ್‌ಗಳ ಮೊತ್ತವನ್ನು ಪಡೆದು, ಔದ್‌ನ ನವಾಬರ ವಶಕ್ಕೆ ವರ್ಗಾಯಿಸಲಾಯಿತು. ರೋಹಿಲ್ಲಾಗಳನ್ನು ಸದೆಬಡಿಯಲು ೪೦,೦೦೦ ಪೌಂಡ್‌ಗಳನ್ನು ನವಾಬರಿಂದ ಪಡೆದು, ಇಂಗ್ಲಿಷ್ ಬ್ರಿಗೇಡ್ ಒಂದನ್ನು ಅವರಿಗೆ ಕಳಿಸಿಕೊಡಲಾಯಿತು.

ಆ ಸಮಯದಲ್ಲಿ ಇಂಗ್ಲೆಂಡ್ ಒಂದು ಪ್ರಜಾಪ್ರಭುತ್ವವಾಗಿ ರೂಪುಗೊಳ್ಳುತ್ತಿತ್ತು. ಬ್ರಿಟನ್ನಿನ ಕ್ಯಾಬಿನೆಟ್, ಶ್ರೀಮಂತ ವರ್ಗದವರನ್ನೇ ಅತಿ ಹೆಚ್ಚಾಗಿ ಒಳಗೊಂಡಿರುತ್ತಿತ್ತು. ಆದರೂ ಪಾರ್ಲಿಮೆಂಟ್ ತನ್ನ ಮಹತ್ವವನ್ನು ಕಳೆದುಕೊಂಡಿರಲಿಲ್ಲ. ಅದು ಪ್ರಬಲವಾಗಿತ್ತು. ಎಡ್ಮಂಡ್ ಬರ್ಕ್ ಮತ್ತು ಜಾನ್ ಬ್ರೈಟ್‌ರಂತಹ ಗಣ್ಯ ಪಾರ್ಲಿಮೆಂಟ್ ಸದಸ್ಯರಿದ್ದರು. ಭಾರತದಲ್ಲಿ ಪ್ರಜೆಗಳನ್ನು ಪೀಡಿಸುವ ಮತ್ತು ಸಂಪತ್ತನ್ನು ಸುಲಿಗೆ ಮಾಡುವ ಕಾರ್ಯ ನಿರಂತರವಾಗಿ ಸಾಗುತ್ತಿದ್ದುದನ್ನು ಈ ಇಬ್ಬರು ಸದಸ್ಯರು ತೀವ್ರವಾಗಿ ವಿರೋಧಿಸಿದರು. ಅವರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಕ್ಲೈವ್‌ನನ್ನು ಇದಕ್ಕಾಗಿ ಖಂಡಿಸಬೇಕೆಂದು ಅವರು ಒತ್ತಾಯಪಡಿಸಿದರು. ಅದಕ್ಕಾಗಿ ಕ್ಲೈವ್‌ನನ್ನು ಖಂಡಿಸಿ, ಅವನಿಗೆ ಛೀಮಾರಿ ಹಾಕಲಾಯಿತು. ಆದರೆ, ಕ್ಲೈವ್‌ಗೆ ಹಲವಾರು ಪಾರ್ಲಿಮೆಂಟ್ ಸದಸ್ಯರ ಬೆಂಬಲವಿತ್ತು. ಏಕೆಂದರೆ ಅವನ ದುಷ್ಕೃತ್ಯಗಳಿಂದ, ಅವರು ನೇರ ಲಾಭ ಪಡೆಯುತ್ತಿದ್ದರು. ಆದ್ದರಿಂದ ಕ್ಲೈವ್‌ನ

ಮೇಲೆ ಮತ್ಯಾವ ಕ್ರಮವನ್ನೂ ಕೈಗೊಳ್ಳದೇ ಅವನು ಅಕ್ರಮವಾಗಿ ಪಡೆದುಕೊಂಡಿದ್ದ ಸಂಪತ್ತನ್ನು ಹಾಯಾಗಿ ಅನುಭವಿಸಿಕೊಂಡಿರಲು ಅವಕಾಶ ಮಾಡಿಕೊಟ್ಟರು.

೧೭೭೩ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟ್ ರೆಗ್ಯುಲೇಟಿಂಗ್ ಕಾಯ್ದೆಯನ್ನು ಅಂಗೀಕರಿಸಿತು. ಈ ಕಾಯ್ದೆಯ ಪ್ರಕಾರ, ಯುದ್ಧ ಮಾಡಿ ಗೆದ್ದ ವಸಾಹತುಗಳು ಮತ್ತು ಪ್ರದೇಶಗಳ ಮೇಲಿನ ಪರಮಾಧಿಕಾರವನ್ನು ಇಂಗ್ಲೆಂಡಿನ ಚಕ್ರವರ್ತಿಯವರಿಗೆ ನೀಡಲಾಯಿತು. ಆದಾಯಕ್ಕೆ ಸಂಬಂಧಪಟ್ಟಂತೆ, ಎಲ್ಲ ಮಾಹಿತಿಯನ್ನು ಖಜಾನೆ ಖಾತೆಗೆ ತಿಳಿಸುತ್ತಿರಬೇಕೆಂಬ ನಿಯಮವನ್ನು ಕಾಯ್ದೆ ಒಳಗೊಂಡಿತ್ತು. ಎಲ್ಲ ಸಿವಿಲ್ ಮತ್ತು ಮಿಲಿಟರಿ ವಿಷಯಗಳಲ್ಲಿ ಸಲಹೆಗಳನ್ನು ನೀಡುವ ಅಧಿಕಾರವನ್ನು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕೊಡಲಾಗಿತ್ತು. ಈ ಕಾಯ್ದೆಯನ್ವಯ, ವಾರೆನ್ ಹೇಸ್ಟಿಂಗ್ಸ್‌ನನ್ನು ಭಾರತದಲ್ಲಿ ಗವರ್ನರ್ ಜನರಲ್ ಆಗಿ ನೇಮಿಸಲಾಯಿತು. ಅವನ ನೆರವಿಗಾಗಿ ನಾಲ್ವರು ಸದಸ್ಯರನ್ನೊಳಗೊಂಡ ಒಂದು ಮಂಡಳಿಯನ್ನು ನೇಮಿಸಲಾಯಿತು. ಭಾರತದಲ್ಲಿರುವ ಈಸ್ಟ್ ಇಂಡಿಯಾ ಕಂಪೆನಿಯ ಎಲ್ಲ ವಸಾಹತುಗಳು ಈ ಮಂಡಳಿಯ ಪಾರುಪತ್ಯದಲ್ಲಿದ್ದವು. ಅದು ಬಂಗಾಳದ ಮೇಲೆ ನೇರ ಹತೋಟಿಯನ್ನು ಹೊಂದಿತ್ತು. ಈ ಕಾಯ್ದೆಯ ಪ್ರಕಾರ ಒಂದು ಸುಪ್ರೀಮ್ ಕೋರ್ಟನ್ನು ಸ್ಥಾಪಿಸಲಾಯಿತು. ಈ ಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಮತ್ತು ಉಪನ್ಯಾಯಾಧೀಶರನ್ನು ನೇಮಿಸುವ ಅಧಿಕಾರ ಇಂಗ್ಲೆಂಡಿನ ದೊರೆಗಳಿಗಿತ್ತು. ಸುವ್ಯವಸ್ಥೆಯನ್ನು ಕಾಪಾಡಲು ಮತ್ತು ನಾಗರಿಕ ಆಡಳಿತವನ್ನು ನೋಡಿಕೊಳ್ಳಲು, ಕಾನೂನುಗಳನ್ನು, ವಿಶೇಷಾಜ್ಞೆಗಳನ್ನು ಮತ್ತು ನಿಯಮಗಳನ್ನು ರೂಪಿಸುವ ಅಧಿಕಾರ ಗವರ್ನರ್ ಜನರಲ್‌ಗಿತ್ತು. ಹೇಸ್ಟಿಂಗ್ಸ್, ಭೂಕಂದಾಯಕ್ಕೆ ಸಂಬಂಧಿಸಿದಂತೆ ಅತ್ಯಧಿಕ ಕಂದಾಯವನ್ನು ನೀಡಲು ಸಿದ್ಧರಿದ್ದ ಜಮೀನುದಾರರೊಡನೆ ಒಪ್ಪಂದ ಮಾಡಿಕೊಂಡನು. ಇದರಿಂದ ಸಾಗುವಳಿದಾರರ ಮೇಲಿನ ಹೊರೆ ಅತಿ ಹೆಚ್ಚಾಯಿತು. ಕಂದಾಯ ವಸೂಲು ಮಾಡುವ ಕಂಪೆನಿಯ ಅಧಿಕಾರಿಗಳಿಗೆ ನ್ಯಾಯ ನಿರ್ಣಯದ ಹಾಗೂ ದಂಡನೆ ನೀಡುವ ಅಧಿಕಾರ ಕೊಡಲಾಯಿತು. ಇದರಿಂದ ಅವರು ಯಾವ ದಯೆದಾಕ್ಷಿಣ್ಯ ಇಲ್ಲದೆ ದೇಶವನ್ನು ಲೂಟಿ ಮಾಡಿದರು. ಒಟ್ಟಿನಲ್ಲಿ ಸಾಗುವಳಿದಾರರು ನಾಶವಾದರು. ಭಾರತೀಯ ನೌಕರರ ಹೆಸರಿನಲ್ಲಿ ಜಮೀನುದಾರರಿಂದ ಸಹಾಯಧನ ಪಡೆಯುವುದನ್ನು ಕಂಪೆನಿಯ ನೌಕರರು ಹವ್ಯಾಸವನ್ನಾಗಿ ಮಾಡಿಕೊಂಡರು. ಆರ್. ಸಿ. ದತ್ "ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ಅಂಡರ್ ಬ್ರಿಟಿಷ್ ರೂಲ್" ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ : "ಬಂಗಾಳದ ಎಲ್ಲ ದೊಡ್ಡ ಜಮೀನುದಾರರುಗಳು, ಮತ್ತು ಪ್ರಾಚೀನ ಕಾಲದಿಂದಲೂ ಇದ್ದ ಅನೇಕ ಕುಟುಂಬಗಳು ಹೇಸ್ಟಿಂಗ್ಸ್ ಜಾರಿಗೆ ತಂದ ಪದ್ಧತಿಯಿಂದ ಬಹಳ ತೊಂದರೆ ಹಾಗೂ ಸಂಕಷ್ಟಗಳನ್ನು ಅನುಭವಿಸಬೇಕಾಯಿತು. ಕಂದಾಯವನ್ನು

ವಾರ್ಷಿಕವಾಗಿ ಪಾವತಿ ಮಾಡಬೇಕಾಗುತ್ತಿತ್ತು. ಪದೇ ಪದೇ ಭೂಕಂದಾಯವನ್ನು ಹೆಚ್ಚಿಸಲಾಗುತ್ತಿತ್ತು. ಕಂದಾಯ ವಸೂಲಿಗಾಗಿ ಬಹಳ ಕಟುವಾದ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು: ಬಂಗಾಳದ ಈ ಜನರು ಹಿಂದೆಂದೂ ಇಂತಹ ಕಷ್ಟಕ್ಕೊಳಗಾಗಿರಲಿಲ್ಲ. ಎಸ್ಟೇಟ್‌ಗಳನ್ನು ವಂಶಾನುಗತವಾಗಿ ಅನುಭವಿಸಿಕೊಂಡು ಬಂದಿದ್ದ ವ್ಯಕ್ತಿಗಳೂ ತಮ್ಮ ಎಸ್ಟೇಟ್‌ಗಳನ್ನು ಕಲ್ಕತ್ತಾದಲ್ಲಿ ಸಾಲ ಕೊಡುವವರ ಮತ್ತು ಸಟ್ಟಾವ್ಯಾಪಾರ ಮಾಡುವವರ ಕೈಗೆ ಒಪ್ಪಿಸಬೇಕಾದ ಕರುಣಾಜನಕ ಪರಿಸ್ಥಿತಿ ಉಂಟಾಯಿತು. ವಿಧವೆಯರ ಮತ್ತು ಸಣ್ಣ–ಪುಟ್ಟ ಹಿಡುವಳಿದಾರರ ಅಧೀನದಲ್ಲಿದ್ದ ವ್ಯಕ್ತಿಗಳನ್ನು ಕಲ್ಕತ್ತಾದಿಂದ ನೇಮಕವಾಗಿದ್ದ ಏಜೆಂಟರುಗಳು ಅತಿ ಕ್ರೂರವಾಗಿ ಹಿಂಸಿಸಿ, ಅವರ ಬಳಿ ಇದ್ದುದನ್ನು ದೋಚುತ್ತಿದ್ದರು". ಇಂತಹ ದಬ್ಬಾಳಿಕೆಯಲ್ಲಿ ಹಾಗೂ ಬರ್ಬರ ಕೃತ್ಯಗಳಲ್ಲಿ ತೊಡಗಿದ್ದ ವಾರೆನ್ ಹೇಸ್ಟಿಂಗ್ಸ್‌ನ ಮೇಲೆ ದೋಷಾರೋಪಣೆ ಮಾಡಿ, ಖಂಡಿಸಲಾಯಿತಾದರೂ, ಅವನನ್ನು ವಿಧ್ಯುಕ್ತವಾಗಿ ಖುಲಾಸೆ ಮಾಡಲಾಯಿತು. ಅನಂತರ, ಹೇಸ್ಟಿಂಗ್ಸ್ ತನ್ನ ಉಳಿದ ಜೀವನವನ್ನು ಬಹಳ ಕಷ್ಟ ಹಾಗೂ ದುಃಖದಿಂದಲೇ ಕಳೆಯಬೇಕಾಯಿತು.

೧೭೮೪ರಲ್ಲಿ ಪಿಟ್ಸ್ ಇಂಡಿಯಾ ಕಾಯ್ದೆಯನ್ನು (Pitt's India Act) ಅಂಗೀಕರಿಸಲಾಯಿತು. ದೊಡ್ಡ ದಂಗೆ ನಡೆಯುವವರೆಗೆ, ಭಾರತೀಯ ವ್ಯವಹಾರಗಳನ್ನು ಈ ಕಾಯ್ದೆಯ ಮೂಲಕ ನಿಯಂತ್ರಿಸಲಾಗುತ್ತಿತ್ತು. ಈ ಕಾಯ್ದೆಯ ಪ್ರಕಾರ, ಭಾರತೀಯ ಪ್ರದೇಶದ ಮೇಲೆ ಪಾರ್ಲಿಮೆಂಟಿಗಿದ್ದ ಪರಮಾಧಿಕಾರವನ್ನು ನಿಸ್ಸಂದಿಗ್ಧ ಶಬ್ದಗಳಲ್ಲಿ ಸ್ಪಷ್ಟಪಡಿಸಲಾಗಿತ್ತು. ಈ ಪರಮಾಧಿಕಾರವನ್ನು ಚಲಾಯಿಸಲು ಒಂದು ನಿಯಂತ್ರಣ ಮಂಡಳಿಯನ್ನು ನೇಮಕ ಮಾಡಲಾಯಿತು. ಈ ಮಂಡಳಿಯಲ್ಲಿ ವರಮಾನ ಇಲಾಖೆಯ ಚಾನ್ಸಲರ್ (Chancellor of the Exchequer), ಒಬ್ಬರು ಸೆಕ್ರೆಟರಿ ಆಫ್ ಸ್ಟೇಟ್ (Secretary of State), ಮತ್ತು ಇತರ ನಾಲ್ವರು ಪ್ರಿವಿ ಕೌನ್ಸಿಲರ್‌ಗಳು (Privy Councillors) ಇದ್ದರು. ಈ ಕೌನ್ಸಿಲರ್‌ಗಳಲ್ಲಿ ಒಬ್ಬರನ್ನು ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಈ ಅಧ್ಯಕ್ಷರು, ನಿಯಂತ್ರಣ ಮಂಡಳಿಗಿದ್ದ ಅಧಿಕಾರವನ್ನು ಸಾಮಾನ್ಯವಾಗಿ ಚಲಾಯಿಸುತ್ತಿದ್ದರು.

ವಾರೆನ್ ಹೇಸ್ಟಿಂಗ್ಸ್ ನಂತರ, ಆ ಸ್ಥಾನಕ್ಕೆ ಲಾರ್ಡ್ ಕಾರ್ನ್‌ವಾಲಿಸ್ ಬಂದನು. ಆತ, ಆಡಳಿತಕ್ಕೆ ಕಾರ್ಯಸಾಧ್ಯವಿರುವ ಉತ್ತಮ ಸ್ವರೂಪವನ್ನು ನೀಡಿದನು. ಅವನು ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದನು. ತನ್ನ ಆಡಳಿತವು ಭ್ರಷ್ಟಾಚಾರ ಮುಕ್ತವಾಗಿದ್ದು, ಅತ್ಯಂತ ನ್ಯಾಯಬದ್ಧವಾಗಿ ಕಾರ್ಯ ನಿರ್ವಹಿಸಬೇಕೆಂಬುದೇ ಅವನ ಅಪೇಕ್ಷೆಯಾಗಿತ್ತು. ಆದ್ದರಿಂದ ಇಂತಹ ಸುವ್ಯಸ್ಥಿತ ಆಡಳಿತವನ್ನು ನೀಡಲು ಕಾರ್ನ್‌ವಲಿಸ್ ದೃಢ ನಿರ್ಧಾರ ಮಾಡಿದನು. ಆದರೆ ತನ್ನ ಜನಾಂಗದ ಶ್ರೇಷ್ಠತೆಯ ಪ್ರಜ್ಞೆ ಅವನನ್ನು ಬಿಟ್ಟಿರಲಿಲ್ಲ. ಆದ್ದರಿಂದ ಅವನು ಸಹ ಒಂದು ಸಾಮ್ರಾಜ್ಯದ ನಿರ್ಮಾಪಕನಂತೆಯೇ

ಕಾರ್ಯ ನಿರ್ವಹಿಸಿದನು. ಕಾರ್ನ್‌ವಾಲಿಸ್ ಮುಂದೆ, ಭಾರತದಲ್ಲಿದ್ದ ಯೂರೋಪಿಯನ್ನರು, ಭಾರತೀಯರೊಂದಿಗೆ ಸಮಾನವಾಗಿ ಓಡಾಡುತ್ತಿದ್ದರು. ಸಿವಿಲ್ ಸರ್ವಿಸ್ ಮತ್ತು ಸೈನ್ಯದಲ್ಲಿ ಭಾರತೀಯರನ್ನು ಉನ್ನತ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಹೊಸ ಆಡಳಿತ ಅಧಿಕಾರಕ್ಕೆ ಬರುತ್ತಿದ್ದಂತೆ, ಜವಾಬ್ದಾರಿಯುತವಾದ ಎಲ್ಲ ಅಧಿಕಾರ ಸ್ಥಾನಗಳನ್ನು ಬ್ರಿಟಿಷರಿಗಾಗಿಯೇ ಕಾಯ್ದಿರಿಸಲಾಗುತ್ತಿತ್ತು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತೃತವಾಗುತ್ತಿದ್ದಂತೆ ಜನಾಂಗ ಪಕ್ಷಪಾತವೂ ಹೆಚ್ಚುತ್ತಾ ಹೋಯಿತು.

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ವಿಸ್ತರಣೆ ಬಗ್ಗೆ ನಾನು ಹೆಚ್ಚು ವಿವರವಾಗಿ ಹೋಗಬಯಸುವುದಿಲ್ಲ. ಲಾರ್ಡ್ ಕಾರ್ನ್‌ವಾಲಿಸ್ ನಂತರ ಅಧಿಕಾರಕ್ಕೆ ಬಂದವರೆಲ್ಲರೂ ಅದರಲ್ಲೂ ಮುಖ್ಯವಾಗಿ ಲಾರ್ಡ್ ವೆಲ್ಲೆಸ್ಲಿ, ಲಾರ್ಡ್ ಹೇಸ್ಟಿಂಗ್ಸ್ ಮತ್ತು ಲಾರ್ಡ್ ಡಾಲ್‌ಹೌಸಿ, ಭಾರತದ ಒಂದಲ್ಲ ಒಂದು ಭಾಗವನ್ನು ಬ್ರಿಟಿಷರ ಹತೋಟಿಗೊಳಪಡಿಸಿದರು. ಮೊದಲು ದಖ್ಖನ್ ಅವರ ಹತೋಟಿಯ ವ್ಯಾಪ್ತಿಗೆ ಬಂದಿತು. ಅಲ್ಲಿ, ನಿಜಾಮರು, ಹೈದರ್‌ಅಲಿ ಮತ್ತು ಟಿಪ್ಪೂಸುಲ್ತಾನ್ ಇವರೊಂದಿಗೆ ಸಂಘರ್ಷಣೆ ದೀರ್ಘಕಾಲ ಮುಂದುವರಿಯಿತು. ನಾಲ್ಕು ಯುದ್ಧಗಳಾದ ನಂತರ, ಮೈಸೂರು ಮತ್ತು ಹೈದರಾಬಾದ್ ಇವೆರಡನ್ನು ಬಿಟ್ಟು, ಇಡೀ ದಕ್ಷಿಣ ಭಾರತದಲ್ಲಿ ಬ್ರಿಟಿಷರು ತಮ್ಮ ಆಡಳಿತ ಸ್ಥಾಪಿಸಿಕೊಂಡರು. ಹಿಂದೂ ಧರ್ಮಕ್ಕೆ ಸೇರಿದ ರಾಜರೊಬ್ಬರು ಮೈಸೂರು ಸಂಸ್ಥಾನವನ್ನು ಆಳುತ್ತಿದ್ದರು. ಹೈದರಾಬಾದ್ ನಿಜಾಮರ ಆಳ್ವಿಕೆಗೊಳಪಟ್ಟಿತ್ತು. ಈ ಎರಡೂ ಸಂಸ್ಥಾನಗಳ ರಾಜಧಾನಿಗೆ ಸಮೀಪದಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಅಧಿಕ ಸಂಖ್ಯೆಯಲ್ಲಿ ತನ್ನ ಸೈನಿಕರನ್ನು ಇರಿಸಿತ್ತು. ಈ ರಾಜರುಗಳು ತನಗೆ ನಿಷ್ಠರಾಗಿದ್ದುಕೊಂಡು ತನ್ನ ಅಧೀನದೊಳಗಿರುವಂತೆ ಮಾಡುವುದೇ ಈಸ್ಟ್ ಇಂಡಿಯಾ ಕಂಪೆನಿಯ ಉದ್ದೇಶವಾಗಿತ್ತು. ತಮ್ಮ ರಾಜಧಾನಿ ಸಮೀಪ ಸೈನಿಕರಿದ್ದುದರಿಂದ, ಈ ರಾಜರು ಈಸ್ಟ್ ಇಂಡಿಯಾ ಕಂಪೆನಿಗೆ ಹಣ ಕೊಡಬೇಕಾಯಿತು.

ಈಸ್ಟ್ ಇಂಡಿಯಾ ಕಂಪೆನಿಯ ಬಾಂಬೆ ಶಾಖೆ, ಕಲ್ಕತ್ತಾ ಮತ್ತು ಮದ್ರಾಸ್ ಶಾಖೆಗಳಿಗಿಂತ ಒಂದು ಹೆಜ್ಜೆ ಮುಂದಿಟ್ಟು, ಮರಾಠರೊಡನೆ ಹಲವಾರು ಬಾರಿ ಯುದ್ಧ ನಡೆಸಿದ ಬಳಿಕ, ಪಶ್ಚಿಮ ಮತ್ತು ಉತ್ತರ ಭಾರತದ ಅತಿ ವ್ಯಾಪಕವಾದ ಪ್ರದೇಶಗಳ ಮೇಲೆ ೧೮೧೮ರಲ್ಲಿ ತನ್ನ ಪ್ರಭುತ್ವ ಸ್ಥಾಪಿಸಿಕೊಂಡಿತು.ಇದಾದ ಸ್ವಲ್ಪ ಸಮಯದಲ್ಲೇ, ಅದು ಸಿಂಧ್ ಅನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಆಫ್‌ಘನಿಸ್ಥಾನದಿಂದ ಬ್ರಿಟಿಷ್ ಇಂಡಿಯಾವನ್ನು ರಕ್ಷಿಸಲು, ಸಿಂಧ್‌ಅನ್ನು ತನ್ನ ಹತೋಟಿಗೆ ತೆಗೆದುಕೊಳ್ಳುವುದು ಅದಕ್ಕೆ ಬಹಳ ಮುಖ್ಯವಾಗಿತ್ತು. ಪಂಜಾಬ್‌ನಲ್ಲಿ ರಣಜಿತ್‌ಸಿಂಗ್ ಮರಣಾನಂತರ, ಸಿಖ್ಖರು ಬೇರೆ ಬೇರೆಯಾದರು. ೧೮೪೯ರಲ್ಲಿ

ಎರಡನೇ ಸಲ ಯುದ್ಧ ಮಾಡಿದ ಬಳಿಕ ಪಂಜಾಬ್‌ಅನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡರು. ಪ್ಲಾಸಿ ಕದನ ನಡೆದ ಒಂದು ನೂರು ವರ್ಷದೊಳಗಾಗಿ ಹೆಚ್ಚು ಕಡಿಮೆ, ಇಡೀ ಭಾರತ, ಬ್ರಿಟಿಷರ ದಾಸ್ಯಕ್ಕೊಳಗಾಯಿತು. ಅತಿ ಹೆಚ್ಚು ಆದಾಯ ತರುವಂತಹ ಫಲವತ್ತಾದ ಭಾಗಗಳನ್ನು ಕಂಪೆನಿಯು ತನ್ನ ನೇರ ಆಡಳಿತಕ್ಕೆ ತೆಗೆದುಕೊಂಡಿತು. ಬಡತನವಿದ್ದ ಇತರ ನಿಸ್ಸಾರ ಪ್ರದೇಶಗಳನ್ನು ಭಾರತೀಯ ರಾಜರುಗಳ ಆಳ್ವಿಕೆಗೆ ಒಪ್ಪಿಸಲಾಯಿತು. ಈ ರಾಜರುಗಳು ಬ್ರಿಟಿಷರಿಗೆ ಹೆದರಿ, ಬಹಳ ಮೆದುವಾಗಿದ್ದರು. ಆದ್ದರಿಂದ ಅವರು ತಮಗೆ ತುಂಬ ನಿಷ್ಠರಾಗಿ, ತಮ್ಮ ಆಜ್ಞಾನುವರ್ತಿಗಳಾಗಿರುತ್ತಾರೆಂದು ಬ್ರಿಟಿಷರು ಭಾವಿಸಿದ್ದರು. ಭಾರತದ ಬ್ರಿಟಿಷರು ಸಾಧಿಸಿದ ವಿಜಯದಲ್ಲಿ ಒಂದು ಕುತೂಹಲಕಾರಿ ಅಂಶವಿದೆ. ಅದೇನೆಂದರೆ ಭಾರತದಿಂದ ಸಂಗ್ರಹಿಸಿದ ಹಣವನ್ನೇ ಇಡೀ ಸಮರಕ್ಕೆ ವಿನಿಯೋಗಿಸಲಾಯಿತು. ಸಮರದಲ್ಲಿ ಹೋರಾಡಿದ ಸೈನಿಕರಲ್ಲಿ ಭಾರತೀಯರೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ಈಸ್ಟ್ ಇಂಡಿಯಾ ಕಂಪೆನಿಯ ಮಿಲಿಟರಿ ಪಡೆಗಳಿಗೂ, ಭಾರತೀಯ ರಾಜರುಗಳ ಬಳಿಯಿದ್ದ ಪಡೆಗಳಿಗೂ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಯೋಧರ ನೈತಿಕ ಸ್ಥೈರ್ಯ ಮತ್ತು ಮದ್ದುಗುಂಡು ಹಾಗೂ ಫಿರಂಗಿ ಬಳಕೆಯಲ್ಲಿದ್ದ ಪ್ರಾವೀಣ್ಯ – ಈ ವಿಷಯದಲ್ಲಿ ಮಾತ್ರ ಇವುಗಳ ನಡುವೆ ಸ್ವಲ್ಪ ವ್ಯತ್ಯಾಸವಿತ್ತು.

ಭಾರತದ ಮೇಲೆ ಬ್ರಿಟನ್ ಗೆಲವು ಸಾಧಿಸಿದ್ದಕ್ಕೆ ಕಾರಣವೇನೆಂಬುದನ್ನು ತಾರಾಚಂದ್ ಹೀಗೆ ವಿವರಿಸಿದ್ದಾರೆ : "ಭಾರತದಲ್ಲಿ ಹಲವಾರು ರಾಜರುಗಳಿದ್ದು ಅವರು ಒಬ್ಬರ ವಿರುದ್ಧ ಒಬ್ಬರು ಸದಾ ಸೆಣಸಾಡುತ್ತಿದ್ದರು. ಅವರಲ್ಲಿ ಸ್ವಲ್ಪವೂ ಐಕಮತ್ಯ ಕಂಡುಬರುತ್ತಿರಲಿಲ್ಲ. ಹೀಗಾಗಿ ದೇಶ ಒಂದು ವಿಭಜನೆಗೊಂಡ ಕುಟುಂಬದಂತಾಗಿತ್ತು. ಒಂದು ಸೈನ್ಯ ಮತ್ತೊಂದು ಸೈನ್ಯದ ವಿರುದ್ಧ ಹೋರಾಡುವಾಗ, ಅದಕ್ಕೆ ತಮ್ಮವರು ಮತ್ತು ಪರಕೀಯರು ಎಂಬುದರ ಪರಿವೆಯೇ ಇರುತ್ತಿರಲಿಲ್ಲ. ಆದರೆ ಇಂಗ್ಲಿಷ್ ಸೈನ್ಯ ಹಾಗಿರಲಿಲ್ಲ. ಅದರ ಸೈನಿಕರು ತಮ್ಮ ದೇಶಕ್ಕೆ ಬದ್ಧರಾಗಿರುತ್ತಿದ್ದರು. ಇಂಗ್ಲೆಂಡ್ ಸೈನ್ಯದ ದಂಡನಾಯಕನಿಗೆ ಇಡೀ ಬ್ರಿಟಿಷ್ ರಾಷ್ಟ್ರದ ಬೆಂಬಲವಿರುತ್ತಿತ್ತು. ಯುದ್ಧದಲ್ಲಿ ಸಾವು–ನೋವು ಉಂಟಾಗಬಹುದು. ಅದರಿಂದಾಗುವ ಪರಿಣಾಮ ಅಲ್ಪಾವಧಿಯದು ಅಥವಾ ದೀರ್ಘಾವಧಿಯದಾಗಿರಬಹುದು. ಸೋಲಿನ ಕಾರಣ, ಅವರು ಈ ದುಷ್ಪರಿಣಾಮಗಳನ್ನು ನಿವಾರಿಸದೇ ಇರುತ್ತಿರಲಿಲ್ಲ. ಆದರೆ ಭಾರತದಲ್ಲಿ ಹಾಗಾಗುತ್ತಿರಲಿಲ್ಲ. ವ್ಯಕ್ತಿ ಮತ್ತು ರಾಷ್ಟ್ರದ ನಡುವಣ ಸಂಬಂಧ ಅಭಿವೃದ್ಧಿಗೊಳ್ಳಲು ಮತ್ತು ವ್ಯಕ್ತಿಯ ಹಿತಕ್ಕಿಂತ ರಾಷ್ಟ್ರದ ಹಿತ ಅತಿ ಮುಖ್ಯವೆಂಬ ಪ್ರಜ್ಞೆ ಜಾಗೃತಗೊಳ್ಳಲು, ಒಂದು ಶತಮಾನವೇ ಬೇಕಾಯಿತು".

* * * *

೩. ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳು

ಬ್ರಿಟನ್‌ನಲ್ಲಿ ಕೈಗಾರಿಕಾ ಕ್ರಾಂತಿಯು, ಹೆಚ್ಚುಕಡಿಮೆ ಪ್ಲಾಸಿ ಕದನದ ಸಮಯದಲ್ಲೇ ಪ್ರಾರಂಭವಾಯಿತು. ೧೭೬೦ರಲ್ಲಿ ಫ್ಲೈಯಿಂಗ್ ಷಟ್ಲ್ ಕಂಡು ಹಿಡಿಯಲಾಯಿತು. ಹಾರ್‌ಗ್ರೀವ್ಸ್ ೧೭೬೪ರಲ್ಲಿ ನೂಲುವ ಯಂತ್ರದ (Spinning Jenny) ವಿನ್ಯಾಸವನ್ನು ರೂಪಿಸಿದನು. ೧೭೭೬ರಲ್ಲಿ ಕ್ರಾಂಪ್ಟನ್‌ನ ಶೋಧನೆಯಾದ 'ಮ್ಯೂಲ್' ಎಂಬ ನೂಲುತೆಗೆಯುವ ಯಂತ್ರ ಬಳಕೆಗೆ ಬಂದಿತು. ೧೭೬೮ರಲ್ಲಿ ವಾಟ್, ಉಗಿ ಇಂಜಿನ್ ಕಂಡುಹಿಡಿದನು. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲೇ ಈ ಶೋಧನೆಗಳ ಪರಿಣಾಮ ಗೋಚರವಾಯಿತು. ಈಸ್ಟ್ ಇಂಡಿಯಾ ಕಂಪೆನಿ ಸುಮಾರು ೨೦೦ ವರ್ಷಗಳ ಕಾಲ ಭಾರತದಿಂದ ಸಿದ್ಧವಸ್ತುಗಳನ್ನು ರಫ್ತು ಮಾಡುತ್ತಿತ್ತು. ನೇಯ್ಗೆಯಲ್ಲಿ ಮತ್ತು ವಿದ್ಯುತ್‌ಶಕ್ತಿ ಬಳಕೆಯಲ್ಲಿ ಹೊಸ ಬದಲಾವಣೆ ಕಂಡುಬಂದಿತು. ತತ್ಪರಿಣಾಮವಾಗಿ, ಇಂಗ್ಲೆಂಡಿನಲ್ಲಿ ಹತ್ತಿ ಬಟ್ಟೆಯನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸಲು ಆರಂಭಿಸಲಾಯಿತು. ಇದರಿಂದ ಭಾರತ ಮತ್ತು ಇಂಗ್ಲೆಂಡ್ ನಡುವಣ ವ್ಯಾಪಾರ ಸಂಬಂಧಗಳು ತಿರುಗುಮುರುಗಾದವು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ವೇಳೆಗೆ, ಕಚ್ಚಾಸಾಮಗ್ರಿಗಳು ಮತ್ತು ಕೃಷಿ ಉತ್ಪನ್ನಗಳನ್ನು ಬಿಟ್ಟು, ಉಳಿದ ಉತ್ಪನ್ನಗಳು ಭಾರತದಿಂದ ರಫ್ತಾಗುವುದೇ ನಿಂತುಹೋಯಿತು. ಬ್ರಿಟನ್‌ನಲ್ಲಿ ತಯಾರಾದ ಬಟ್ಟೆಗಳಿಗೆ ಭಾರತವೇ ಪ್ರಮುಖ ಗಿರಾಕಿಯಾಯಿತು. ಇಂಗ್ಲೆಂಡಿನ ಬಟ್ಟೆಗೆ ಭಾರತವು ಒಂದು ಪ್ರಮುಖ ಮಾರುಕಟ್ಟೆಯಾಯಿತು. ಈಸ್ಟ್ ಇಂಡಿಯಾ ಕಂಪೆನಿ ಮತ್ತು ಅದರ ಬ್ರಿಟಿಷ್ ಉದ್ಯೋಗಿಗಳು ಭಾರತದಿಂದ ರವಾನಿಸುತ್ತಿದ್ದ ಹಣ, ಬ್ರಿಟನ್ನಿನ ಬಟ್ಟೆ ಉದ್ಯಮದ ಅಭಿವೃದ್ಧಿಗೆ ಬಂಡವಾಳವಾಗಿ ಪರಿಣಮಿಸಿತು. ಬಟ್ಟೆ ತಯಾರಿಕೆ, ಭಾರತದ ಒಂದು ಪ್ರಮುಖ ಕುಟೀರ ಕೈಗಾರಿಕೆಯಾಗಿತ್ತು. ಕೃಷಿಯನ್ನು ಬಿಟ್ಟರೆ, ಬಟ್ಟೆ ಉದ್ಯಮ, ಆರ್ಥಿಕ ದೃಷ್ಟಿಯಿಂದ ಅತ್ಯಂತ ಹೆಚ್ಚು ಮಹತ್ವಪಡೆದಿದ್ದ ಉದ್ಯಮವಾಗಿತ್ತು : ಆದರೆ, ದುರದೃಷ್ಟವಶದಿಂದ, ಭಾರತದ ಬಟ್ಟೆ ಉದ್ಯಮ ಕ್ಷೀಣಿಸುತ್ತಾ ಬಂದು, ಅವಸಾನದ ಹಾದಿ ಹಿಡಿದಿತ್ತು. ಈಗಾಗಲೇ ದುಃಸ್ಥಿತಿಯಲ್ಲಿದ್ದ ಭಾರತದ ಅರ್ಥವ್ಯವಸ್ಥೆಗೆ ಹೊಸ ಕಂದಾಯ ಪದ್ಧತಿ, ಮತ್ತೊಂದು ಆಘಾತವನ್ನು ಉಂಟುಮಾಡಿತ್ತು. ಬಟ್ಟೆ ಉದ್ಯಮ ತೀವ್ರ ಸಂಕಷ್ಟಕ್ಕೀಡಾಯಿತು. ನಿರುದ್ಯೋಗ ಹೆಚ್ಚುತ್ತಾ ಹೋಯಿತು. ಈಸ್ಟ್ ಇಂಡಿಯಾ ಕಂಪೆನಿಯವರು ಹೊಸ ಕಂದಾಯ ಪದ್ಧತಿಯನ್ನು ಜಾರಿಗೆ

ತಂದು, ಭೂಸಾಗುವಳಿದಾರರಿಂದ ಮತ್ತು ಭೂಮಾಲೀಕರಿಂದ ಅತ್ಯಧಿಕ ಮೊತ್ತದಲ್ಲಿ ಭೂಕಂದಾಯ ವಸೂಲು ಮಾಡುತ್ತಿದ್ದರು. ಬಂಗಾಳ, ಬಿಹಾರ ಮತ್ತು ಒರಿಸ್ಸಾದಂತಹ ಭಾರತದ ಕೆಲವು ಭಾಗಗಳಲ್ಲಿ, ಭೂಕಂದಾಯಕ್ಕಾಗಿ ಶಾಶ್ವತ ಪದ್ಧತಿಯನ್ನು ಅಸ್ತಿತ್ವಕ್ಕೆ ತರಲಾಯಿತು. ಇದರಿಂದ ಅಲ್ಲಿನ ಭೂಮಾಲೀಕರಿಗೆ ಮತ್ತು ಬೇಸಾಯಗಾರರಿಗೆ, ಅಷ್ಟೊಂದು ಭಾರಿ ಮೊತ್ತದ ಕಂದಾಯ ಪಾವತಿ ಮಾಡುವ ಸಾಮರ್ಥ್ಯವಿಲ್ಲದೆ ತುಂಬ ತೊಂದರೆಗೆ ಸಿಕ್ಕಿಕೊಂಡರು. ಯೂ.ಪಿ ಕೆಲವು ಭಾಗಗಳಲ್ಲಿ ಸಹ ಈ ಕಂದಾಯ ಪದ್ಧತಿ ಅಸ್ತಿತ್ವಕ್ಕೆ ಬಂದಿತು. ಆರಂಭದಲ್ಲಿ ಭೂಮಾಲಿಕರು ಅವರು ಬೆಳೆದ ಫಸಲಿನ ಶೇಕಡ ೮೦ ರಷ್ಟಕ್ಕೆ ಸಮನಾದ ಮೊತ್ತವನ್ನು ಕಂದಾಯವಾಗಿ ಸಲ್ಲಿಸಬೇಕಾಗುತ್ತಿತ್ತು. ಇಷ್ಟು ದೊಡ್ಡ ಮೊತ್ತವನ್ನು ಸಂದಾಯ ಮಾಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಜಮೀನುದಾರಿಕೆಯನ್ನು ಹರಾಜಿಗೆ ಒಡ್ಡುವ ಸಂದರ್ಭಗಳುಂಟಾಗುತ್ತಿದ್ದವು. ಆಗ ಅನೇಕ ವರ್ತಕರು ಮತ್ತು ಸಟ್ಟಾವ್ಯಾಪಾರಿಗಳು, ಹರಾಜಿನಲ್ಲಿ ಅದನ್ನು ಕೋರಿ, ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಫಸಲಿನ ಬೆಲೆಗಳು ಏರಿದಾಗ ಮಾತ್ರ, ಭೂಮಾಲಿಕರಿಗೆ, ಭೂಕಂದಾಯದ ಒತ್ತಡ ಅನುಪಾತವಾಗಿ ಕಡಿಮೆಯಾಗುತ್ತಿತ್ತು. ಹೀಗಾದಾಗ, ಶಾಶ್ವತ ಕಂದಾಯ ಪದ್ಧತಿ, ಭೂಮಾಲಿಕರಿಗೆ ಸ್ವಲ್ಪಮಟ್ಟಿಗೆ ಪ್ರಯೋಜನಕಾರಿಯಾಗುತ್ತಿತ್ತು. ಪಂಜಾಬ್, ಬಾಂಬೆ ಮತ್ತು ಮದ್ರಾಸ್‌ನಂತಹ ಕೆಲವು ಪ್ರದೇಶಗಳಲ್ಲಿ, ಬೇಸಾಯಗಾರರು ರೈತ್ವಾರಿ ಪದ್ಧತಿಯನ್ನು ಇಷ್ಟಪಟ್ಟರು. ಸರ್ಕಾರವೇ ರೈತರೊಡನೆ ನೇರ ಸಂಬಂಧಗಳನ್ನು ಹೊಂದಿರಬೇಕೆಂಬುದನ್ನು ಸರ್. ಥಾಮಸ್ ಮನ್ರೊ ಮತ್ತಿತರರು ಸಮರ್ಥಿಸುತ್ತಿದ್ದರು ಈ ಪದ್ಧತಿಯಲ್ಲೂ, ಕಂದಾಯವನ್ನು ಅತ್ಯಧಿಕ ಪ್ರಮಾಣದಲ್ಲಿ ನಿಗದಿಗೊಳಿಸಲಾಗಿತ್ತು. ಅಷ್ಟೇ ಅಲ್ಲದೆ, ಪದೇ ಪದೇ ಕಂದಾಯವನ್ನು, ಅತ್ಯಧಿಕ ಮೊತ್ತದಲ್ಲಿ ಏರಿಸಿ, ಪುನರ್‌ನಿಗದಿಗೊಳಿಸಲಾಗುತ್ತಿತ್ತು. ರೈತ್ವಾರಿ ಪದ್ಧತಿಯಿದ್ದ ಪ್ರದೇಶಗಳಲ್ಲಿ ರೈತರ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಕಾಂಗ್ರೆಸ್ ಪಕ್ಷವು ತನ್ನ ಮುಂಚಿನ ವರ್ಷಗಳಲ್ಲಿ ರೈತ್ವಾರಿ ಪ್ರದೇಶಗಳಲ್ಲಿ ಖಾಯಂ ಕಂದಾಯ ಪದ್ಧತಿಯನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸುತ್ತಿತ್ತು. ಭಾರತದ ಪ್ರಮುಖ ಕುಟೀರ ಕೈಗಾರಿಕೆಯ ಅವಸಾನ, ಅತ್ಯಧಿಕ ಮೊತ್ತದ ಭೂಕಂದಾಯದ ವಸೂಲಿ, ಯುದ್ಧಗಳಿಂದ ಉಂಟಾಗಿದ್ದ ಅಸ್ತವ್ಯಸ್ತತೆ, ಕಂಪೆನಿಯ ಉದ್ಯೋಗಿಗಳಿಂದ ಹಣದ ಸುಲಿಗೆ, ಉಪಕಾರ ಪಡೆಯಲು ತೆರಬೇಕಾಗುತ್ತಿದ್ದ ಅಧಿಕ ಮೊತ್ತ – ಈ ಎಲ್ಲ ಕಾರಣಗಳಿಂದ ದೇಶದಲ್ಲಿ ಅತ್ಯಧಿಕ ಜನರು ಬಡತನದಲ್ಲಿ ಮುಳುಗಿಹೋಗಿದ್ದರು. ಕೆಲವು ಬಾರಿ ಮುಂಗಾರು ಮಳೆಯ ವೈಫಲ್ಯದಿಂದ ಭೀಕರ ಕ್ಷಾಮ ತಲೆದೋರುತ್ತಿತ್ತು.

"ಮೊದಲು ಕೆಡಕು, ನಂತರ ಒಳಿತು" ಎಂಬ ಒಂದು ಸೂಕ್ತಿಯಿದೆ. ಭಾರತದ ವಿಷಯದಲ್ಲಿ, ಇದು ಸ್ವಲ್ಪಮಟ್ಟಿಗೆ ನಿಜವಾಯಿತು. ಭಾರತದಲ್ಲಿ ಊಳಿಗಮಾನ್ಯ

ಪದ್ಧತಿಗೆ ಭಾರಿ ಆಘಾತವಾಯಿತು. ಪಟ್ಟಭದ್ರ ಹಿತಾಸಕ್ತಿಗಳನ್ನು ಹೊಂದಿದ್ದವರು, ತಮ್ಮ ಅಧಿಕಾರ ಮತ್ತು ಪ್ರಭಾವವನ್ನು ಕಳೆದುಕೊಂಡರು. ಅನಂತರ ಅವರ ಸ್ಥಾನದಲ್ಲಿ ಹೊಸ ಮಧ್ಯಮ ವರ್ಗವೊಂದು ಅಸ್ತಿತ್ವಕ್ಕೆ ಬಂದಿತು. ಬ್ರಿಟಿಷರ ಸಾಮ್ರಾಜ್ಯವಾದದ ಸ್ಥಾಪನೆಗಾಗಿ, ಈ ವರ್ಗದ ಜನರು ಮರ ಕಡಿಯುವ ಮತ್ತು ನೀರೆತ್ತುವ ಕೆಲಸ ಮಾಡಬೇಕಾಯಿತೆಂಬುದು ನಿಜ. ಅವರು ಹೊಸ ವಿಚಾರಗಳಿಂದ ಪ್ರೇರಿತರಾದರು. ಅನಂತರ ವಿದೇಶೀಯರ ಹೊಸ ವಿಧಾನಗಳು ಮತ್ತು ತಂತ್ರಗಳಿಗೆ ಅವರು ಹೊಂದಿಕೊಳ್ಳಬೇಕಾಯಿತು. ರಫ್ತು ಮತ್ತು ಆಮದು ವ್ಯಾಪಾರಗಳಿಗೆ ಅವರ ಏಜೆಂಟರಾಗಿ ಮತ್ತು ಮಧ್ಯವರ್ತಿಗಳಾಗಿ ಕೆಲಸ ಮಾಡಲಾರಂಭಿಸಿದರು. ಈಸ್ಟ್ ಇಂಡಿಯಾ ಕಂಪೆನಿಯ ಏಜೆಂಟ್‌ಗಳಾಗಿ ಮತ್ತು ಮಧ್ಯವರ್ತಿಗಳಾಗಿ ಅವರು ಕೆಲಸವನ್ನು ಚೆನ್ನಾಗಿ ನಿರ್ವಹಿಸಿದರು. ವಸಾಹತುಗಳಲ್ಲಿ, ಮೊದಲು ಅತ್ಯಧಿಕ ಸಂಖ್ಯೆಯ ಜನರನ್ನು ಕಾರಕೂನರನ್ನಾಗಿ ನೇಮಿಸಲಾಯಿತು. ಅನಂತರ ಅವರನ್ನು ಆಡಳಿತದ ಕೆಲಸ–ಕಾರ್ಯಗಳಿಗಾಗಿ ನೇಮಿಸಿಕೊಳ್ಳಲಾಯಿತು. ಆರಂಭಿಕ ಹಂತದಲ್ಲಿ, ಆಡಳಿತ ಕಾರ್ಯವನ್ನು ಭಾರತೀಯರ ಮುಖಾಂತರವೇ ನಿರ್ವಹಿಸಲಾಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಉನ್ನತ ಹುದ್ದೆಗಳಿಗೆ ಭಾರತೀಯರನ್ನು ನೇಮಿಸಿಕೊಳ್ಳುತ್ತಿರಲಿಲ್ಲ. ಆಗ ಕೆಳಗಿನ ಹುದ್ದೆಗಳ ಸಂಖ್ಯೆ ಬಹಳ ಅಧಿಕಗೊಂಡಿತು. ಆಗ ಆಡಳಿತದ ಹೊಸ ವ್ಯವಸ್ಥೆಯಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು ಈ ಹುದ್ದೆಗಳಿಗೆ ಸೇರಿಕೊಳ್ಳಬೇಕಾಯಿತು. ಭಾರತೀಯರು ಹೊಸ ಬ್ರಿಟಿಷ್ ನ್ಯಾಯಾಲಯಗಳಲ್ಲಿ ವಕೀಲರು, ಮ್ಯಾಜಿಸ್ಟ್ರೇಟ್‌ಗಳು ಮತ್ತು ನ್ಯಾಯಾಧೀಶರಾಗಿ ಸಹ ಕೆಲಸ ಮಾಡಬೇಕಾಯಿತು. ಈ ನ್ಯಾಯಾಲಯದಲ್ಲಿ ಭಾರತೀಯ ಮತ್ತು ಭಾರತೀಯನ ನಡುವೆ ಕಾನೂನಿನ ಸಮಾನತೆಯ ತತ್ವವನ್ನು ಅನ್ವಯಿಸಲಾಗುತ್ತಿತ್ತು. ಆದರೆ ಬ್ರಿಟಿಷರಿಗೆ ಮಾತ್ರ ಈ ನ್ಯಾಯಾಲಯದಲ್ಲಿ ಆ ತತ್ವ ಅನ್ವಯವಾಗುತ್ತಿರಲಿಲ್ಲ. ಅವರು ಕೆಲವು ವಿಶೇಷ ಸೌಕರ್ಯ ಮತ್ತು ಸವಲತ್ತುಗಳನ್ನು ಅನುಭವಿಸುತ್ತಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ತುಂಬ ಬೆಳವಣಿಗೆ ಸಾಧಿಸಲಾಯಿತು. ಇಂಗ್ಲಿಷ್ ಶಿಕ್ಷಣ, ಅತಿ ಹೆಚ್ಚಿನ ಪ್ರಗತಿ ಸಾಧಿಸಿತು. ದೀರ್ಘಾವಧಿಯಲ್ಲಿ ಇಂಗ್ಲಿಷ್ ಭಾಷೆ, ಭಾರತೀಯ ರಾಷ್ಟ್ರೀಯವಾದದ ಒಂದು ನಿರ್ಣಾಯಕ ಅಂಶವಾಗಿ ಪರಿಣಮಿಸಿತು. ಆರಂಭಿಕ ಹಂತದಲ್ಲಿ ಜನರಿಗೆ ಶಿಕ್ಷಣ ಸೌಲಭ್ಯ ನೀಡುವುದು, ತಮ್ಮ ಆಳ್ವಿಕೆಯಲ್ಲಿನ ಒಂದು ಕರ್ತವ್ಯವೆಂದು ಈಸ್ಟ್ ಇಂಡಿಯಾ ಕಂಪೆನಿಯು ಪರಿಗಣಿಸಿರಲಿಲ್ಲ. ಕಂಪೆನಿಯು ಶಿಕ್ಷಣಕ್ಕಾಗಿ ವರ್ಷವೊಂದಕ್ಕೆ ೧೦,೦೦೦ ಪೌಂಡ್‌ಗಳಿಗೂ ಕಡಿಮೆ ಮೊತ್ತದ ಹಣವನ್ನು ಖರ್ಚು ಮಾಡಬಾರದೆಂದು ೧೮೧೩ರ ಚಾರ್ಟರ್ ಕಾಯ್ದೆಯಲ್ಲಿನ ಒಂದು ವಿಧಿಯಲ್ಲಿ ಸೂಚಿಸಲಾಗಿತ್ತು. ಹಾಸ್ಯಾಸ್ಪದವೆನಿಸುವಷ್ಟು ಕಡಿಮೆಯಿದ್ದ ಮೊತ್ತವನ್ನು ಸಹ ಶಿಕ್ಷಣಕ್ಕಾಗಿ ಖರ್ಚು ಮಾಡಲಿಲ್ಲ. ಕಲ್ಕತ್ತಾದಲ್ಲಿ ಮದ್ರಸಾ ಒಂದನ್ನು

ಸ್ಥಾಪಿಸಲಾಯಿತು. ಅದರಲ್ಲಿ ಪರ್ಶಿಯನ್ ಭಾಷೆ, ಶಿಕ್ಷಣ ಮಾಧ್ಯಮವಾಗಿತ್ತು. ಸಂಸ್ಕೃತ ಭಾಷೆ ಕಲಿಸಲು ಹಿಂದೂ ಕಾಲೇಜೊಂದನ್ನು ಸ್ಥಾಪಿಸಲಾಯಿತು.

ಧಾರ್ಮಿಕ ಅಥವಾ ಸಾಂಸ್ಕೃತಿಕ ಜ್ಞಾನವನ್ನು ಪರಿಚಯಿಸಿಕೊಡಲು ದೇಶದಿಂದ ಹೊರಗೆ ಹೋಗಬಯಸುವ ಅಥವಾ ಭಾರತದಲ್ಲಿದ್ದುಕೊಂಡೇ ಆ ಕೆಲಸ ಮಾಡಬಯಸುವ ವ್ಯಕ್ತಿಗಳಿಗೆ ಸೂಕ್ತ ಸೌಲಭ್ಯಗಳನ್ನೊದಗಿಸಬೇಕೆಂಬ ಒಂದು ವಿಧಿಯನ್ನು ಸಹ ೧೮೧೩ರ ಕಾಯ್ದೆ ಒಳಗೊಂಡಿತ್ತು. ಅನೇಕ ಮಂದಿ ಧರ್ಮಪ್ರಚಾರಕರು ಭಾರತಕ್ಕೆ ಬಂದರು.

ದಕ್ಷಿಣ ಮತ್ತು ಉತ್ತರ ಭಾರತದ ಅನೇಕ ಸ್ಥಳಗಳಲ್ಲಿ ಅವರು ಹಲವಾರು ಕೇಂದ್ರಗಳನ್ನು ಸ್ಥಾಪಿಸಿದರು. ಬಾಂಬೆಯಲ್ಲಿ ೧೮೩೨ರಲ್ಲಿ ವಿಲ್ಸನ್ ಕಾಲೇಜನ್ನು ೧೮೩೭ರಲ್ಲಿ ಮದ್ರಾಸಿನಲ್ಲಿ ಕ್ರಿಶ್ಚಿಯನ್ ಕಾಲೇಜನ್ನು ೧೮೪೪ರಲ್ಲಿ ನಾಗಪುರದಲ್ಲಿ ಬಿಷಪ್ ಕಾಲೇಜನ್ನು ೧೮೫೩ರಲ್ಲಿ ಆಗ್ರಾದಲ್ಲಿ ಸೇಂಟ್ ಜಾನ್ಸ್ ಕಾಲೇಜನ್ನು ೧೮೪೧ರಲ್ಲಿ, ಮಚಲಿಪಟ್ಟಣದಲ್ಲಿ ನೊಬೆಲ್ ಕಾಲೇಜನ್ನು ಅವರು ಸ್ಥಾಪಿಸಿದರು. ಈ ಎಲ್ಲ ಶಿಕ್ಷಣ ಸಂಸ್ಥೆಗಳು ಪ್ರಖ್ಯಾತ ಕ್ರೈಸ್ತ ಪಾದ್ರಿ ಅಲೆಗ್ಸಾಂಡರ್ ಡಫ್ ಅವರ ಪ್ರಯತ್ನ ಹಾಗೂ ಮಾರ್ಗದರ್ಶನದ ಫಲವಾಗಿ ಸ್ಥಾಪಿತವಾದವು. ೧೮೧೩ ರಿಂದ ೧೮೩೫ ರವರೆಗೆ ಶಿಕ್ಷಣ ಮಾಧ್ಯಮದ ಬಗ್ಗೆ ಭಾರತ ಮತ್ತು ಇಂಗ್ಲೆಂಡಿನಲ್ಲಿ ತೀವ್ರ ವಿವಾದ ಉಂಟಾಗಿತ್ತು. ಶಿಕ್ಷಣ ಮಾಧ್ಯಮ, ಭಾರತೀಯ ಭಾಷೆಗಳಾಗಿರಬೇಕೇ ಅಥವಾ ಇಂಗ್ಲಿಷ್ ಮೂಲಕ ಶಿಕ್ಷಣ ಕೊಡಬೇಕೇ ಎಂಬುದು ಚರ್ಚಾಸ್ಪದ ವಿಷಯವಾಗಿತ್ತು. ವಿಚಿತ್ರವೆಂದರೆ, ಈಸ್ಟ್ ಇಂಡಿಯಾ ಕಂಪೆನಿಯ ಅನೇಕ ಗಣ್ಯ ಅಧಿಕಾರಿಗಳೇ, ಭಾರತೀಯ ಭಾಷೆಗಳ ಮೂಲಕ ಶಿಕ್ಷಣ ಕೊಡಬೇಕೆಂದು ವಾದಿಸುತ್ತಿದ್ದರು. ಆದರೆ ರಾಜಾರಾಮ ಮೋಹನ್‌ರಾಯ್ ಅವರ ನೇತೃತ್ವದಲ್ಲಿನ ಅನೇಕ ಭಾರತೀಯರು ಇಂಗ್ಲಿಷ್‌ನಲ್ಲೇ ಶಿಕ್ಷಣ ಕೊಡಬೇಕೆಂಬುದನ್ನು ಪ್ರತಿಪಾದಿಸುತ್ತಿದ್ದರು. ಕಡೆಗೆ ಸರ್. ವಿಲಿಯಮ್ ಬೆಂಟಿಂಕ್ ಗವರ್ನರ್ ಜನರಲ್ ಆಗಿದ್ದ ಕಾಲದಲ್ಲಿ ಈ ವಿವಾದ ಅಂತ್ಯಗೊಂಡಿತು. ಮೆಕಾಲೆ ಬರೆದಿದ್ದ ಟಿಪ್ಪಣಿಯೊಂದನ್ನು ೧೮೩೫ರಲ್ಲಿ ಅಂಗೀಕರಿಸಿದಾಗ, ಈ ವಿವಾದಕ್ಕೆ ಅಂತ್ಯ ಹಾಡಲಾಯಿತು. ಈ ಟಿಪ್ಪಣಿ ಅಂಗೀಕೃತವಾದ ನಂತರವೂ, ಶಿಕ್ಷಣ ಪಡೆದವರ ಸಂಖ್ಯೆ ಅತಿ ಕಡಿಮೆಯಿತ್ತು. ೧೮೫೬–೫೭ ರಲ್ಲಿ ಒಟ್ಟು ಆದಾಯದ ಶೇಕಡ ೧ ಕ್ಕಿಂತಲೂ ಕಡಿಮೆ ಮೊತ್ತದ ಹಣವನ್ನು ಶಿಕ್ಷಣಕ್ಕಾಗಿ ಖರ್ಚು ಮಾಡಲಾಗಿತ್ತು. ಸಮಾಧಾನಕರವಾದ ಒಂದು ಅಂಶವೆಂದರೆ, ಆ ವರ್ಷ ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದವು.

ಈ ಅವಧಿಯಲ್ಲಿ ರಾಜಾರಾಮ ಮೋಹನರಾಯ್ ಪ್ರವರ್ಧಮಾನಕ್ಕೆ ಬಂದರು. ಅವರನ್ನು ಆಧುನಿಕ ಭಾರತದ ಸಂಸ್ಥಾಪಕರೆಂದು ಕರೆದರೂ, ಅದು,

ಅತಿಶಯೋಕ್ತಿಯಲ್ಲ. ಹೊಸ ಭಾರತೀಯ ಮಧ್ಯಮ ವರ್ಗಗಳ ಜನರಲ್ಲಿ ಆತ್ಮವಿಶ್ವಾಸ ಮತ್ತು ಆಶಾಭಾವನೆಯನ್ನು ಹುಟ್ಟಿಸುವಲ್ಲಿ ರಾಜಾರಾಮ ಮೋಹನರಾಯ್ ವಹಿಸಿದ ಪಾತ್ರ ಅಸಾಧಾರಣವಾದುದಾಗಿತ್ತು. ಅವರು ಬ್ರಿಟಿಷ್ ಸಾಮ್ರಾಜ್ಯವಾದಕ್ಕೆ ತಲೆಬಾಗಲಿಲ್ಲ ಅಥವಾ ಶರಣಾಗಲಿಲ್ಲ. ಅವರು ಬ್ರಿಟಿಷರ ಕ್ರಮಗಳಿಗೆ ಪ್ರತಿರೋಧವನ್ನು ತೋರಿಸಲಿಲ್ಲ. ಇಂತಹ ಒಂದು ಚಾಣಾಕ್ಷತನದಿಂದ, ಭಾರತದ ಮಧ್ಯಮ ವರ್ಗಗಳಲ್ಲಿ ಅವರು ಆತ್ಮಸ್ಥೈರ್ಯ ತುಂಬಿದರು. ಆ ದಿನಗಳಲ್ಲಿ, ಹಿಂದೂ ಧರ್ಮವನ್ನು ಮತ್ತು ಪರಂಪರೆಯನ್ನು ಅಸಭ್ಯ ರೀತಿಯಲ್ಲಿ ತೆಗಳುವುದು ಬ್ರಿಟಿಷ್ ಕ್ರೈಸ್ತ ಪಾದ್ರಿಗಳ ಪರಿಪಾಠವಾಗಿತ್ತು. ಭಾರತದಲ್ಲಿದ್ದ ಬಾಲ್ಯವಿವಾಹ ಮತ್ತು ಸತಿಸಹಗಮನದಂತಹ ದುಷ್ಟಪದ್ಧತಿಗಳನ್ನು ರಾಜಾರಾಮ ಮೋಹನರಾಯ್ ವಿರೋಧಿಸಿದರು. ಭಾರತದಲ್ಲಿದ್ದ ಉಪನಿಷತ್ತುಗಳ ಮತ್ತು ಇತರ ಪವಿತ್ರ ಗ್ರಂಥಗಳ ಶಾಶ್ವತ ಮೌಲ್ಯಗಳನ್ನು ಊರ್ಜಿತಗೊಳಿಸಲು ಅವರು ಬಹಳ ಪ್ರಯತ್ನ ನಡೆಸಿದರು. ಅವರು ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ಅದು ಪರಿಶುದ್ಧ ಧರ್ಮ ಮತ್ತು ಸಮಾಜ ಸೇವೆಯ ಒಂದು ಪ್ರಬಲ ಕೇಂದ್ರವಾಯಿತು. ರಾಮಮೋಹನರಾಯ್, ೧೭೭೪ ರಲ್ಲಿ ಜನಿಸಿದರು. ಅವರು ಇಂಗ್ಲೆಂಡಿನ ಬ್ರಿಸ್ಟಲ್‌ನಲ್ಲಿ ೧೮೩೩ರಲ್ಲಿ ನಿಧನರಾದರು. ತೀರಿಕೊಂಡಾಗ, ಅವರಿಗೆ ೫೯ ವರ್ಷ ವಯಸ್ಸಾಗಿತ್ತು. ಎದೆಗುಂದಿಸುವ ಪರಿಸ್ಥಿತಿಯಲ್ಲೂ ಅವರು ಸ್ವಲ್ಪವೂ ಧೃತಿಗೆಡದೆ, ಅಮೋಘ ಸೇವೆ ಸಲ್ಲಿಸಿ, ತಮ್ಮ ಹೆಸರನ್ನು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಸಿದ್ದಾರೆ.

ವೃತ್ತಪತ್ರಿಕೆಗಳ ಸ್ಥಾಪನೆ, ಮತ್ತೊಂದು ಉತ್ತಮ ಬೆಳವಣಿಗೆಯಾಗಿತ್ತು. ಭಾರತೀಯ ರಾಷ್ಟ್ರೀಯ ವಾದವನ್ನು ಜನತೆಯ ಮನದಲ್ಲಿ ಜಾಗೃತಗೊಳಿಸುವಲ್ಲಿ ಪತ್ರಿಕೆಗಳು ತುಂಬ ಪ್ರಭಾವಶಾಲಿ ಪಾತ್ರವನ್ನು ನಿರ್ವಹಿಸಿದವು. ಮೊದಲ ವೃತ್ತಪತ್ರಿಕೆಗಳನ್ನು ಬ್ರಿಟಿಷರೇ ಹೊರತಂದರು. ಈ ಬ್ರಿಟಿಷರಿಗೆ, ಈಸ್ಟ್ ಇಂಡಿಯಾ ಕಂಪೆನಿಯ ಕಾರ್ಯಕಲಾಪಗಳು, ತೀವ್ರ ಅಸಮಾಧಾನವುಂಟುಮಾಡಿದ್ದವು. ೧೭೮೦ರಲ್ಲಿ, ಜೆ.ಎ. ಡಿಕಿ 'ಬೆಂಗಾಲ್ ಗೆಜೆಟ್' ಎಂಬ ಸಾಪ್ತಾಹಿಕ ಪ್ರತಿಕೆಯೊಂದನ್ನು ಹೊರತಂದರು, ಇದರಿಂದ ಐರೋಪ್ಯ ಸಮುದಾಯದ ಸದಸ್ಯರು ಮತ್ತು ವಾರೆನ್ ಹೇಸ್ಟಿಂಗ್ಸ್ ಮತ್ತು ನ್ಯಾಯಾಧೀಶ ಇಂಪೆ ಸೇರಿ, ಅನೇಕ ಉನ್ನತಾಧಿಕಾರಿಗಳು ಕೆರಳಿದರು. ಕೂಡಲೇ ಜೆ.ಎ. ಡಿಕಿ ಮೇಲೆ ಉಗ್ರ ಕ್ರಮಗಳನ್ನು ಕೈಗೊಳ್ಳಲಾಯಿತು. ಇದರಿಂದ ಅವನ ಪತ್ರಿಕಾ ವೃತ್ತಿ ಕೊನೆಗೊಂಡಿತು. ೧೮೧೯ರಲ್ಲಿ, ಲಾರ್ಡ್ ಹೇಸ್ಟಿಂಗ್ಸ್ ತೀವ್ರ ಸ್ವರೂಪದ ಪತ್ರಿಕಾ ನಿಬಂಧನೆಗಳನ್ನು ಹೊರಡಿಸಿದನು. ಈ ನಿಬಂಧನೆಗಳ ಪ್ರಕಾರ, ಇಂಗ್ಲೆಂಡ್ ಮತ್ತು ಭಾರತದಲ್ಲಿ ಕೋರ್ಟ್ ಆಫ್ ಡೈರೆಕ್ಟರ್‌ಗಳ ಮತ್ತು ಇತರ ಸಾರ್ವಜನಿಕ ಅಧಿಕಾರಿಗಳ ಬಗ್ಗೆ ಟೀಕಾತ್ಮಕ ಬರಹಗಳ ಪ್ರಕಟಣೆಯನ್ನು ನಿಷೇಧಿಸಲಾಯಿತು. ಆದರೆ ಈ ನಿಬಂಧನೆಗಳು ಜಾರಿಯಲ್ಲಿದ್ದಾಗ್ಯೂ, ಜೇಮ್ಸ್

ಸ್ಪಿಲ್ ಬಕಿಂಗ್‌ಹ್ಯಾಮ್ ಎಂಬ ಧೈರ್ಯಶಾಲಿ ಇಂಗ್ಲಿಷನೊಬ್ಬನು, 'ಕಲ್ಕಟಾ ಜರ್ನಲ್' ಎಂಬ ಪತ್ರಿಕೆಯೊಂದನ್ನು ಆರಂಭಿಸಿದನು, ಆತನು ಆ ಪತ್ರಿಕೆಯ ಮೂಲಕ ಅಧಿಕಾರಿಗಳ ಜಡತೆ ಮತ್ತು ಔದಾಸೀನ್ಯವನ್ನು, ನಿರ್ಭೀತಿಯಿಂದ ಸತ್ವಶಾಲಿಯಾಗಿ ಹೊರಗೆಳೆದನು. ಅವನ ಈ ಬರಹಗಳೂ ಭಾರಿ ಕೋಲಾಹಲವನ್ನುಂಟುಮಾಡಿದವು; ಕಡೆಗೆ, ಬಕಿಂಗ್‌ಹ್ಯಾಮ್ ಭಾರತವನ್ನು ಬಿಟ್ಟುಹೋಗಬೇಕಾಯಿತು.

ರಾಜಾರಾಮ ಮೋಹನರಾಯ್ ಕೂಡ ಭಾರತೀಯ ಪತ್ರಿಕೋದ್ಯಮದ ಸಂಸ್ಥಾಪಕರಾಗಿದ್ದರು. ಅವರು "ಕೌಮುದಿ" ಎಂಬ ಬಂಗಾಳಿ ಸಾಪ್ತಾಹಿಕದೊಡನೆ ನಿಕಟ ಸಂಬಂಧವಿಟ್ಟುಕೊಂಡಿದ್ದರು. ಹಿಂದೂ ಧರ್ಮದ ಸಂರಕ್ಷಣೆಯೇ ಈ ಪತ್ರಿಕೆಯ ಮುಖ್ಯ ಧ್ಯೇಯವಾಗಿತ್ತು. ಅವರು ಎರಡು ಪರ್ಶಿಯನ್ ಭಾಷೆಯ ಪತ್ರಿಕೆಗಳೊಂದಿಗೂ ಸಂಬಂಧ ಹೊಂದಿದ್ದರು. ೧೮೨೩ರಲ್ಲಿ ಒಂದು ನಿಯಮವನ್ನು ಹೊರಡಿಸಿ, ಲೈಸೆನ್ಸ್ ಪಡೆಯದೆ, ಯಾವುದೇ ವೃತ್ತಪತ್ರಿಕೆಯನ್ನು ಪ್ರಕಟಿಸುವಂತಿಲ್ಲವೆಂದು ಸೂಚಿಸಲಾಯಿತು. ಈ ನಿಬಂಧನೆಯನ್ನು ತಿರಸ್ಕರಿಸುವಂತೆ ಕೋರಿ, ರಾಜಾರಾಮ ಮೋಹನರಾಯ್ ಸುಪ್ರೀಮ್ ಕೋರ್ಟಿಗೆ ಒಂದು ಅರ್ಜಿಯನ್ನು ಸಲ್ಲಿಸಿದರು. ಆದರೆ ಕೋರ್ಟ್ ಆ ಅರ್ಜಿಯನ್ನು ತಿರಸ್ಕರಿಸಿತು. ಇಂತಹ ಸ್ಥಿತಿಗತಿಗಳಲ್ಲಿ ಭಾರತೀಯ ಪತ್ರಿಕೆಗಳು ಬೆಳವಣಿಗೆ ಸಾಧಿಸುವುದು ಅತಿ ದುಸ್ತರವಾದ ಕಾರ್ಯವಾಗಿತ್ತು. ೧೮೩೫ರಲ್ಲಿ ಪತ್ರಿಕೆಗಳಿಗೆ ಸ್ವಾತಂತ್ರ್ಯ ನೀಡಿದಾಗ, ಅವುಗಳ ಬೆಳವಣಿಗೆ ಬಹಳ ತ್ವರಿತಗೊಂಡಿತು. ೧೮೩೫ರಿಂದ ೧೮೫೭ ರ ನಡುವಣ ಅವಧಿಯಲ್ಲಿ, ಒಂದು ನೂರಕ್ಕೂ ಹೆಚ್ಚು ಪತ್ರಿಕೆಗಳು ಪ್ರಾರಂಭವಾದವು. ರಾಜಕಾರಣ, ಅರ್ಥಶಾಸ್ತ್ರ, ಸಾಹಿತ್ಯ, ಧರ್ಮ ಮತ್ತು ನೀತಿ–ಇವೂ ಸೇರಿದಂತೆ, ಚಿಂತನೆ ಮತ್ತು ಕ್ರಿಯೆಯ ಪ್ರತಿಯೊಂದು ಕ್ಷೇತ್ರದ ಬಗ್ಗೆ, ಈ ಪತ್ರಿಕೆಗಳಲ್ಲಿ ಅತ್ಯಂತ ವಿವರವಾದ ವರದಿಗಳು ಪ್ರಕಟವಾಗುತ್ತಿದ್ದವು.

* * * *

೪. ಮಹಾಕ್ರಾಂತಿ

ಬ್ರಿಟಿಷರು ಬರೆದಿರುವ ಇತಿಹಾಸವನ್ನು ಓದಿದಾಗ, ಭಾರತೀಯರೇ ಬ್ರಿಟಿಷರ ಆಳ್ವಿಕೆಯನ್ನು ಇಷ್ಟಪಟ್ಟಿದ್ದರೆಂಬ ಭಾವನೆ ಬರುತ್ತದೆ. ಕೆಲವೊಂದು ಸೌಲಭ್ಯಗಳನ್ನು ಅನುಭವಿಸುತ್ತಿದ್ದ ಜನರು ಮಾತ್ರ ಬ್ರಿಟಿಷರ ಆಳ್ವಿಕೆಯ ಬಗ್ಗೆ ಅಸಂತೃಪ್ತರಾಗಿದ್ದರು. ಬ್ರಿಟಿಷ್ ಆಡಳಿತವು ಆ ಸೌಲಭ್ಯಗಳನ್ನು ರದ್ದುಗೊಳಿಸಿದ್ದು ಇಲ್ಲವೇ ಅವನ್ನು ಕಡಿಮೆ ಮಾಡಿದ್ದೇ, ಅವರ ಅಸಂತೃಪ್ತಿಗೆ ಕಾರಣವಾಗಿತ್ತು ಎಂದು ಬ್ರಿಟಿಷರು ಬರೆದಿದ್ದಾರೆ. ಆದರೆ ನಿಜವಾದ ಪರಿಸ್ಥಿತಿ ಹಾಗಿರಲಿಲ್ಲ. ಅದು ಇದಕ್ಕೆ ತದ್ವಿರುದ್ಧವಾಗಿತ್ತು: ಹೊಸ ಪ್ರಭುತ್ವದ ಆಡಳಿತವನ್ನು ಜನರು ತೀವ್ರವಾಗಿ ದ್ವೇಷಿಸುತ್ತಿದ್ದರು. ಈ ದ್ವೇಷಕ್ಕೆ ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳೇ ಕಾರಣವಾಗಿದ್ದವು. ಧಾರ್ಮಿಕ ಮನೋಭಾವವಿದ್ದ ಹಿಂದೂಗಳು ಮತ್ತು ಮುಸಲ್ಮಾನರ ಮೇಲೆ, ಕ್ರೈಸ್ತ ಧರ್ಮ ಪ್ರಚಾರಕರು ತುಂಬ ಟೀಕಾಪ್ರಹಾರ ಮಾಡುತ್ತಿದ್ದರು. ಇದರಿಂದ ಭಾರತದ ಹಿಂದೂಗಳು ಮತ್ತು ಮುಸ್ಲಿಮರು ಕೋಪೋದ್ರಿಕ್ತರಾಗಿದ್ದರು. ಗೋಮಾಂಸ ಮತ್ತು ಹಂದಿ ಮಾಂಸವನ್ನು ಸೇವಿಸುತ್ತಿದ್ದ ಬ್ರಿಟಿಷರ ಪದ್ಧತಿ ಕಂಡು ಹಿಂದೂಗಳು ಅಸಹ್ಯಪಟ್ಟುಕೊಳ್ಳುತ್ತಿದ್ದರು. ಆರ್ಥಿಕವಾಗಿ ರೈತರ ಶೋಷಣೆ ನಡೆಯುತ್ತಿತ್ತು. ಅವರ ಮೇಲೆ ಭಾರಿ ಮೊತ್ತದ ತೆರಿಗೆ ಹೇರಲಾಗುತ್ತಿತ್ತು. ಕುಟೀರ ಕೈಗಾರಿಕೆಗಳಲ್ಲಿ ನಿರತರಾಗಿದ್ದ ಜನರು ನಿರುದ್ಯೋಗಿಗಳಾದರು. ಕುಶಲ ಕರ್ಮಿಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು. ಅವ್ಯವಸ್ಥೆ ಮತ್ತು ಗೊಂದಲಮಯ ಪರಿಸ್ಥಿತಿ, ಪ್ರತಿಯೊಬ್ಬರ ಮನಸ್ಸಿನಲ್ಲೂ ಅಭದ್ರತೆಯ ಭಾವನೆಯನ್ನುಂಟುಮಾಡಿತ್ತು. ಇದರಿಂದ ಭಾರತೀಯರು ತುಂಬ ಕೋಪೋದ್ರಿಕ್ತರಾದರು.

ತಾರಾಚಂದ್ ಅವರ "ಹಿಸ್ಟರಿ ಆಫ್ ದಿ ಫ್ರೀಡಮ್ ಮೂವ್‌ಮೆಂಟ್ ಇನ್ ಇಂಡಿಯಾ" ಪುಸ್ತಕದ ಎರಡನೆಯ ಸಂಪುಟದಲ್ಲಿ ೩೪ ಪುಟಗಳಿವೆ. ಈ ಪುಟಗಳಲ್ಲಿ ಭಾರತದ ನಾನಾ ಭಾಗಗಳಲ್ಲಿ ನಡೆದ ಎಲ್ಲ ವರ್ಗಗಳ ಪ್ರತಿರೋಧ ಮತ್ತು ಬಂಡಾಯವನ್ನು ವರ್ಣಿಸಲಾಗಿದೆ. ೧೭೬೪ರಲ್ಲಿ ಮೀರ್ ಕಾಸಿಮ್ ಪರಾಭವ ಗೊಂಡನಂತರವೂ, ಬಿಹಾರದ ಅನೇಕ ಜಿಲ್ಲೆಗಳಲ್ಲಿ ಪದೇ ಪದೇ ದಂಗೆಗಳು ನಡೆಯುತ್ತಲೇ ಇದ್ದವು.

ಬಿಹಾರ, ಚೋಟಾ ನಾಗಪುರ ಮತ್ತು ಒರಿಸ್ಸಾದ ಎಲ್ಲ ಗುಡ್ಡಗಾಡು ಪ್ರದೇಶಗಳಲ್ಲಿ ದಂಗೆಗಳು ನಡೆಯುತ್ತಿದ್ದುದು ಅಚ್ಚರಿಗೊಳಿಸುವ ಸಂಗತಿಯಾಗಿದೆ. ಭಾರತದಲ್ಲಿದ್ದ

ರಾಜರುಗಳೂ ಬುಡಕಟ್ಟು ಜನರನ್ನು ತಮ್ಮೊಂದಿಗೆ ಸೇರಿಸಿಕೊಳ್ಳದೆ, ಅವರ ಪಾಡನ್ನು ಅವರೇ ನೋಡಿಕೊಳ್ಳುವಂತೆ ಬಿಟ್ಟುಬಿಟ್ಟಿದ್ದರು. ಈ ಬುಡಕಟ್ಟು ಜನರು, ಯಾವುದೇ ನಿಯಮಿತ ಸರ್ಕಾರದ ಸ್ಥಾಪನೆಯನ್ನಾಗಲಿ ವಿರೋಧಿಸುತ್ತಿದ್ದರು. ೧೮೦೪ರಲ್ಲಿ ಖುರ್ದ ಎಂಬಲ್ಲಿನ ರಾಜನು ದಂಗೆಯೆದ್ದನು. ಆದರೆ ಅತಿ ಶೀಘ್ರದಲ್ಲೇ ಅವನು ಶರಣಾಗಬೇಕಾಯಿತು. ಆದರೆ ಪ್ರಜಾಸೈನ್ಯವು ರೆವಿನ್ಯೂ ಅಧಿಕಾರಿಗಳ ಮತ್ತು ಹರಿಕಾರರ ವಿರುದ್ಧ ಬಂಡಾಯವೆದ್ದಿತು. ೧೮೨೮ ರಲ್ಲಿ ಅಸ್ಸಾಮೀಯರು, ಘೋಮ್‌ದರ್ ಕೊನ್ವಾರ್ ಎಂಬಾತನನ್ನು ತಮ್ಮ ರಾಜನೆಂದು ಘೋಷಿಸಿದರು. ಆದರೆ ಅಕಾಲಿಕವಾಗಿ ನಡೆದ ಅವರ ಈ ಪ್ರಯತ್ನ ಸಫಲಗೊಳ್ಳಲಿಲ್ಲ. ೧೮೩೦ರಲ್ಲಿ ಅವರು ಮತ್ತೊಂದು ಬಂಡಾಯ ನಡೆಸುವ ಯೋಚನೆಯಲ್ಲಿದ್ದರು. ಆದರೆ ಅವರ ಈ ಸನ್ನಾಹ ಬ್ರಿಟಿಷರಿಗೆ ತಿಳಿದು, ಅವರು ಈ ಬಂಡಾಯವನ್ನು ತಪ್ಪಿಸಿದರು. ಆಗ ಬಹುಶಃ ಹಿಂದೂಗಳಿಗಿಂತ ಮುಸಲ್ಮಾನರೇ ಹೆಚ್ಚು ದುಃಖಿತರಾಗಿದ್ದಂತೆ ಕಾಣುತ್ತಿತ್ತು. ಮುಘಲ್ ಸಾಮ್ರಾಜ್ಯದ ವಿನಾಶದಿಂದ ಅವರ ಸ್ಥಾನಮಾನ ಮತ್ತು ಪ್ರತಿಷ್ಠೆಗೆ ಕುಂದುಂಟಾಗಿತ್ತು. ೧೭೭೬–೧೭೭೭ ರಲ್ಲಿ ಬಂಗಾಳದ ವಿವಿಧ ಭಾಗಗಳಲ್ಲಿ ಫಕೀರರ ತಂಡವೊಂದು ಗಲಭೆಗಳನ್ನು ನಡೆಸಿತು. ಇಸ್ಲಾಮ್‌ಅನ್ನು ಪರಿಶುದ್ಧಗೊಳಿಸುವ ಮತ್ತು ಬ್ರಿಟಿಷರನ್ನು ವಿರೋಧಿಸುವ ಉದ್ದೇಶವಿಟ್ಟುಕೊಂಡಿದ್ದ ಮತ್ತೊಂದು ತಂಡವಿತ್ತು. ಕಾದಾಡುವ ಹಿಂದೂ ಸನ್ಯಾಸಿಗಳ ಗುಂಪುಗಳು ಸಹ ಇದ್ದವು. ಈ ಗುಂಪುಗಳು ಬ್ರಿಟಿಷರನ್ನು ಪ್ರಬಲವಾಗಿ ವಿರೋಧಿಸಿದವು. ಈ ಗುಂಪುಗಳು ಬ್ರಿಟಿಷರ ವಿರುದ್ಧ ದಂಗೆ ಎದ್ದವು. ೧೭೬೩ರಲ್ಲಿ ಅವು ಕಾರ್ಖಾನೆಗಳ ಮೇಲೆ ದಾಳಿ ನಡೆಸಿ, ಬ್ರಿಟಿಷ್ ಪಡೆಗಳ ವಿರುದ್ಧ ಘರ್ಷಣೆ ನಡೆಸಿದವು. ಈ ಗುಂಪುಗಳು ಗೆರಿಲ್ಲಾ ಯುದ್ಧತಂತ್ರವನ್ನು ಅನುಸರಿಸಿದವು. ಅವರು ಆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರಿಂದ ಹಣ ವಸೂಲು ಮಾಡುತ್ತಿದ್ದರು. ಬ್ರಿಟಿಷರ ನಿಯಮಿತ ಸೈನ್ಯವನ್ನು ಎದುರಿಸಬೇಕಾಗಿ ಬಂದಾಗ, ಅವರು ಚೆದುರಿಹೋಗುತ್ತಿದ್ದರು. ಭಾರತದ ದಕ್ಷಿಣ ಭಾಗದಲ್ಲಿ ವಿಜಿಯನಗರಮ್‌ನ ರಾಜ ಮತ್ತು ತಿನ್ನವೆಲ್ಲಿಯ ಪೊಲಿಗಾರ್‌ಗಳು ದಂಗೆ ಎದ್ದಿದ್ದರು. ೧೭೯೬ರಲ್ಲಿ, ವೈನಾಡಿನ ಕೇರಳ ವರ್ಮರಾಜ, ಬಂಡಾಯವೆದ್ದನು. ೧೮೦೫ರಲ್ಲಿ ಮೈತ್ರಿ ಒಪ್ಪಂದವೊಂದನ್ನು ಬಲಾತ್ಕಾರವಾಗಿ ಹೇರಿದಾಗ, ದಿವಾನ್ ವೇಲುಥಂಪಿ, ರಾಜ್ಯದ ದೊರೆಯ ಬೆಟ್ಯಾಲಿಯನ್‌ಗಳು ದಂಗೆಯೇಳುವಂತೆ ಮಾಡಿದನು.

ಬಿಹಾರದಲ್ಲಿ ಸೈಯೆದ್ ಅಹ್ಮದ್ ಬರೇಲ್ವಿ ಎಂಬ ಧರ್ಮಶ್ರದ್ಧೆಯುಳ್ಳ ಮುಸ್ಲಿಮನು, ಹೋರಾಟಕ್ಕಾಗಿ ಮುಸ್ಲಿಮ್ ಸುಧಾರಣಾ ಚಳವಳಿಯೊಂದನ್ನು ಪ್ರಾರಂಭಿಸಿದನು. ಕೊಲ್ಹಾಪುರ, ಗುಜರಾತ್, ಸೌರಾಷ್ಟ್ರ, ರಾಜಪುತಾನ ಮತ್ತು ಉತ್ತರ ಪ್ರದೇಶ್– ಇವುಗಳಲ್ಲೂ ಇಂತಹುದೇ ದಂಗೆಗಳು ನಡೆದವು. ಸೈಯೆದ್

ಅಹ್ಮದ್ ಬರೇಲ್ವಿ ನೇತೃತ್ವದಲ್ಲಿನ ವಲಿಯುಲ್ಲಾಹ್ ಚಳವಳಿ, ಬ್ರಿಟಿಷರಿಗೆ ತೀವ್ರ ಸವಾಲನ್ನು ಒಡ್ಡಿತು. ಇದು ಬ್ರಿಟಿಷರಿಗೆ ಸಾಕಷ್ಟು ಕಳವಳವನ್ನು ಉಂಟುಮಾಡಿತು. ಆತನು, ನೂರಾರು ಜನರನ್ನು ವಾಯವ್ಯಭಾಗಕ್ಕೆ ಸ್ಥಳಾಂತರ ಮಾಡಿಸಿದನು. ಅಲ್ಲಿ ಅವರು ಬ್ರಿಟಿಷರ ವಿರುದ್ಧ ಯುದ್ಧವನ್ನು ಸಂಘಟಿಸಿದರು. ಇವೆಲ್ಲವೂ ಸ್ಥಾನಿಕವಾಗಿ ನಡೆದ ದಂಗೆಗಳಾಗಿದ್ದವು. ಆದ್ದರಿಂದ ಈ ದಂಗೆಗಳು ಅಷ್ಟೊಂದು ದೊಡ್ಡ ಪ್ರಮಾಣದ್ದಾಗಿರುತ್ತಿರಲಿಲ್ಲ. ಬ್ರಿಟಿಷರು ಈ ದಂಗೆಗಳನ್ನು ಬಹಳ ಸುಲಭವಾಗಿ ಹತ್ತಿಕ್ಕುತ್ತಿದ್ದರು. ಆದರೆ ಈ ದಂಗೆಗಳು, ಬ್ರಿಟಿಷರಿಗೆ ದೇಶಾದ್ಯಂತ ವ್ಯಾಪಿಸುತ್ತಿದ್ದ ಅಶಾಂತಿಯ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತಿದ್ದವು. ಬ್ರಿಟಿಷರು, ಜನರಿಗೆ ಇಷ್ಟವಾಗುತ್ತಿಲ್ಲವೆಂಬುದನ್ನು ಸಹ ಅವು ಸೂಚಿಸುತ್ತಿದ್ದವು. ಆದರೆ ದುರದೃಷ್ಟವಶಾತ್, ಯಶಸ್ಸಿನ ಅಮಲಿನಲ್ಲಿದ್ದ ಬ್ರಿಟಿಷ್ ಪ್ರಭುಗಳಿಗೆ ಈ ಎಚ್ಚರಿಕೆ ಸಾಲದಾಯಿತು. ಅವರು ಈ ಎಚ್ಚರಿಕೆಗೆ ಕಿವಿಗೊಡಲಿಲ್ಲ. ಆದ್ದರಿಂದ ಅವರು ಹಠಾತ್ತನೆ ೧೮೫೭ರ ಮಹಾದಂಗೆಯನ್ನು ಎದುರಿಸಬೇಕಾಯಿತು.

"೧೮೫೭ರ ದಂಗೆಯು, ಮುಸ್ಲಿಮ್ ಮತ್ತು ಹಿಂದೂ ಪಂಥಗಳ ಗಣ್ಯರ ಒಂದು ಚಳವಳಿಯಾಗಿತ್ತು. ಈ ಸಾಮಾನ್ಯ ಚಳವಳಿಯಲ್ಲಿ – ರಾಜರುಗಳು, ಭೂಮಾಲಿಕರು, ಸೈನಿಕರು, ವಿದ್ವಾಂಸರು, ವೇದಾಂತಿಗಳು ಮತ್ತು ಮೌಲ್ವಿಗಳು – ಇವರೆಲ್ಲರೂ ಸೇರಿಕೊಂಡಿದ್ದರು. ದೆಹಲಿಯ ಚಕ್ರವರ್ತಿ ಅವಧ್‌ನ ರಾಜ, ಕೆಲವು ಮಂದಿ ನವಾಬರು ಮತ್ತು ರಾಜರುಗಳು, ತಾಲ್ಲೂಕುದಾರರು ಮತ್ತು ಜಮೀನುದಾರರು, ಯೋಧರು, ಪಠಾನರು, ಮುಘಲರು, ರಜಪೂತರು, ಉತ್ತರ ಭಾರತದ ಬ್ರಾಹ್ಮಣರು ಮತ್ತು ಮೌಲ್ವಿಗಳು, ದಂಗೆಯಲ್ಲಿ ಸೇರಿಕೊಂಡಿದ್ದ ಪ್ರಮುಖರಾಗಿದ್ದರು" ಎಂದು ತಾರಾಚಂದ್ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಜವಾಹರ್‌ಲಾಲ್ ನೆಹರೂ ತಮ್ಮ "ಡಿಸ್ಕವರಿ ಆಫ್ ಇಂಡಿಯಾ"ದಲ್ಲಿ ಹೀಗೆ ಬರೆದಿದ್ದಾರೆ : "ಭಾರತದಲ್ಲಿ ನಡೆದ ದಂಗೆ ಮತ್ತು ಅದನ್ನು ಅಡಗಿಸಿದ ರೀತಿಯ ಬಗ್ಗೆ ಸುಳ್ಳಿನ ಕಂತೆಯನ್ನೇ ಬರೆಯಲಾಗಿದೆ. ಇತಿಹಾಸವನ್ನು ವಿರೂಪಗೊಳಿಸಲಾಗಿದೆ. ಈ ದಂಗೆಯ ಬಗ್ಗೆ ಭಾರತೀಯರ ವಿಚಾರ ಮತ್ತು ಚಿಂತನೆ ಏನು ಎಂಬುದು ಮುದ್ರಣವನ್ನೇ ಕಾಣವುದಿಲ್ಲ". ಸಾವರ್ಕರ್ ಸುಮಾರು ಮೂವತ್ತು ವರ್ಷಗಳ ಹಿಂದೆ "ದಿ ಹಿಸ್ಟರಿ ಆಫ್ ದಿ ವಾರ್ ಆಫ್ ಇಂಡಿಪೆಂಡೆನ್ಸ್" ಎಂಬ ಪುಸ್ತಕವನ್ನು ಬರೆದರು. ಈ ಪುಸ್ತಕವನ್ನು ಕೂಡಲೇ ನಿಷೇಧಿಸಲಾಯಿತು. ಈಗಲೂ ಅದು ನಿಷೇಧಿತವಾಗಿಯೇ ಉಳಿದಿದೆ. ಬ್ರಿಟಿಷರಲ್ಲೂ ಕೆಲವು ಪ್ರಾಮಾಣಿಕ ಹಾಗೂ ಗೌರವಾನ್ವಿತ ಇತಿಹಾಸಕಾರರಿದ್ದರು. ಅವರು ಕೆಲವು ಬಾರಿ, ಗೌಪ್ಯತೆಯ ತೆರೆ ಸರಿಸಿ, ಬ್ರಿಟಿಷರು ಅನುಸರಿಸುತ್ತಿದ್ದ ಜನಾಂಗ ಪಕ್ಷಪಾತದ ಉನ್ಮಾದತೆಯನ್ನು ಮತ್ತು ಅತ್ಯಂತ ಹೆಚ್ಚು ಪ್ರಚಲಿತವಿದ್ದ, ವಿಚಾರಣೆ ಇಲ್ಲದೆ ಶಿಕ್ಷೆ ಕೊಡುವ ಅವರ

ಗೀಳನ್ನು ಬಹಿರಂಗಪಡಿಸಿದ್ದಾರೆ. ಕಯೆ ಮತ್ತು ಮಾಲ್ಲೆಸನ್ ತಮ್ಮ 'ಹಿಸ್ಟರಿ ಆಫ್ ದಿ ಮ್ಯೂಟಿನಿ" ಎಂಬ ಪುಸ್ತಕದಲ್ಲಿ ಹಾಗೂ ಥಾಮ್‌ಸನ್ ಮತ್ತು ಗಾರ್‍ರೆಟ್ ಬರೆದಿರುವ "ರೇಸ್ ಅಂಡ್ ಫುಲ್‌ಫಿಲ್‌ಮೆಂಟ್ ಆಫ್ ಬ್ರಿಟಿಷ್ ರೂಲ್ ಇನ್ ಇಂಡಿಯಾ" ಎಂಬ ಪುಸ್ತಕದಲ್ಲಿ ನೀಡಿರುವ ವಿವರಗಳನ್ನು ಓದಿದರೆ ದಿಗಿಲಾಗುತ್ತದೆ. ಮನಸ್ಸು ಜುಗುಪ್ಸೆಗೊಳ್ಳುತ್ತದೆ. "ಹೋರಾಟದಲ್ಲಿ ತೊಡಗಿದ್ದ ಯಾವ ಭಾರತೀಯನಾಗಲಿ, ನಿಜವಾಗಿಯೂ ಅವನು ಬ್ರಿಟಿಷರಿಗಾಗಿ ಹೋರಾಡುತ್ತಿರಲಿಲ್ಲ. ಆದರೂ ಹೆಂಗಸರ ಮತ್ತು ಮಕ್ಕಳ ಕೊಲೆಪಾತಕನೆಂಬ ಅಪಖ್ಯಾತಿ ಅವನ ಬೆನ್ನೇರುತ್ತಿತ್ತು. ನಮಗೆ ಜಯವಾಗಲೆಂದು ಶುಭ ಹಾರೈಸುತ್ತಿದ್ದ ಅತ್ಯಧಿಕ ಸಂಖ್ಯೆಯ ದೆಹಲಿ ನಿವಾಸಿಗಳ ಸಾಮೂಹಿಕ ಸಂಹಾರಕ್ಕೆ ಅವನೇ ಕಾರಣನೆಂದು ಬಹಿರಂಗವಾಗಿ ಘೋಷಿಸಲಾಗುತ್ತಿತ್ತು."

ಈ ದೊಡ್ಡ ದಂಗೆಯ ಸಂಕ್ಷಿಪ್ತ ವಿವರಣೆ ನೀಡಿ, ಅದರಿಂದಲೇ ನಾನು ಸಂತೃಪ್ತಿಪಟ್ಟುಕೊಳ್ಳುತ್ತೇನೆ. ೧೮೫೭ ರ ಮಾರ್ಚ್ ೨೯ ರಂದು, ಕಲ್ಕತ್ತಾ ಸಮೀಪದ ಬ್ಯಾರಕ್‌ಪುರದಲ್ಲಿ ಸೈನ್ಯ ದಂಗೆ ಏಳುವುದರೊಂದಿಗೆ ಅದು ಪ್ರಾರಂಭವಾಯಿತು. ಅದರ ಮುಂದಿನ ವಾರಗಳು ಮತ್ತು ತಿಂಗಳುಗಳಲ್ಲಿ, ಕಲ್ಕತ್ತಾದಲ್ಲಿ ಪುನಃ ದಂಗೆ ಆರಂಭವಾಗುವುದೆಂಬ ಶಂಕೆ ತಲೆದೋರಿತ್ತು. ಇದರಿಂದ, ಯೂರೋಪಿಯನರನ್ನು ಭೀತಿ ನಿರಂತರವಾಗಿ ಕಾಡುತ್ತಲೇ ಇತ್ತು. ಕಲ್ಕತ್ತಾದ ಹೊರಗೆ ಅಲ್ಲಲ್ಲಿ ದಂಗೆಗಳು ನಡೆಯುತ್ತಲೇ ಇದ್ದವು. ಈ ಕಾರಣದಿಂದ ಡಾಕಾ, ಸಿಲ್ಹೆಟ್ ಮತ್ತು ಚಿಟ್ಟಗಾಂಗ್ ಸೇರಿದಂತೆ ಅನೇಕ ಸ್ಥಳಗಳಲ್ಲಿ ಭಯ ಆವರಿಸಿತ್ತು. ದುಂಗಲ್ ಮತ್ತು ಇತರ ಅನೇಕ ಪಟ್ಟಣಗಳಲ್ಲಿ ಗಲಭೆಗಳೂ ನಡೆಯುತ್ತಿದ್ದವು. ಏಪ್ರಿಲ್ ತಿಂಗಳಲ್ಲಿ ಮೀರತ್‌ನಲ್ಲಿ ಸಿಪಾಯಿಗಳು ದಂಗೆಯೆದ್ದರು. ಮೇ ೧೦ ರಂದು ಅವರು ಸೆರೆಮನೆಯ ಗೇಟ್‌ನ ಬೀಗವನ್ನು ಒಡೆದು ತೆಗೆದರು ಮತ್ತು ಕೈದಿಗಳನ್ನು ಮುಕ್ತಗೊಳಿಸಿದರು. ಕೆಲವು ಮಂದಿ ಇಂಗ್ಲಿಷರನ್ನು ಕಡಿದುಹಾಕಿದರು. ಮೀರತ್‌ನ ದಂಗೆಕೋರರು ದೆಹಲಿಯತ್ತ ಸಾಗಿದರು. ಅವರು ಅಲ್ಲಿ ಬಹಾದುರ್ ಶಾಹ್‌ನನ್ನು ಭಾರತದ ಚಕ್ರವರ್ತಿಯೆಂದು ಘೋಷಿಸಿದರು. ಲಖನೌ, ಅಲಿಗಢ, ಬರೈಲಿ, ಕಾನ್ಪುರ, ಅಹ್ಮದಾಬಾದ್, ಬಂಗಾಳ ಪಟ್ನಾ ಮತ್ತು ಇತರ ಹಲವಾರು ಸ್ಥಳಗಳಲ್ಲಿ ಬಂಡಾಯ ಆರಂಭವಾಯಿತು. ಜೂನ್ ತಿಂಗಳಲ್ಲಿ ಕಡೇ ಪೇಶ್ವೆಯ ದತ್ತುಪುತ್ರ ಕಾನ್ಪುರವನ್ನು ಆಕ್ರಮಿಸಿಕೊಂಡು, ತಾನೇ ಪೇಶ್ವೆಯೆಂದು ಘೋಷಿಸಿಕೊಂಡನು. ಜೂಲೈನಲ್ಲಿ ದಿನಾಪುರದ ಭಾರತೀಯ ರೆಜಿಮೆಂಟ್‌ಗಳು ದಂಗೆ ಎದ್ದವು. ಸೆಪ್ಟೆಂಬರ್ ತಿಂಗಳಲ್ಲಿ ಕನ್ವರ್‌ಸಿಂಗ್, ಮಿರ್ಜಾಪುರ್ ಜಿಲ್ಲೆಯ ಅಜಮ್‌ಗಢವನ್ನು ಆಕ್ರಮಿಸಿಕೊಂಡನು. ಈ ದಂಗೆ ವ್ಯಾಪಕವಾಗಿ ನಡೆಯಿತಾದರೂ ಅದು ವಿಫಲಗೊಂಡಿತು. ಏಕೆಂದರೆ, ಇಂಗ್ಲಿಷರನ್ನು ದ್ವೇಷಿಸುವುದರ ವಿನಾ, ಯಾವುದೇ ಸಾಮಾನ್ಯ ಉದ್ದೇಶ ಈ ದಂಗೆಕೋರರಿಗಿರಲಿಲ್ಲ. ಈ

ಬಂಡಾಯಗಾರರಿಗೆ ಯಾವುದೇ ಒಂದು ಸಂಘಟನೆಯಾಗಲಿ ಅಥವಾ ಸಾಮಾನ್ಯ ನಾಯಕನಾಗಲಿ ಇರಲಿಲ್ಲ. ೧೮೫೭ರ ಡಿಸೆಂಬರ್‌ನಲ್ಲಿ ಇಂಗ್ಲಿಷ್ ಪಡೆಗಳು ದೆಹಲಿಯನ್ನು ಮತ್ತೆ ತಮ್ಮ ವಶಕ್ಕೆ ತೆಗೆದುಕೊಂಡವು. ಬಹಾದುರ್‌ಶಾಹ್‌ನನ್ನು ಅವು ಬಂಧಿಸಿದವು ಮತ್ತು ಅನಂತರ ಅವನನ್ನು ಗಡೀಪಾರು ಮಾಡಿದವು. ಅವನ ಗಂಡು ಮಕ್ಕಳನ್ನು ಇಂಗ್ಲಿಷ್ ಪಡೆಗಳು ಗುಂಡಿಟ್ಟು ಕೊಂದುಹಾಕಿದವು. ನಾನಾ ಸಾಹೆಬ್‌ನ ಸೇನಾಧಿಪತಿ ತಾತ್ಯಾಟೋಪಿ ಮತ್ತು ಝಾನ್ಸಿಯ ರಾಣಿ ಲಕ್ಷ್ಮಿಬಾಯಿ, ಈ ದಂಗೆಯಲ್ಲಿ ತುಂಬ ಪ್ರಾಮುಖ್ಯ ಪಡೆದರು. ಆದರೆ ೧೮೫೮ ರಲ್ಲಿ ಈ ದಂಗೆಯನ್ನು ಅಂತಿಮವಾಗಿ ಅಡಗಿಸಲಾಯಿತು. ಇದಾದ ನಂತರ ದಮನಕಾರಿ ಕೃತ್ಯಗಳು ಆರಂಭವಾಗಿ, ಅವು ಘೋರ ಸ್ವರೂಪ ಪಡೆದಿದ್ದವು. ತಾರಾಚಂದ್ ಹೀಗೆ ಬರೆದಿದ್ದಾರೆ : "ದೇಶದ ಸೈನ್ಯದ ಆಧಿಪತ್ಯವನ್ನು ವಹಿಸಿದ್ದ ಮಿಲಿಟರಿ ಅಧಿಕಾರಿಗಳು ಎಸಗಿದ ದೌರ್ಜನ್ಯ ಹಾಗೂ ಅತ್ಯಾಚಾರಗಳ ಬಗ್ಗೆ ಹೇಳುವುದಕ್ಕೆ ಬಹಳ ದುಃಖವಾಗುತ್ತದೆ. ಅತ್ಯಧಿಕ ಸಂಖ್ಯೆಯ ಜನರಿಗೆ ಮರಣದಂಡನೆ ನೀಡಲಾಯಿತು. ಈ ದಂಡನೆಗೆ ಮುಂಚೆ ಯಾವುದೇ ವಿಚಾರಣೆ ನಡೆಯಲಿಲ್ಲ. ಶಿಕ್ಷೆ ಕೊಡುವಾಗ ಮಾನವ ಸಹಜವಾದ ಸಂವೇದನೆಯ ಕುರುಹೇ ಇರಲಿಲ್ಲ. ಮರಣದಂಡನೆಗೆ ಮೊದಲು ಅವರನ್ನು ತುಂಬ ಅಪಮಾನಗೊಳಿಸಲಾಗುತ್ತಿತ್ತು. ಮತ್ತು ಅತಿ ಹೇಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಸಹಾನುಭೂತಿ ಅತಿ ದೂರವಾಗಿತ್ತು. ಗ್ರಾಮಗಳನ್ನು ಸಂಪೂರ್ಣವಾಗಿ ನಾಶಪಡಿಸಲಾಯಿತು. ಸಾಮ್ರಾಜ್ಯವಾದಿಗಳಲ್ಲಿ ಮಾನವೀಯತೆಯ ದಿವಾಳಿತನ ಎದ್ದುಕಾಣುತ್ತಿತ್ತು. ನಿಷ್ಕರುಣೆಯಿಂದ ಅವರ ಮನ ಬರಡಾಗಿತ್ತು. ಸಾಮ್ರಾಜ್ಯವಾದಿಗಳ ಏಜೆಂಟರುಗಳು ಎಸಗಿದ ಕೃತ್ಯಗಳ ಅಸಹನೀಯ. ಅವರದು ಅಕ್ಷಮ್ಯ ಅಪರಾಧ. ಏಕೆಂದರೆ ಈ ಏಜೆಂಟರುಗಳು ಅನಕ್ಷರಸ್ಥರಾಗಿರಲಿಲ್ಲ. ಅಸಂಘಟಿತರಾಗಿರಲಿಲ್ಲ. ಶಿಸ್ತು ತ್ಯಜಿಸಿದವರಾಗಿರಲಿಲ್ಲ. ಅವರು ತರಬೇತಿ ಪಡೆದ ಅಧಿಕಾರಿಗಳಾಗಿದ್ದರು. ತಮ್ಮ ಧರ್ಮ ಮತ್ತು ನಾಗರಿಕತೆಯ ಬಗ್ಗೆ ಹೆಮ್ಮೆಪಡುವಂತಹವರಾಗಿದ್ದರು."

* * * *

೩. ಪ್ರಬಲಗೊಂಡ ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ರಾಷ್ಟ್ರೀಯ ಚಳವಳಿಯ ಆರಂಭ

ಭಾರತದಲ್ಲಿ ನಡೆದ ಮಹಾದಂಗೆಯ ತತ್‌ಕ್ಷಣದ ಪರಿಣಾಮವಾಗಿ, ಈಸ್ಟ್ ಇಂಡಿಯಾ ಕಂಪೆನಿಯನ್ನು ಅಂತ್ಯಗೊಳಿಸಲಾಯಿತು. ಬ್ರಿಟಿಷ್ ಸರ್ಕಾರವು ಭಾರತದ ಆಡಳಿತದ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿತು. ೧೮೩೩ರ ಚಾರ್ಟರ್ ಕಾಯ್ದೆಯ ಪ್ರಕಾರ, ಈಸ್ಟ್ ಇಂಡಿಯಾ ಕಂಪೆನಿ ಯಾವುದೇ ವಾಣಿಜ್ಯ ಕಾರ್ಯಕಲಾಪಗಳನ್ನಾಗಲಿ ನಡೆಸುವುದನ್ನು ನಿಷೇಧಿಸಲಾಗಿತ್ತು. ಆದ್ದರಿಂದ, ಸ್ವಲ್ಪಮಟ್ಟಿಗೆ ಇದು ಔಪಚಾರಿಕವಾಗಿ ನಡೆದ ಒಂದು ಬದಲಾವಣೆಯಾಗಿತ್ತು. ಬ್ರಿಟಿಷ್ ಸರ್ಕಾರವು ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡ ಈ ಸಂದರ್ಭದಲ್ಲಿ ವಿಕ್ಟೋರಿಯಾ ಮಹಾರಾಣಿ ಹೊರಡಿಸಿದ ಒಂದು ಘೋಷಣೆ ವಿಖ್ಯಾತವಾಯಿತು. ಘೋಷಣೆಯು ಈ ಅಂಶಗಳನ್ನು ಒಳಗೊಂಡಿತ್ತು: "ಯಾವ ಜನಾಂಗ ಅಥವಾ ವರ್ಣದವರಾಗಿರಲಿ ಅವರೆಲ್ಲರೂ ನಮ್ಮ ಪ್ರಜೆಗಳು. ಯಾವ ಪಕ್ಷಪಾತವೂ ಇಲ್ಲದೆ, ಅವರನ್ನು ಅನಿರ್ಬಂಧವಾಗಿ ನಮ್ಮ ಸೇವೆಗೆ ಸೇರಿಸಿಕೊಳ್ಳಬೇಕೆಂಬುದೇ ನಮ್ಮ ಅಭಿಲಾಷೆ. ಯಾವ ಉದ್ಯೋಗವಾಗಲಿ ಅದಕ್ಕೆ ಬೇಕಾದ ವಿದ್ಯಾರ್ಹತೆ, ಸಾಮರ್ಥ್ಯ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಅಂತಹವರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಬೇಕು. ದೈವಾನುಗ್ರಹದಿಂದ ಭಾರತದಲ್ಲಿ ಅಶಾಂತತೆ ಕೊನೆಗೊಂಡು ಶಾಂತಿ ನೆಲೆಸಬೇಕು. ಅಲ್ಲಿ ವಾಸಿಸುವ ನಮ್ಮ ಎಲ್ಲ ಜನರ ಒಳಿತಿಗಾಗಿ ಮತ್ತು ಕ್ಷೇಮಕ್ಕಾಗಿ ಸರ್ಕಾರವನ್ನು ನಡೆಸಿಕೊಂಡು ಬರಬೇಕೆಂಬುದೇ ನಮ್ಮ ಪ್ರಾಮಾಣಿಕ ಆಶಯವಾಗಿದೆ. ಭಾರತೀಯರ ಅಭ್ಯುದಯವೇ ನಮಗೆ ಬಲ. ಅವರಲ್ಲಿ ಉಂಟಾಗುವ ಸಂತೃಪ್ತಿಯೇ, ನಮಗೆ ಭದ್ರತೆ. ಅವರಲ್ಲಿ ಮೂಡಿಬರುವ ಕೃತಜ್ಞತೆ, ಅವರಿಂದ ನಮಗೆ ದೊರೆಯುವ, ಅತ್ಯುತ್ತಮ ಪ್ರತಿಫಲ, ನಮ್ಮ ಜನತೆಯ ಒಳಿತು ಹಾಗೂ ಕ್ಷೇಮಕ್ಕಾಗಿ, ನಮ್ಮಲ್ಲಿ ಅನೇಕ ಆಶೆ–ಆಕಾಂಕ್ಷೆಗಳಿವೆ. ಅವನ್ನು ಕಾರ್ಯಗತಗೊಳಿಸುವ ಶಕ್ತಿ–ಸಾಮರ್ಥ್ಯವನ್ನು ದೇವರು ನಮಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ದಯಪಾಲಿಸಲೆಂಬುದೇ ನಮ್ಮ ಆಶಯ." ರಾಣಿಯವರ ಈ ಘೋಷಣೆ, ರಾಜಕೀಯದಲ್ಲಿ ಕಂಡುಬರುವ ಒಂದು ದೊಡ್ಡ ಬೂಟಾಟಿಕೆಯೆಂದು ೧೮೮೩ರಲ್ಲಿ ಲಾರ್ಡ್ ಸ್ಯಾಲಿಸ್‌ಬರಿ ಸಾರಿದರು.

ಭಾರತದಲ್ಲಿ ನಡೆದ ಈ ದೊಡ್ಡ ದಂಗೆ, ಏನನ್ನೂ ಸಾಧಿಸದೆ ಕುಸಿದು ಹೋದದ್ದರಿಂದ, ಬ್ರಿಟಿಷ್ ಸಾಮ್ರಾಜ್ಯಕ್ಕೆ ಮತ್ತು ಸಾಮ್ರಾಜ್ಯವಾದಿಗಳಿಗೆ ಜಯ ಲಭಿಸಿದಂತಾಯಿತು. ಅನಂತರ ಯಾವುದೇ ರೀತಿಯ ವಿರೋಧವನ್ನಾಗಲಿ ಹತ್ತಿಕ್ಕಲು ಬ್ರಿಟಿಷರು ದೃಢನಿರ್ಧಾರ ಮಾಡಿದರು. ಆದರೆ ತಮ್ಮ ಮುಂದಿದ್ದ ಮೂರು ಧ್ಯೇಯಗಳನ್ನು ಸಾಧಿಸಲು, ವಿವಿಧ ಶಕ್ತಿಗಳನ್ನು ಒಗ್ಗೂಡಿಸುವುದು ಬ್ರಿಟಿಷ್ ಸಾಮ್ರಾಜ್ಯವಾದಿಗಳಿಗೆ ಬಹಳ ದುಸ್ತರ ಕಾರ್ಯವಾಗಿತ್ತು. ಭಾರತದ ಮೇಲೆ ನಿರಂಕುಶ ರಾಜಕೀಯ ಅಧಿಕಾರವನ್ನು ಬಲಾತ್ಕಾರದಿಂದ ಜಾರಿಗೆ ತರಬೇಕೆಂಬುದು ಬ್ರಿಟಿಷ್ ಸರ್ಕಾರದ ಅಪೇಕ್ಷೆಯಾಗಿತ್ತು. ಅಷ್ಟೇ ಅಲ್ಲದೆ ಈ ನಿರಂಕುಶಾಧಿಕಾರಕ್ಕೆ ಶಾಸನ ಸಮ್ಮತವಾದ ಆಧಾರವನ್ನು ಕಲ್ಪಿಸಬೇಕು. ಇಂತಹ ಅಧಿಕಾರವನ್ನು ಎಲ್ಲ ಭಾರತೀಯರು ಅದರಲ್ಲೂ ಮುಖ್ಯವಾಗಿ ಇಂಗ್ಲಿಷ್‌ನಲ್ಲಿ ಶಿಕ್ಷಣ ಪಡೆದ ಮಧ್ಯಮ ವರ್ಗದ ಜನರು ಒಪ್ಪಿಕೊಳ್ಳುವಂತಾಗಬೇಕು ಎಂಬುದು ಬ್ರಿಟಿಷ್ ಸರ್ಕಾರದ ಆಶಯವಾಗಿತ್ತು. ಎರಡನೆಯದಾಗಿ ಸಿವಿಲ್ ಆಡಳಿತ ವ್ಯವಸ್ಥೆಯಲ್ಲಿ ಮತ್ತು ಸೈನ್ಯದಲ್ಲಿರುವ ಎಲ್ಲ ಉನ್ನತ ಹುದ್ದೆಗಳಿಗೆ ಬ್ರಿಟಿಷ್ ರಾಷ್ಟ್ರೀಯರನ್ನೇ ನೇಮಕ ಮಾಡಬೇಕು. ಇದು, ಆವಶ್ಯಕ ಹಾಗೂ ಅನಿವಾರ್ಯ ಕ್ರಮವೆಂದು ಪರಿಗಣಿಸಲಾಗಿತ್ತು. ಬ್ರಿಟಿಷ್ ರಾಣಿಯವರು ತಮ್ಮ ಘೋಷಣೆಯಲ್ಲಿ ಸೂಚಿಸಿರುವಂತೆ, ಎಲ್ಲರಿಗೂ ಸಮಾನತೆ ಇರಬೇಕೆಂದು ಭಾರತೀಯರು ಕೇಳಿದಲ್ಲಿ, ಅವರ ಈ ಬೇಡಿಕೆಯನ್ನು ಸವಿನಯದಿಂದ, ಆದರೆ ದೃಢವಾಗಿ ತಿರಸ್ಕರಿಸಬೇಕು. ಮೂರನೆಯದಾಗಿ, ಬ್ರಿಟಿಷ್ ಉತ್ಪನ್ನಗಳಿಗೆ ಮಾತ್ರವಲ್ಲದೆ ಬ್ರಿಟಿಷ್ ಬಂಡವಾಳ ಹೂಡಿಕೆಗೂ ಹೆಚ್ಚಿನ ಅವಕಾಶವಿರುವಂತೆ ಭಾರತದ ಮಾರುಕಟ್ಟೆ ವಿಸ್ತೃತಗೊಳ್ಳಬೇಕು. ಇದು ಸಾಮ್ರಾಜ್ಯವಾದಿಗಳ ಅತಿ ಮುಖ್ಯ ಧ್ಯೇಯವೂ ಆಗಿತ್ತು. ಈ ಎಲ್ಲ ಧ್ಯೇಯಗಳನ್ನು ಸಾಧಿಸಲು, ಭಾರತದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು ಬಹಳ ಅಗತ್ಯವಾಗಿತ್ತು. ಶಾಸನಬದ್ಧ ಆಡಳಿತವನ್ನು ಜಾರಿಗೊಳಿಸಬೇಕು. ಭಾರತದಲ್ಲಿ ಬರುವ ಆದಾಯದಿಂದಲೇ ಆಡಳಿತ ನಡೆಸಲು ಸಾಧ್ಯವಾಗುವ ರೀತಿಯಲ್ಲಿ ಆಡಳಿತವನ್ನು ವ್ಯವಸ್ಥೆಗೊಳಿಸಬೇಕು. ಕಾಲ ಸಂದಂತೆ, ಬ್ರಿಟಿಷ್ ಸಾಮ್ರಾಜ್ಯವನ್ನು ಏಷ್ಯಾ ಮತ್ತು ಆಫ್ರಿಕಾದ ಇತರ ಭಾಗಗಳಿಗೆ ವಿಸ್ತರಿಸಲು ಭಾರತೀಯ ಸೈನ್ಯವೇ, ಬ್ರಿಟಿಷರಿಗೆ ಹೋರಾಟದ ಪಡೆಯಾಯಿತು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದಲ್ಲಿನ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿತ್ತು. ಯಂತ್ರದಲ್ಲಿ ತಯಾರಾದ ಉತ್ಪನ್ನಗಳು ಭಾರತಕ್ಕೆ ಉಚಿತವಾಗಿ ಆಮದಾಗುತ್ತಿತ್ತು. ಇದು ಭಾರತದ ಕುಟೀರ ಕೈಗಾರಿಕೆಗಳ ವಿನಾಶಕ್ಕೆ ಎಡೆ ಮಾಡಿಕೊಟ್ಟಿತು. ನಿರುದ್ಯೋಗಿಗಳಾದ ಕುಶಲ ಕರ್ಮಿಗಳು, ಬೇಸಾಯಗಾರರಾದರು. ಇದರಿಂದ ಭೂಮಿಯ ಮೇಲಿನ ಒತ್ತಡ ಹೆಚ್ಚುತ್ತಾ

ಹೋಯಿತು. ಈ ಅವಧಿಯಲ್ಲಿ ಶಾಂತಿ ನೆಲೆಸಿದ್ದುದರಿಂದ, ಜನಸಂಖ್ಯೆ ಅತಿ ವೇಗದಲ್ಲಿ ಏರಿತು. ಆದರೆ ಆಹಾರೋತ್ಪಾದನೆ ಮತ್ತು ಉದ್ಯೋಗಾವಕಾಶಗಳೂ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಲಿಲ್ಲ. ದೇಶದಲ್ಲಿ ಆಗ ಇದ್ದ ಆರ್ಥಿಕ ಪರಿಸ್ಥಿತಿಯನ್ನು ವಿಲಿಯಮ್ ಡಿಗ್‌ಬೈ ತಮ್ಮ "ಪ್ರಾಸ್ಪರಸ್ ಬ್ರಿಟಿಷ್ ಇಂಡಿಯಾ" ದಲ್ಲಿ, ದಾದಾಭಾಯ್ ನೌರೋಜಿ "ಪಾವರ್ಟಿ ಅಂಡ್ ಬ್ರಿಟಿಷ್ ರೂಲ್" ಎಂಬ ಪುಸ್ತಕದಲ್ಲಿ ಮತ್ತು ಆರ್.ಸಿ. ದತ್ "ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ" ಎಂಬ ಪುಸ್ತಕದಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ೧೮೦೦ ರಿಂದ ೧೮೨೫ ರ ವರೆಗೆ ಭಾರತದಲ್ಲಿ ನಾಲ್ಕು ಸಲ ಮಾತ್ರ ಕ್ಷಾಮ ಬಂದಿತ್ತು: ೧೮೭೫ ರಿಂದ ೧೯೦೦ ರವರೆಗೆ ೨೨ ಸಲ ಕ್ಷಾಮಗಳು ತಲೆದೋರಿದ್ದವು ಡಿಗ್‌ಬೈ ಈ ಕ್ಷಾಮಗಳ ಬಗ್ಗೆ ಪ್ರಸ್ತಾಪಿಸಿ, ಹೀಗೆ ಹೇಳಿದ್ದರು : "ಒಮ್ಮೆ ನಾಲ್ಕು ಸಲ ಕ್ಷಾಮಗಳು ಬಂದಿದ್ದರೆ, ಇನ್ನೊಮ್ಮೆ ೨೨ ಸಲ ಕ್ಷಾಮಗಳು ತಲೆದೋರಿದವು. ನಾವು ಏನು ಮಾಡಿದ್ದೇವೆ ಮತ್ತು ಏನನ್ನು ಮಾಡದೆ ಬಿಟ್ಟಿದ್ದೇವೆ ಎಂಬುದರ ಪರಿಣಾಮದ ಸಂಕೇತ ಈ ಕ್ಷಾಮಗಳು. ನಾನು ಯಾವ ದ್ವೇಷಾಸೂಯೆ ಇಲ್ಲದೆ, ನನಗೆ ತಿಳಿದಿರುವಂತೆ ಭಾರತದಲ್ಲಿದ್ದ ನಿಜಸಂಗತಿಗಳನ್ನು ಹೊರಗೆಡಹ ಬಯಸುತ್ತೇನೆ. ಭಾರತದ ಈ ಜನರನ್ನು ಅತ್ಯಂತ ಹೀನವಾಗಿ ನಡೆಸಿಕೊಳ್ಳಲಾಗಿದೆ. ಅವರಿಗೆ ಎಲ್ಲ ರೀತಿಯ ಅಪಮಾನವನ್ನು ಎಸಗಲಾಗಿದೆ. ಅವರು ಅಪಾರ ಕಷ್ಟಸಂಕಟಗಳನ್ನು ಅನುಭವಿಸಿದ್ದಾರೆ. ಸಂಪೂರ್ಣ ನಿರ್ದೋಷಿಗಳಾಗಿರುವ ಈ ಜನರನ್ನು ಕಂಡು ನನ್ನ ಮನದಲ್ಲಿ ದುಃಖ ಹಾಗೂ ಸಹಾನುಭೂತಿ ತುಂಬಿಕೊಂಡಿದೆ. ನಾನೊಬ್ಬ ಕರ್ತವ್ಯನಿಷ್ಠ. ನಾನು ಆ ನಿಷ್ಠೆಯನ್ನು ಉಳಿಸಿಕೊಳ್ಳಬೇಕಾದರೆ, ಭಾರತೀಯರ ಈ ವ್ಯಾಕುಲದ ಕಥೆಯನ್ನು ಹೇಳಬಾರದೆಂಬುದು ಸಹ ನನಗೆ ಗೊತ್ತಿದೆ. ಆದರೂ ನಾನು ಅದನ್ನು ಹೇಳದೆ ಇರಲಾರೆ". ಭಾರತದ ಪಾರುಪತ್ಯ ವಹಿಸಿಕೊಳ್ಳುವಂತೆ ದೈವ ಪ್ರೇರಣೆಯಾಗಿದೆಯೆಂಬ ಬ್ರಿಟಿಷರ ಮಾತನ್ನು ಡಿಗ್‌ಬೈ ಗೇಲಿ ಮಾಡಿದ್ದಾರೆ. ಈ ಮಾತಿನ ಬಗ್ಗೆ ಅವರು ತಮ್ಮ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ : "ಭಾರತವನ್ನು ಹಾಲು ಕೊಡುವ ಹಸುವಿನಂತೆ ಪರಿಗಣಿಸುವುದು ನಮಗೆ ಮೊದಲಿನಿಂದಲೂ ಬಂದಿರುವ ಅಭ್ಯಾಸ. ಈಗಿರುವ ಪರಿಸ್ಥಿತಿಯೇ ಮುಂದುವರಿದುಕೊಂಡು ಹೋಗಬೇಕೆಂಬುದು ಬ್ರಿಟಿಷರ ಅಭಿಲಾಷೆ, ಇಂತಹ ಪರಿಸ್ಥಿತಿಯನ್ನು ನಿವಾರಿಸಲು, ಯಾರಾದರೂ ಮಧ್ಯೆ ತಲೆ ಹಾಕಿದರೆ, ಅದು, ನಮ್ಮ ಪರವಾಗಿ ಅಂದರೆ ಬ್ರಿಟಿಷ್ ರಾಷ್ಟ್ರದ ಪರವಾಗಿ, ದೇವರು ನೀಡಿರುವ ಆಣತಿಗೆ ವಿರುದ್ಧವಾದ ಕ್ರಮವೆಂಬಂತೆ ನಾವು ನೋಡುತ್ತೇವೆ."

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದ ಶೇಕಡ ೯೦ರಷ್ಟು ಜನರು ಗ್ರಾಮವಾಸಿಗಳಾಗಿದ್ದರು. ಈ ಅವಧಿಯಲ್ಲಿ ಜನಸಂಖ್ಯೆ ಶೇಕಡ ೫೦ ರಷ್ಟು ಹೆಚ್ಚಿತು. ತಯಾರಿಕೆಯ ಉದ್ಯಮದಲ್ಲಿ ಯಾವ ಅಭಿವೃದ್ಧಿಯೂ ಕಂಡುಬಂದಿರಲಿಲ್ಲ. ಕೃಷಿಯೇತರ ಕಸಬುಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಲಿಲ್ಲ. ಕೃಷಿ ಉತ್ಪನ್ನಗಳನ್ನು ಬೆಳೆಯುವ ಒಟ್ಟು ಪ್ರದೇಶದ ವ್ಯಾಪ್ತಿ ಸ್ವಲ್ಪ ಹೆಚ್ಚಿತು. ಆಹಾರದ ಬೆಳೆಗಳನ್ನು ಬೆಳೆಯುವ ಭೂಮಿಯ ವ್ಯಾಪ್ತಿ, ಮೊದಲಿದ್ದಷ್ಟೇ ಇತ್ತು. ಬಹುತೇಕ ಹೆಚ್ಚಳ ಹತ್ತಿ, ಸೆಣಬು ಮತ್ತು ಪ್ಲಾಂಟೇಷನ್ – ಈ ಉದ್ಯಮಗಳಲ್ಲಿ ಮಾತ್ರ ಕಂಡುಬಂದಿತು. ಈ ಉದ್ಯಮಗಳನ್ನು ಅಭಿವೃದ್ಧಿಪಡಿಸುವ ಅಗತ್ಯ ಬಹಳ ಹೆಚ್ಚಾಗಿತ್ತು. ಏಕೆಂದರೆ, ಬ್ರಿಟನ್‌ನಲ್ಲಿ ತಯಾರಿಸಲಾದ ವಸ್ತುಗಳನ್ನೇ ಭಾರತಕ್ಕೆ ತುಂಬ ಹೆಚ್ಚಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು. ಭಾರತದಿಂದ ಕಚ್ಚಾಸಾಮಗ್ರಿಗಳು ಮತ್ತು ಕೃಷಿ ಉತ್ಪನ್ನಗಳನ್ನು ರಫ್ತು ಮಾಡಿ, ಆ ಮೂಲಕ ಗಳಿಸುವ ಹಣದಿಂದ, ಆಮದು ಮಾಡಿಕೊಂಡ ಉತ್ಪನ್ನಗಳಿಗೆ ಹಣ ಪಾವತಿ ಮಾಡಲಾಗುತ್ತಿತ್ತು. ಆದ್ದರಿಂದ ಹಣಪಾವತಿಗೆ ಈ ಉತ್ಪನ್ನಗಳ ರಫ್ತು ಏಕೈಕ ಮಾರ್ಗವಾಗಿತ್ತು.

ಭಾರತವು ಬಡತನದಿಂದ ಸೊರಗುತ್ತಿತ್ತು. ಆದರೆ ಬ್ರಿಟಿಷ್ ಅರ್ಥವ್ಯವಸ್ಥೆಯು ಮಾತ್ರ ಬಹಳ ಅಭಿವೃದ್ಧಿಗೊಂಡಿತ್ತು. ಬ್ರಿಟನ್ ತಾನು ತಯಾರಿಸಿದ ಉತ್ಪನ್ನಗಳನ್ನು ರಫ್ತು ಮಾಡುತ್ತಿತ್ತು. ಅಷ್ಟೇ ಅಲ್ಲದೆ, ಹೊರದೇಶಗಳಲ್ಲಿ ಹೂಡುವುದಕ್ಕೆ ಅಪಾರ ಬಂಡವಾಳವನ್ನು ಸಹ ಅದು ಹೊಂದಿರುತ್ತಿತ್ತು. ೧೮೫೭ರಲ್ಲಿ ಬ್ರಿಟನ್, ಒಟ್ಟು ೨೧೮ ದಶಲಕ್ಷ ಪೌಂಡ್‌ಗಳಷ್ಟು ಬಂಡವಾಳವನ್ನು ವಿದೇಶಗಳಲ್ಲಿ ತೊಡಗಿಸಿತ್ತು. ೧೮೯೨ರ ವೇಳೆಗೆ, ವಿದೇಶಗಳಲ್ಲಿ ಹೂಡಿದ ಬಂಡವಾಳದ ಮೊತ್ತ, ೨೦೦೦ ದಶಲಕ್ಷ ಪೌಂಡ್‌ಗಳಿಗೂ ಅಧಿಕ ಮೊತ್ತಕ್ಕೇರಿತು. ಬಂಡವಾಳವನ್ನು ತೊಡಗಿಸುವಲ್ಲಿ, ಭಾರತವೇ ಬ್ರಿಟಿಷರ ಮೊದಲ ಆಯ್ಕೆಯಾಗಿತ್ತು, ಪ್ರಾರಂಭದಲ್ಲಿ ಬ್ರಿಟಿಷರು ಈ ಬಂಡವಾಳವನ್ನು ರೈಲ್ವೆ ಅಭಿವೃದ್ಧಿಗಾಗಿ ವಿನಿಯೋಗಿಸಿದರು. ೧೮೫೩ ನೇ ವರ್ಷದಲ್ಲಿ ಮೊದಲು ೨೧ ಮೈಲಿಗಳಷ್ಟು ದೂರದ ರೈಲುಮಾರ್ಗವನ್ನು ನಿರ್ಮಿಸಲಾಯಿತು. ೧೮೭೫ ರವರೆಗೆ, ಬ್ರಿಟನ್ ತನ್ನ ಹಣವನ್ನು ಮುಖ್ಯವಾಗಿ ರೈಲುಮಾರ್ಗಗಳ ನಿರ್ಮಾಣಕ್ಕಾಗಿಯೇ ವಿನಿಯೋಗಿಸುತ್ತಿತ್ತು. ಬಂಡವಾಳದ ಮೇಲೆ ಶೇಕಡ ೫ ರಷ್ಟು ಪ್ರತಿಫಲ ದೊರೆಯುವುದೆಂಬ ಗ್ಯಾರಂಟಿಯನ್ನು ಸರ್ಕಾರ ನೀಡಿತ್ತು. ಈ ಗ್ಯಾರಂಟಿಯ ಆಧಾರದ ಮೇಲೆ, ಪೈಪೋಟಿಗಿಳಿದಿದ್ದ ಬ್ರಿಟಿಷ್ ಕಂಪೆನಿಗಳು, ಈ ರೈಲುಮಾರ್ಗಗಳನ್ನು ನಿರ್ಮಿಸಿದವು. ೧೮೪೮–೪೯ ರಲ್ಲಿ ರೈಲ್ವೆ ಕಂಪೆನಿಯಗಳೂ ೪೨ ಲಕ್ಷ ರೂ.ಗಳಷ್ಟು ಮೊತ್ತದ ಬಂಡವಾಳವನ್ನು ಎತ್ತಿದವು. ೧೮೬೮–೬೯ರ ವೇಳೆಗೆ, ಈ ಬಂಡವಾಳದ ಮೊತ್ತ ೮೩.೪೨ ಕೋಟಿ ರೂ.ಗಳಿಗೇರಿತು. ಸರ್ಕಾರವು ೧೮೬೯ ರಿಂದ ರೈಲುಮಾರ್ಗದ ನಿರ್ಮಾಣ ಕಾರ್ಯವನ್ನು ಆರಂಭಿಸಿತು. ಆದರೆ ಈ ರೈಲುಮಾರ್ಗಗಳ ನಿರ್ವಹಣಾ ಕಾರ್ಯವನ್ನು ಬ್ರಿಟಿಷ್ ಕಂಪೆನಿಗಳಿಗೇ ವಹಿಸಲಾಗಿತ್ತು. ಅನಂತರ ಅಂಚೆ ಮತ್ತು ತಂತಿ ಇಲಾಖೆಯನ್ನು ಅತಿ ಶೀಘ್ರಗತಿಯಲ್ಲಿ

ವಿಸ್ತರಿಸಲಾಯಿತು. ಸಾಮ್ರಾಜ್ಯವಾದಿಗಳಿಗೇ ಅತಿ ಹೆಚ್ಚಿನ ಪ್ರಯೋಜನಗಳು ಲಭಿಸುವಂತೆ ಈ ಅಂಚೆ–ತಂತಿ ಇಲಾಖೆಯನ್ನು ರೂಪಿಸಲಾಗಿತ್ತು. ಈ ಇಲಾಖೆ, ಭಾರತದ ಆರ್ಥಿಕ ಅಭಿವೃದ್ಧಿಗೆ ಎಳ್ಳಷ್ಟೂ ನೆರವಾಗುವಂತಿರಲಿಲ್ಲ. ರೈಲ್ವೆಯ ಅಭಿವೃದ್ಧಿ ಮತ್ತು ಪ್ಲಾಂಟೇಷನ್ ಉದ್ಯಮದ ಬೆಳವಣಿಗೆ – ಇವುಗಳಿಂದಾಗಿ, ಸಮುದ್ರ ಮಾರ್ಗದ ಮೂಲಕ ನಡೆಯುತ್ತಿದ್ದ ವ್ಯಾಪಾರದ ಪ್ರಮಾಣವು ಸಹ ಅಚ್ಚರಿಯಾಗುವಷ್ಟು ಅಧಿಕಗೊಂಡಿತು. ೧೮೬೦–೬೧ ರಲ್ಲಿ ಭಾರತದ ರಫ್ತುಮೌಲ್ಯ ೩೩ ಕೋಟಿ ರೂ.ಗಳಷ್ಟಿತ್ತು. ೧೯೦೭ ರ ವೇಳೆಗೆ ಈ ರಫ್ತು ೧೭೭ ಕೋಟಿ ರೂ.ಗಳ ಮಟ್ಟಕ್ಕೇರಿತು. ಇದೇ ಅವಧಿಯಲ್ಲಿ ಭಾರತದ ಆಮದು ಪ್ರಮಾಣ ಸಹ ೨೨ ಕೋಟಿಯಿಂದ ೧೨೭ ಕೋಟಿ ರೂ.ಗಳಿಗೇರಿತು.

ಭಾರತದ ಆಡಳಿತಕ್ಕಾಗಿ, ಭಾರತವೇ ಹಣ ಕೊಡಬೇಕಾಗುತ್ತಿತ್ತು. ಅಷ್ಟೇ ಅಲ್ಲದೆ, ಬ್ರಿಟಿಷ್ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವುದಕ್ಕೂ ಭಾರತವೇ ಹಣ ಪಾವತಿ ಮಾಡಬೇಕಾಗುತ್ತಿತ್ತು. ನಿವೃತ್ತ ಅಧಿಕಾರಿಗಳಿಗೆ ಪಿಂಚಣಿ ಕೊಡುವುದು ಹಾಗೂ ಭಾರತದಲ್ಲಿರುವ ಬ್ರಿಟಿಷ್ ರಾಷ್ಟ್ರೀಯರು ಸಂದಾಯ ಮಾಡುವ ಹಣದ ಮೇಲಿನ ಬಡ್ಡಿ, ಲಾಭಾಂಶ ಮುಂತಾದವುಗಳಿಗೆ ಭಾರತವೇ ಹಣ ತೆರಬೇಕಾಗುತ್ತಿತ್ತು.

ಸಾಮ್ರಾಜ್ಯವಾದಿಗಳು ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಿದ್ದಂತೆ, ಭಾರತದಿಂದ ಅಧಿಕ ಪ್ರಮಾಣದ ಸಂಪತ್ತು, ಬ್ರಿಟನ್‌ಗೆ ರವಾನೆಯಾಗತೊಡಗಿತು. ಭಾರತದಲ್ಲಿ ಬಡತನದ ಬೇಗೆ ಹೆಚ್ಚಿದ್ದಕ್ಕೆ ಇಲ್ಲಿನ ಸಂಪತ್ತು ಹೀಗೆ ಖಾಲಿಯಾಗುತ್ತಿದ್ದುದು ಸಹ ಒಂದು ಮುಖ್ಯ ಕಾರಣವಾಗಿತ್ತು. ಭಾರತವು ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾಗ, ಇಂಗ್ಲೆಂಡ್ ಅಭ್ಯುದಯದ ಉನ್ನತಿಯಲ್ಲಿತ್ತು. ಭಾರತದಿಂದ ಬ್ರಿಟನ್ನಿಗೆ ಹರಿದು ಹೋಗುತ್ತಿದ್ದ ಸಂಪತ್ತಿನ ಪ್ರವಾಣ ೧೮೩೫ರಲ್ಲಿ ೬೦ ಲಕ್ಷ ಪೌಂಡ್‌ಗಳಷ್ಟಿತ್ತೆಂದು, ದಾದಾಭಾಯ್ ನೌರೋಜಿ ಅಂದಾಜು ಮಾಡಿದ್ದರು. ಇದು ೧೮೭೦ರಲ್ಲಿ ೩ ಕೋಟಿ ೧೦ ಲಕ್ಷ ಪೌಂಡುಗಳಿಗೇರಿತು. ತಾರಾಚಂದ್ ಅವರ ಪುಸ್ತಕದಿಂದ ಈ ಕೆಳಗಿನ ಆಯ್ದ ಭಾಗದಿಂದ ಈ ಅಂದಾಜಿಗೆ ಸಮರ್ಥನೆ ದೊರೆಯುತ್ತದೆ. "೧೮೬೨ರ ಏಪ್ರಿಲ್‌ನಿಂದ ೧೯೦೫ ರ ಮಾರ್ಚ್‌ವರೆಗಿನ ೪೩ ವರ್ಷಗಳಲ್ಲಿ, ಆಮದಿಗಿಂತ ರಫ್ತು ಮಾಡಿದ ವ್ಯಾಪಾರ ಸರಕುಗಳ ಮೌಲ್ಯ ೧೨೮೯.೨೩ ಕೋಟಿ ರೂಪಾಯಿಗಳಷ್ಟಿತ್ತು. ಇದರಿಂದ ವರ್ಷಕ್ಕೆ ಸರಾಸರಿ ೨೯.೯ ಕೋಟಿ ರೂಪಾಯಿಗಳಷ್ಟು ಸರಕುಗಳನ್ನು ರಫ್ತು ಮಾಡಿದಂತಾಗಿತ್ತು. ಇದಕ್ಕೆ ಪ್ರತಿಯಾಗಿ ಭಾರತ ೫೦೮.೮೧ ಕೋಟಿ ರೂ.ಗಳಷ್ಟು ಬೆಲೆಯ ಬಂಗಾರ ಮತ್ತು ಬೆಳ್ಳಿಯನ್ನು ಆಮದು ಮಾಡಿಕೊಂಡಿತು. ಉಳಿದ ೭೮೦.೪೨ ಕೋಟಿ ರೂ.ಗಳನ್ನು ಭಾರತ, ಬ್ರಿಟನ್‌ನೊಡನೆ ತನಗಿದ್ದ ರಾಜಕೀಯ ಮತ್ತು ಆರ್ಥಿಕ ಸಂಬಂಧಗಳ ಕಾರಣ, ನಿರ್ವಹಿಸಬೇಕಾಗಿದ್ದ ಹೊಣೆಗಾರಿಕೆಗಳಿಗಾಗಿ ವೆಚ್ಚ ಮಾಡಲಾಯಿತು. ಆದ್ದರಿಂದ

ಇದನ್ನು "ಯಾವುದೇ ಪ್ರತಿಫಲವೂ ದೊರೆಯದ" ರಫ್ತು ವಹಿವಾಟೆಂದು ಪರಿಗಣಿಸಬೇಕು. ಸರ್ಕಾರಿ ವೆಚ್ಚದ ಹೊರೆಯಂತೂ, ಸಹಿಸಲಸದಳವಾದಷ್ಟು ಹೆಚ್ಚಾಗಿತ್ತು. ಸರ್ಕಾರಿ ವೆಚ್ಚ ೧೮೫೦–೫೧ರಲ್ಲಿ ೨೭ ಕೋಟಿ ರೂ.ಗಳಷ್ಟಿತ್ತು. ೧೯೦೪–೦೫ರಲ್ಲಿ ಅದು ೧೦೧ ಕೋಟಿ ರೂ.ಗಳಿಗೇರಿತು. ಈ ವೆಚ್ಚದಲ್ಲಿನ ಬಹುಭಾಗವನ್ನು ಸೈನ್ಯ, ನಾಗರಿಕ ಆಡಳಿತ ಮತ್ತು ಅನುತ್ಪಾದಕ ಉದ್ದೇಶಗಳಿಗಾಗಿ ಪಡೆದಿದ್ದ ಸಾಲಗಳ ಮೇಲಿನ ಬಡ್ಡಿ ಪಾವತಿ –ಇವುಗಳಿಗಾಗಿ ಉಪಯೋಗಿಸಲಾಗುತ್ತಿತ್ತು. ಸೈನ್ಯದಲ್ಲಿದ್ದ ಸಿಬ್ಬಂದಿ, ಸಿವಿಲ್ ಉದ್ಯೋಗಿಗಳು, ಪೂರೈಕೆದಾರರು, ಕಂಟ್ರಾಕ್ಟರ್‌ಗಳು ಮತ್ತು ಸರ್ಕಾರಿ ಬಾಂಡ್‌ಗಳ ಮೇಲೆ ಬಡ್ಡಿ ಸ್ವೀಕರಿಸುತ್ತಿದ್ದವರು – ಎಲ್ಲರೂ ವಿದೇಶೀಯರಾಗಿದ್ದರು. ಭಾರತದಲ್ಲಿ ಸಾರ್ವಜನಿಕರಿಂದ ವಸೂಲು ಮಾಡಿದ ಹಣವನ್ನು ವಿದೇಶೀಯರ ಪ್ರಯೋಜನಕ್ಕಾಗಿ ವೆಚ್ಚ ಮಾಡಲಾಗುತ್ತಿತ್ತು. ತೆರಿಗೆ ಪದ್ಧತಿ ಸಹ ಜನರ ಮೇಲೆ ಹೆಚ್ಚಿನ ಭಾರವನ್ನು ಹೇರಿತ್ತು. ೧೮೬೦ರಲ್ಲಿ ಸ್ವಲ್ಪ ಕಾಲ ಪ್ರಯೋಗಾರ್ಥವಾಗಿ ಜಾರಿಗೆ ತಂದಿದ್ದ ವರಮಾನ ತೆರಿಗೆಯನ್ನು ಅನಂತರ ಹಿಂತೆಗೆದುಕೊಳ್ಳಲಾಯಿತು. ಭೂಕಂದಾಯ, ಉಪ್ಪಿನ ಮೇಲಿನ ತೆರಿಗೆ, ಮಾದಕ ಪಾನೀಯಗಳು ಮತ್ತು ಔಷಧ ಸಾಮಗ್ರಿಗಳ ಮೇಲಿನ ಎಕ್ಸೈಸ್ ಸುಂಕಗಳು ಹಾಗೂ ಸ್ಟಾಂಪ್‌ಗಳ ಮಾರಾಟ – ಇವು ಅತಿ ಮುಖ್ಯವಾದ ಆದಾಯ ಮೂಲಗಳಾಗಿದ್ದವು. ಈ ಎಲ್ಲ ತೆರಿಗೆಗಳ ಹೊರೆ ಗ್ರಾಮಾಂತರ ವಾಸಿಗಳ ಮೇಲೆ ಬೀಳುತ್ತಿತ್ತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ತನ್ನ ಮುಂಚಿನ ದಿನಗಳಲ್ಲಿ ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆದುಹಾಕಬೇಕು ಮತ್ತು ಭೂಕಂದಾಯದ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂದು ಸತತವಾಗಿ ಒತ್ತಾಯಪಡಿಸುತ್ತಿತ್ತು. ಇವೇ ಅದರ ಮುಖ್ಯ ಬೇಡಿಕೆಗಳಾಗಿದ್ದವು. ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ, ಇಂಗ್ಲೆಂಡ್ ಕೈಗಾರಿಕೀಕರಣವನ್ನು ಸಾಧಿಸಿತ್ತು. ಆದ್ದರಿಂದ ಮುಕ್ತ ವ್ಯಾಪಾರ, ಅದಕ್ಕೆ ಬಹಳ ಪ್ರಯೋಜನಕಾರಿಯಾಗಿರುತ್ತಿತ್ತು. ಈ ಸ್ವಾರ್ಥ ಉದ್ದೇಶದಿಂದ, ಬ್ರಿಟನ್ ಭಾರತದ ಮೇಲೆ, ಮುಕ್ತ ವ್ಯಾಪಾರ ಪದ್ಧತಿಯನ್ನು ಹೇರಿತು. ಯಾವ ಔಪಚಾರಿಕ ವಿಧಾನವನ್ನು ಅನುಸರಿಸದೇ ಅದು ಇಂತಹ ಕ್ರಮವನ್ನು ಕೈಗೊಂಡಿತು. ಮುಂಚಿನ ವರ್ಷಗಳಲ್ಲಿ ಇಂಗ್ಲೆಂಡ್ ಭಾರತದಿಂದ ಹತ್ತಿ ಬಟ್ಟೆಗಳನ್ನು ಆಮದು ಮಾಡಿಕೊಳ್ಳುತ್ತಿತ್ತು; ಆಗ, ಅದು ಶೇಕಡ ೪೦ ರಿಂದ ೫೦ರಷ್ಟು ಆಮದು ಸುಂಕವನ್ನು ತೆರಬೇಕಾಗುತ್ತಿತ್ತು. ಬ್ರಿಟಿಷ್ ಬಟ್ಟೆಗಳ ಮೇಲೆ ಶೇಕಡ 3½ ಯಷ್ಟು ಅಲ್ಪದರದ ಆಮದು ಸುಂಕ ವಿಧಿಸುವುದು, ಆದಾಯ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಅಗತ್ಯವೆಂದು ಭಾರತ ಸರ್ಕಾರ ಅಭಿಪ್ರಾಯಪಟ್ಟಿತು. ಆಗ, ಮುಕ್ತ ವ್ಯಾಪಾರದ ಹಿತದೃಷ್ಟಿಯಿಂದ ಭಾರತದಲ್ಲಿ ತಯಾರಾದ ಹತ್ತಿ ಬಟ್ಟೆಗಳ ಮೇಲೂ, ಶೇಕಡ 3½ ಯ ಸಮಾನ ದರದಲ್ಲಿ ಆಮದು ಸುಂಕ ವಿಧಿಸುವುದು

ಅಗತ್ಯವೆಂದು ಬ್ರಿಟಿಷರು ಭಾವಿಸಿದರು. ಭಾರತದಲ್ಲಿ ಜವಳೀ ಕೈಗಾರಿಕೆ, ಆಗತಾನೇ ರೂಪುಗೊಳ್ಳತೊಡಗಿತ್ತು. ಅಂತಹ ಸಮಯದಲ್ಲಿ ಈ ಎಕ್ಸೈಸ್ ಸುಂಕ ವಿಧಿಸಿದ್ದರಿಂದ, ಅದರ ಅಭಿವೃದ್ಧಿ ಕುಂಠಿತಗೊಂಡಿತು. ಶೇಕಡ 3½ ಯ ಈ ಎಕ್ಸೈಸ್ ಸುಂಕ, ಬ್ರಿಟಿಷ್ ಸಾಮ್ರಾಜ್ಯವಾದಿಗಳ ಪಕ್ಷಪಾತ ನೀತಿಯ ಅತ್ಯಂತ ಕಟು ನಿದರ್ಶನವಾಗಿದೆ.

ದಂಗೆಯ ನಂತರ, ಭಾರತೀಯರು ಬ್ರಿಟಿಷರ ಆರ್ಥಿಕ ಶೋಷಣೆಗಿಂತಲೂ ಹೆಚ್ಚಾಗಿ ಅವರ ಉದ್ಧಟತನವನ್ನು ಕಂಡು ಹೆಚ್ಚು ಕುಪಿತರಾದರು. ಬ್ರಿಟಿಷ್ ಸಾಮ್ರಾಜ್ಯವಾದಿಗಳ ಗರ್ವ ಮಿತಿಮೀರಿ ಹೋಗಿತ್ತು. ಇದರಿಂದ ಭಾರತೀಯರ ಆಕ್ರೋಶ ಮತ್ತಷ್ಟು ಅಧಿಕಗೊಂಡಿತು. ಹಿಂದೂಗಳ ಮತ್ತು ಮುಸ್ಲಿಮರ ಧರ್ಮ ಮತ್ತು ಸಂಸ್ಕೃತಿ, ಮೂಢನಂಬಿಕೆ ಮತ್ತು ಅಂಧಶ್ರದ್ಧೆಯಿಂದ ಕೂಡಿವೆಯೆಂದು, ಕ್ರೈಸ್ತ ಧರ್ಮ ಪ್ರಚಾರಕರು ನಿರೂಪಿಸತೊಡಗಿದರು. ಇವೆರಡೂ ಬಹಳ ಕೀಳು ಮಟ್ಟದ ಧರ್ಮಗಳಾಗಿವೆಯೆಂದು ಅವರು ಪ್ರಚಾರ ಮಾಡುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯ ದೈವದತ್ತವಾದುದೆಂಬ ತತ್ವವನ್ನು ಅವರು ಉಪದೇಶಿಸುತ್ತಿದ್ದರು. ಬಿಳಿಯರ ಮೇಲಿನ ಹೊರೆಯನ್ನು ತಮ್ಮ ಹೆಗಲಿಗೆ ಹಾಕಕೊಂಡು, “ನೀವು ಹೊಸದಾಗಿ ಪಡೆದುಕೊಂಡಿರುವ ದಾಕ್ಷಿಣಾತ್ಯರ ಸೇವೆ ಮಾಡಿ ಧನ್ಯರಾಗಿರಿ” ಎಂದು ರುಡ್‌ಯಾರ್ಡ್ ಕಿಪ್ಲಿಂಗ್ ತಮ್ಮ ದೇಶಬಾಂಧವರಿಗೆ ಕರೆ ನೀಡಿದರು. ಈ ಸಂದರ್ಭದಲ್ಲಿ ತಾರಾಚಂದ್ ಅವರ ಕೆಲವು ಮಾತುಗಳನ್ನು ಉಲ್ಲೇಖಿಸಬಹುದಾಗಿದೆ: “ಸಾಮ್ರಾಜ್ಯದಾಹದಿಂದ ಹಪಹಪಿಸುತ್ತಿದ್ದ ಹೊರಗಿನ ಶಕ್ತಿಗಳ ಕಸರತ್ತಿಗೆ, ಭಾರತ ಒಂದು ಸರಿಯಾದ ಕ್ಷೇತ್ರವೆನಿಸಿತು. ಸಾಮ್ರಾಜ್ಯವಾದಿಗಳಲ್ಲಿ ಹುದುಗಿದ್ದ ದೈತ್ಯ ಶಕ್ತಿಯ ಪ್ರತಾಪ, ನಾನಾ ರೂಪಗಳಲ್ಲಿ ಅಭಿವ್ಯಕ್ತಗೊಂಡಿತು. ಸಾಮ್ರಾಜ್ಯವಾದಿಗಳು ಭಾರತದ ಪ್ರಜೆಗಳ ಮೇಲೆ, ತಮ್ಮ ಪ್ರಭುತ್ವದ ಪರಮ ಶ್ರೇಷ್ಠತೆಯನ್ನು ತೋರಿಸಿಕೊಳ್ಳತೊಡಗಿದರು. ಎಲ್ಲ ಭಾರತೀಯರನ್ನು ಅತಿ ನಿಕೃಷ್ಟವಾಗಿ ಕಂಡರು. ಅವರನ್ನು ಅಪಮಾನಗೊಳಿಸಿದರು. ಅವರ ಮೇಲೆ ನಿಂದನೆಗಳ ಮಳೆಗರೆದರು. ಬಡಜನರನ್ನು ಬಹಳ ಹೀನಸ್ಥಿತಿಯಲ್ಲಿಟ್ಟರು. ಅವರೊಂದಿಗೆ ತುಂಬ ಕ್ರೂರವಾಗಿ ವರ್ತಿಸಿದರು. ಎಲ್ಲ ಅಧಿಕಾರಯುತ ಮತ್ತು ಜವಾಬ್ದಾರಿಯುತ ಸ್ಥಾನಗಳಿಂದ ಭಾರತೀಯರನ್ನು ದೂರವಿಟ್ಟರು. ಸ್ವಯಮಾಡಳಿತ ಸಂಸ್ಥೆಗಳನ್ನು ನಿರ್ವಹಿಸಲು ಸಮರ್ಥರಾಗಿದ್ದ ಭಾರತೀಯರಿಗೆ ಆ ಅವಕಾಶ ದೊರೆಯದಂತೆ ನೋಡಿಕೊಂಡರು”. ಸಾಮಾಜಿಕ ಜೀವನದಲ್ಲಿ ಭಾರತೀಯರನ್ನು ದೂರವಿಟ್ಟು, ಅವರ ವಿರುದ್ಧ ದ್ವೇಷವನ್ನು ಕೆರಳಿಸುವಂತಹ ಪುಸ್ತಕಗಳನ್ನೇ ಸಿವಿಲ್ ಸರ್ವಿಸಸ್ ಕ್ಯಾಡೆಟ್‌ಗಳಿಗೆ ಒದಗಿಸಲಾಗುತ್ತಿತ್ತು. ಹೆನ್ರಿ ಇಲಿಯಟ್ ಬರೆದ ‘ಹಿಸ್ಟರಿ ಆಫ್ ಇಂಡಿಯಾ’ ಪುಸ್ತಕ, ಹಿಂದೂ ಮತ್ತು ಮುಸಲ್ಮಾನರ ನಡುವಣ ಸಂಬಂಧಗಳಲ್ಲಿ ಹುಳಿ ಹಿಂಡಿತು. ಈ ಪುಸ್ತಕವು ಬ್ರಿಟಿಷರಲ್ಲಿ ಭಾರತೀಯರ ಮೇಲಿನ

ದ್ವೇಷಭಾವನೆಯನ್ನು ಮತ್ತಷ್ಟು ಬಲಪಡಿಸಿತು. ಜೇಮ್ಸ್ ಮಿಲ್ ತಮ್ಮ ಇತಿಹಾಸಗ್ರಂಥದಲ್ಲಿ ಹಿಂದೂ ಸಂಸ್ಕತಿ ಮತ್ತು ಹಿಂದೂ ಲಕ್ಷಣವನ್ನು ಖಂಡಿಸುವಲ್ಲಿ ತಮ್ಮಲ್ಲಿದ್ದ ಎಲ್ಲ ಮಾಹಿತಿಗಳನ್ನು ಮತ್ತು ಶಬ್ದ ಭಂಡಾರವನ್ನು ಮುಗಿಸಿಬಿಟ್ಟಿದ್ದಾರೆ. ಅವರು ಬರೆದಿರುವ ನಮ್ಮ ದೇಶದ ಇತಿಹಾಸ, ಬರೀ ಗಲಭೆಗಳು, ದೊಂಬಿಗಳು, ಕಗ್ಗೊಲೆಗಳು ಮತ್ತು ಅನಾಗರಿಕ ಹೋರಾಟಗಳನ್ನು ಬಿಟ್ಟರೆ, ಮತ್ಯಾವ ಉಪಯುಕ್ತ ವಿಷಯವನ್ನೂ ಒಳಗೊಂಡಿಲ್ಲ. ಭಾರತ ವಿರೋಧಿ ಭಾವನೆಯು ಅತ್ಯಂತ ಭೀಕರವಾದ ಪರಿಣಾಮಗಳನ್ನುಂಟುಮಾಡಿತು. ನ್ಯಾಯವೊದಗಿಸುವಲ್ಲಿ ಭಾರತೀಯರು ಮತ್ತು ಯೂರೋಪಿಯನರ ನಡುವೆ ಸಮಾನತೆಯಿರಲಿಲ್ಲ. ಭಾರತೀಯರಿಗೆ ಸರಿಯಾಗಿ ನ್ಯಾಯ ದೊರೆಯುತ್ತಿರಲಿಲ್ಲ. ಲಾರ್ಡ್ ರಿಪನ್ ವೈಸ್‌ರಾಯ್ ಆಗಿದ್ದಾಗ, ಭಾರತೀಯ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ, ಯೂರೋಪಿಯನ್ ಸಮುದಾಯವನ್ನು ತರಲು ಬಹಳ ಪ್ರಯತ್ನ ಮಾಡಿದನು. ಆಗ ಭಾರತದಲ್ಲಿದ್ದ ಆ್ಯಂಗ್ಲೋಇಂಡಿಯನರು ಮತ್ತು ಇಂಗ್ಲೆಂಡ್‌ನಲ್ಲಿದ್ದ ಅವರ ಬೆಂಬಲಿಗರು, ಈ ಪ್ರಯತ್ನದ ವಿರುದ್ಧ ದೊಡ್ಡ ಕೂಗೆಬ್ಬಿಸಿದರು. ಕಡೆಗೆ ಭಾರತೀಯ ನ್ಯಾಯಾಧೀಶರಿಗೆ ಇಂತಹ ಅವಕಾಶ ಕಲ್ಪಿಸಿಕೊಡುವ ಪ್ರಯತ್ನವನ್ನು ಕೈಬಿಡಬೇಕಾಯಿತು. ಎಲ್ಲ ದೊಡ್ಡ ಪಟ್ಟಣಗಳಲ್ಲೂ ಯೂರೋಪಿಯನರು ತಮ್ಮದೇ ಆದ ವಿಶೇಷ ಕ್ಲಬ್‌ಗಳನ್ನು ಹೊಂದಿದ್ದರು. ಭಾರತೀಯರು ಎಷ್ಟೇ ಉನ್ನತ ಸ್ಥಾನಮಾನವನ್ನು ಹೊಂದಿದವರಾಗಿರಲಿ, ಅವರಿಗೆ ಈ ಕ್ಲಬ್ ಪ್ರವೇಶಿಸಲು ಅವಕಾಶವಿರಲಿಲ್ಲ : ಬ್ರಿಟಿಷರು ತಮ್ಮದೇ ಆದ ಒಂದು ಪ್ರತ್ಯೇಕ ಹಾಗೂ ಪ್ರಧಾನ ಪಂಗಡವನ್ನು ಸ್ಥಾಪಿಸಿಕೊಂಡಿದ್ದರು.

ಆದ್ದರಿಂದ, ಸರ್ಕಾರಿ ಸೇವೆಯಲ್ಲಿನ ಎಲ್ಲ ಉನ್ನತ ಹುದ್ದೆಗಳನ್ನು ಯೂರೋಪಿಯನರಿಗಾಗಿಯೇ ಮೀಸಲಾಗಿಡುತ್ತಿದ್ದುದರಲ್ಲಿ ಕಿಂಚಿತ್ತೂ ಆಶ್ಚರ್ಯವಿಲ್ಲ. ೧೮೩೩ರ ಚಾರ್ಟರ್ ಕಾಯ್ದೆಯಲ್ಲಿ ನೀಡಲಾಗಿದ್ದ ಆಶ್ವಾಸನೆಗಳನ್ನು ಮತ್ತು ೧೮೫೮ರ ಮಹಾರಾಣಿಯವರ ಘೋಷಣೆಯನ್ನು, ಪದೇ ಪದೇ ಬ್ರಿಟಿಷ್ ಪಾರ್ಲಿಮೆಂಟಿನ ಗಮನಕ್ಕೆ ತರಲಾಗುತ್ತಿತ್ತು. ವಿದ್ಯಾರ್ಹತೆ, ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯುಳ್ಳ ಭಾರತೀಯರನ್ನು ಅನಿರ್ಬಂಧವಾಗಿ ಮತ್ತು ನಿಷ್ಪಕ್ಷಪಾತವಾಗಿ, ಸರ್ಕಾರಿ ಸೇವೆಗೆ ಸೇರಿಸಿಕೊಳ್ಳಬೇಕೆಂಬ ಮಹಾರಾಣಿಯವರ ಘೋಷಣೆ ಕಾರ್ಯಗತವಾಗಿಲ್ಲವೆಂದು ಪಾರ್ಲಿಮೆಂಟಿಗೆ ತಿಳಿಸಲಾಯಿತು. ಈ ಕರ್ತವ್ಯವನ್ನು ಈಡೇರಿಸದೇ ಇದ್ದುದಕ್ಕೆ ಇಲ್ಲಸಲ್ಲದ ನೆಪಗಳನ್ನು ಮುಂದೊಡ್ಡಲಾಗುತ್ತಿತ್ತು. ನಂಬಲಸಾಧ್ಯವಾದಂತಹ ಕಾರಣಗಳನ್ನು ನೀಡಲಾಗುತ್ತಿತ್ತು, ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಕೆಲವರನ್ನು ನಾಮಕರಣ ಮಾಡಲು ಸರ್ಕಾರಕ್ಕೆ ಸಾಧ್ಯವಾಗುವಂತೆ, ಸರ್ ಸ್ಟಾಫೋರ್ಡ್ ನಾರ್ತ್‌ಬ್ರೂಕ್ ಕಾಮನ್ಸ್ ಸಭೆಯಲ್ಲಿ ಒಂದು ವಿಧಿಯನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಹೀಗೆ ತಿಳಿಸಿದರು :

"ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಸೂಚಿಸಲಾಗಿರುವ ನಿಯಮಗಳು ೧೮೩೩ರ ಕಾಯ್ದೆಯನ್ನು ನಿರರ್ಥಕಗೊಳಿಸುವುದೆಂದು ನಾನು ಯಾವಾಗಲೂ ಭಾವಿಸುತ್ತಾ ಬಂದಿದ್ದೇನೆ". ಮೇಲೆ ಸೂಚಿಸಲಾದ ವಿಧಿಯನ್ನು ಪಾರ್ಲಿಮೆಂಟ್ ಅಂಗೀಕರಿಸಿತು. ಆದರೂ ಅನೇಕ ವರ್ಷಗಳವರೆಗೆ ಆ ವಿಧಿಯನ್ನು ಕಾರ್ಯರೂಪಕ್ಕೆ ತರಲೇ ಇಲ್ಲ. ಕರಾರುಬದ್ಧ ಸೇವೆಗಳಿಗೆ ಮಾತ್ರವಲ್ಲದೆ, ಕರಾರುಬದ್ಧವಲ್ಲದ ಸೇವೆಗಳ (Uncovenanted Services) ಉನ್ನತ ಸಂಬಳದ ಹುದ್ದೆಗಳಿಗೆ ಸಹ, ಭಾರತೀಯರನ್ನು ನೇಮಿಸಿಕೊಳ್ಳದೇ ಅವರನ್ನು ದೂರವಿಡಲಾಗಿತ್ತು. ಈ ಹುದ್ದೆಗಳಲ್ಲಿ ಕೆಲಸ ಮಾಡಲು ಭಾರತೀಯರು ಅರ್ಹತೆಯುಳ್ಳವರಾಗಿದ್ದರೂ, ಅತಿ ಕೆಲವೇ ಮಂದಿ ಭಾರತೀಯರನ್ನು ಮಾತ್ರ, ಆ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿತ್ತು. ದಾದಾಭಾಯ್ ನೌರೋಜಿ ತಿಳಿಸಿರುವ ಪ್ರಕಾರ, ೧೮೬೭ ರಲ್ಲಿ, ೧೫೨೩ ಹುದ್ದೆಗಳ ಪೈಕಿ, ೧೩೦೨ ಹುದ್ದೆಗಳಲ್ಲಿ ಯೂರೋಪಿಯನರಿದ್ದರು. ಭಾರತೀಯರು ೨೨೧ ಹುದ್ದೆಗಳಿಗೆ ಮಾತ್ರ ನೇಮಕಗೊಂಡಿದ್ದರು. ಈ ೨೨೧ ಮಂದಿ ಭಾರತೀಯರಲ್ಲಿ ೧೪ ಮಂದಿ ಮಾತ್ರ ೧೦೦೦ ರೂ.ಗಳಿಗೂ ಹೆಚ್ಚು ಸಂಬಳ ಪಡೆಯುತ್ತಿದ್ದರು. ೧೩೦೨ ಮಂದಿ ಯುರೋಪಿಯನರಲ್ಲಿ, ಬಹುತೇಕ ಮಂದಿಗೆ ೧೦೦೦ ರೂ.ಗಳಿಗೂ ಅಧಿಕ ಸಂಬಳ ಬರುತ್ತಿತ್ತೆಂದು ಗ್ರಹಿಸುವುದರಲ್ಲಿ ತಪ್ಪಿಲ್ಲ.

* * * *

೬. ಭಾರತೀಯರ ಪ್ರತಿಕ್ರಿಯೆ

ಭಾರತೀಯರನ್ನು ಪರಾಧೀನತೆಯ ಮತ್ತು ಸತ್ವಹೀನತೆಯ ಭಾವನೆಗಳು ಕಾಡುತ್ತಿದ್ದವು. ಹಾಗೆಂದು, ಅವರು ಪ್ರತಿಕ್ರಿಯೆ ತೋರದೆ ಸುಮ್ಮನಿರಲಿಲ್ಲ. ಅವರು ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬಯಸಿದರು. ತಮ್ಮ ತೊಂದರೆಗಳು ಹಾಗೂ ಸಮಸ್ಯೆಗಳನ್ನು ಹೊರಗೆಡಹಲಿಚ್ಛಿಸಿದರು. ಭಾರತೀಯರ ಈ ಪ್ರತಿಕ್ರಿಯೆ ಧಾರ್ಮಿಕ ಚಳವಳಿಗಳ ರೂಪ ಪಡೆಯಿತು. ಈ ಚಳವಳಿಗಳಲ್ಲಿ ಭಾರತೀಯ ಧರ್ಮಗಳ ಕೀರ್ತಿ, ಘನತೆ ಮತ್ತು ಗೌರವಗಳನ್ನು ಎತ್ತಿಹಿಡಿಯಲಾಯಿತು. ಮೊದಲು ಪತ್ರಿಕೆಗಳಿಗೆ ಬ್ರಿಟಿಷ್ ಸಾಮ್ರಾಜ್ಯವಾದವನ್ನು ವಿರೋಧಿಸುವ ಎದೆಗಾರಿಕೆ ಇರಲಿಲ್ಲ : ಈಗ ಆ ಪತ್ರಿಕೆಗಳು ಜನರ ಆಕ್ರೋಶವನ್ನು ಪ್ರತಿಧ್ವನಿಸತೊಡಗಿದವು. ಜನರ ಮೇಲೆ ನಾನಾ ಬಗೆಯ ಒತ್ತಡಗಳನ್ನು ಹೇರಿ, ಅವರನ್ನು ಅಪಮಾನಗೊಳಿಸಿದ ಕ್ರಮಗಳನ್ನು ಪತ್ರಿಕೆಗಳು ಬಯಲಿಗೆಳೆದವು. ಜನರಲ್ಲಿ ಆತ್ಮಗೌರವ ಮತ್ತು ಹೆಮ್ಮೆಯನ್ನು ಪುನರ್‌ಜಾಗೃತಗೊಳಿಸುವ ಸಾಹಿತ್ಯವನ್ನು ಹೊರತರಲಾಯಿತು. ಈ ಎಲ್ಲ ಧ್ಯೇಯಗಳ ಸಾಧನೆಯತ್ತ ರಾಜಕೀಯ ಸಂಸ್ಥೆಗಳು ಸ್ಥಾಪನೆಗೊಂಡವು. ಈ ಎಲ್ಲ ಚಟುವಟಿಕೆಗಳು ಉತ್ತುಂಗಕ್ಕೇರಿ, ೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಜನ್ಮ ತಳೆಯಿತು. ಈ ಎಲ್ಲ ಚಟುವಟಿಕೆಗಳ ಮೂಲಕ, ಬ್ರಿಟಿಷ್ ಸಾಮ್ರಾಜ್ಯವಾದದ ಬಗ್ಗೆ ರಾಷ್ಟ್ರೀಯ ಭಾವನೆಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲಾಗುತ್ತಿತ್ತು. ಆದರೆ ರಾಜಕೀಯ ಸ್ವರೂಪ ಪಡೆದ ರಾಷ್ಟ್ರೀಯವಾದಕ್ಕೆ ಜನರು ಉತ್ತೇಜನ ಕೊಡಲಾರಂಭಿಸಿದಾಗ, ಬ್ರಿಟಿಷ್ ಆಡಳಿತಗಾರರಿಗೆ ನಿಜಕ್ಕೂ ಕಳವಳ ಉಂಟಾಯಿತು.

ಬ್ರಹ್ಮಸಮಾಜ, ಧಾರ್ಮಿಕ ಚಳವಳಿಗಳಲ್ಲಿ ಅತ್ಯಂತ ಮುಂಚಿನದು. ಈ ಸಂಬಂಧದಲ್ಲಿ ರಾಜಾರಾಮ ಮೋಹನ್‌ರಾಯ್ ಮಾಡಿದ ಕೆಲಸಗಳು ಮತ್ತು ಅವರು ಎಂತಹ ದೊಡ್ಡ ವ್ಯಕ್ತಿ ಎಂಬುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಬ್ರಹ್ಮಸಮಾಜದ ಕೆಲಸ ಕಾರ್ಯಗಳನ್ನು ಟಾಗೂರ್ ಮನೆತನದವರು ಮುಂದುವರಿಸಿಕೊಂಡು ಹೋದರು. ಬಂಗಾಳದ ಮಧ್ಯಮ ವರ್ಗಗಳ ಜನರು ಪುನಃ ಘನತೆ ಗೌರವಗಳಿಂದ ಬಾಳಲು ಅವರು ತುಂಬ ಸಹಾಯ ಮಾಡಿದರು. ೧೮೫೭ರಲ್ಲಿ ಕೇಶವಚಂದ್ರ ಸೇನ್ ಸಮಾಜವನ್ನು ಸೇರಿದರು. ಅವರು ಒಬ್ಬ ಸಮರ್ಥ ವ್ಯಕ್ತಿಯಾಗಿದ್ದರು. ಅವರು ಈ ಚಳವಳಿಗೆ ಭಾವನಾತ್ಮಕ ಸ್ವರೂಪ

ನೀಡಿದರು. ಅವರಿಗೆ, ಕ್ರೈಸ್ತವಿಚಾರಗಳ ಕಡೆಗೆ ಒಲವುಂಟಾಯಿತು. ಇದರಿಂದ ಒಡಕು ಉಂಟಾಯಿತು. ಸಮಾಜವು, ಭಾರತದ ಬ್ರಹ್ಮಸಮಾಜ ಮತ್ತು ಆದಿ ಬ್ರಹ್ಮಸಮಾಜ ಎಂದು ವಿಭಜನೆಗೊಂಡಿತು. ಕೇಶವಚಂದ್ರ ಸೇನ್, ಸರ್ಕಾರದ ಮನವೊಲಿಸಿ, ಬ್ರಹ್ಮ ವಿವಾಹ ಕಾಯ್ದೆಯನ್ನು ಕಾನೂನು ಪುಸ್ತಕದಲ್ಲಿ ಸೇರಿಸುವ ಪ್ರಯತ್ನದಲ್ಲಿ ಸಫಲರಾದರು. ಸಂಬಂಧಪಟ್ಟ ವ್ಯಕ್ತಿಗಳು ಜನ್ಮತಃ ಯಾವುದೇ ಧರ್ಮಕ್ಕೆ ಸೇರಿದವರಾಗಿರಲಿ ಬ್ರಹ್ಮ ವಿಧಿಗಳಿಗನುಗುಣವಾಗಿ ಅವರು ಮಾಡಿಕೊಂಡ ವಿವಾಹವನ್ನು ಕಾನೂನುಬದ್ಧಗೊಳಿಸಲು, ಈ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಸೇನ್ ಒಬ್ಬ ವಿವಾದಾಸ್ಪದ ವ್ಯಕ್ತಿಯಾದರು. ಆದರೂ ಅವರು ತುಂಬ ಪ್ರಭಾವಶಾಲಿಯಾದರು. ಅನೇಕ ಜನರು, ಅವರನ್ನು ದೈವೀ ಪ್ರೇರಣೆಯಿಂದ ಬಂದ ವ್ಯಕ್ತಿಯೆಂದು ಪರಿಗಣಿಸತೊಡಗಿದರು. ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಮೂಲಕ, ಬ್ರಹ್ಮಸಮಾಜವು ರಾಷ್ಟ್ರೀಯವಾದಕ್ಕೆ ಮಹತ್ತರ ಕೊಡುಗೆ ನೀಡಿತು. ಅದು, ಸಾಮಾಜಿಕ ಸಮಾನತೆಯನ್ನು ಸಹ ಪ್ರಬಲವಾಗಿ ಸಮರ್ಥಿಸಿತು. ಬಂಗಾಳಿ ಯುವಜನರಲ್ಲಿ ಆಗತಾನೇ ಮೂಡಿಬಂದಿದ್ದ ರಾಷ್ಟ್ರೀಯ ಜಾಗೃತಿಯನ್ನು ಅದು ಪೋಷಿಸಿಕೊಂಡು ಬಂದಿತು. ಬಂಗಾಳದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳನ್ನು ಪ್ರೋತ್ಸಾಹಿಸಿಕೊಂಡು ಬಂದ ಇತರ ಮಹಾನ್ ವ್ಯಕ್ತಿಗಳೆಂದರೆ ಈಶ್ವರಚಂದ್ರ ವಿದ್ಯಾಸಾಗರ, ಮತ್ತು ದೊಡ್ಡ ಕಾದಂಬರಿಕಾರ ಬಂಕಿಮಚಂದ್ರ ಚಟರ್ಜಿ. ೧೮೬೭ರಲ್ಲಿ, ಎಂ.ಜಿ. ರಾನಡೆ ಮತ್ತು ಆರ್. ಜಿ. ಭಂಡಾರ್‌ಕರ್, ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದರು. ಬಾಂಬೆ ಪ್ರಾಂತ್ಯದಲ್ಲಿ ರಾನಡೆ ಮಾಡಿದ ಕೆಲಸ, ರಾಜಾರಾಮ ಮೋಹನ್‌ರಾಯ್ ಬಂಗಾಳದಲ್ಲಿ ಮಾಡಿದ ಕೆಲಸಗಳಿಗೆ ಸದೃಶವಾಗಿತ್ತು. ರಾನಡೆ, ಮಹಾನ್ ಚಿಂತನಕಾರರಾಗಿದ್ದರು. ಧರ್ಮ, ಸಮಾಜಸುಧಾರಣೆ, ರಾಜಕಾರಣ ಮತ್ತು ಅರ್ಥಶಾಸ್ತ್ರ–ಇವುಗಳಲ್ಲಿ ಅವರಿಗೆ ಅಗಾಧ ಪಾಂಡಿತ್ಯವಿತ್ತು. ಅವರು ಸಚ್ಚಾರಿತ್ರ್ಯವುಳ್ಳವರಾಗಿದ್ದರು. ಪ್ರಾಮಾಣಿಕರಾಗಿದ್ದರು. ಅವರು ಬಾಂಬೆ ಹೈಕೋರ್ಟಿನ ನ್ಯಾಯಾಧೀಶರಾಗಿ ಅತ್ಯುನ್ನತ ಸ್ಥಾನದಲ್ಲಿದ್ದರು. ಆದರೂ ಅವರ ಇತರ ಕಾರ್ಯಚಟುವಟಿಕೆಗಳಲ್ಲಿ ಅಧಿಕಾರಿಗಳು ಮಧ್ಯ ಪ್ರವೇಶಿಸುತ್ತಿರಲಿಲ್ಲ. ಅವುಗಳಿಗೆ ಆತಂಕವೊಡ್ಡುವ ವಿಚಾರ ಅವರಿಗೆ ಬರಲಿಲ್ಲ. ರಾನಡೆ, ಭಾರತೀಯ ಉದಾರವಾದದ ಮಹಾನ್ ಪ್ರತಿಪಾದಕರಾಗಿದ್ದ ಗೋಪಾಲಕೃಷ್ಣ ಗೋಖಲೆಯವರ ರಾಜಕೀಯ ಗುರುವಾಗಿದ್ದರು.

ಸ್ವಾಮಿ ದಯಾನಂದ ಸರಸ್ವತಿಯವರಿಂದ ಸ್ಥಾಪಿತವಾದ ಆರ್ಯಸಮಾಜ, ಪಂಜಾಬ್ ಮತ್ತು ಉತ್ತರ ಭಾರತದಲ್ಲಿ ತುಂಬ ವ್ಯಾಪಕವಾದ ಪ್ರಭಾವ ಬೀರಿತು. ಅದು, ಬಂಗಾಳದಲ್ಲಿ ಬ್ರಹ್ಮಸಮಾಜವು ಬೀರಿದ್ದಕ್ಕಿಂತಲೂ ಹೆಚ್ಚಿನ ಪರಿಣಾಮವನ್ನು ಆ ಪ್ರದೇಶಗಳಲ್ಲಿ ಉಂಟುಮಾಡಿತು. ದಯಾನಂದ ಸರಸ್ವತಿ ೧೮೨೪ರಲ್ಲಿ

ಕಾಥಿಯವಾಡಾದಲ್ಲಿ ಜನ್ಮ ತಳೆದರು. ಅವರು ಸಂಸ್ಕೃತ ಸಾಹಿತ್ಯದಲ್ಲಿ ಅದರಲ್ಲೂ ಮುಖ್ಯವಾಗಿ ವೇದಗಳಲ್ಲಿ ದೊಡ್ಡ ವಿದ್ವಾಂಸರಾಗಿದ್ದರು. ಇಡೀ ಮಾನವಕುಲಕ್ಕೆ ವೇದಾಧಾರಿತ ಧರ್ಮವೇ, ವಿಶ್ವದ ಏಕಮಾತ್ರ ಸಾರ್ವತ್ರಿಕ ಧರ್ಮವೆಂಬುದನ್ನು ಅವರು ಮನಗಂಡಿದ್ದರು. ಹಿಂದೂಗಳು ತಮ್ಮ ಜಾತಿ–ಮತ ಭೇದ ಭಾವಗಳನ್ನು ತೊರೆಯಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ವೇದಗಳ ಯುಗದಲ್ಲಿ ಕಂಡುಬರದಿದ್ದಂತಹ ಮೂಢನಂಬಿಕೆಗಳನ್ನು ಮತ್ತು ಮಿಥ್ಯಾಚಾರವನ್ನು ಆಚರಿಸುವುದರಲ್ಲಿ ಅರ್ಥವಿಲ್ಲವೆಂಬುದು ಅವರ ವಿಚಾರವಾಗಿತ್ತು. ವೇದಗಳ ಕಾಲದಲ್ಲಿದ್ದಂತಹ ಜೀವನ ವಿಧಾನವನ್ನೇ ಪುನಃ ಅನುಸರಿಸಬೇಕೆಂದು ಅವರು ಹಿಂದೂಗಳಿಗೆ ತಿಳಿಹೇಳುತ್ತಿದ್ದರು. ಅವರು ೧೮೬೩ ರಲ್ಲಿ ಧರ್ಮಪ್ರಚಾರ ಕಾರ್ಯದ ಮುಂದಾಳತ್ವ ವಹಿಸಿದರು. ೧೮೭೫ರಲ್ಲಿ ಅವರು ಆರ್ಯಸಮಾಜವನ್ನು ಸ್ಥಾಪಿಸಿದರು. ಹಿಂದೂ ಧರ್ಮವನ್ನು ಟೀಕಿಸುತ್ತಿದ್ದವರ ವಿರುದ್ಧ, ಹಿಂದೂ ಧರ್ಮವನ್ನು ಸಂರಕ್ಷಿಸುವುದಷ್ಟಕ್ಕೇ ಅವರ ಕಾರ್ಯ ಸೀಮಿತವಾಗಿರಲಿಲ್ಲ. ಹಿಂದೂ ಧರ್ಮದ ಶ್ರೇಷ್ಠತೆಯನ್ನು ಅವರು ಯಾವಾಗಲೂ ಪ್ರತಿಪಾದಿಸುತ್ತಿದ್ದರು. ಆರ್ಯಸಮಾಜ ಎಲ್ಲೆಲ್ಲೂ, ಅದರಲ್ಲೂ ಮುಖ್ಯವಾಗಿ ಪಂಜಾಬ್‌ನಲ್ಲಿ ತುಂಬ ಜನಪ್ರಿಯವಾಯಿತು. ಲಾಲಾ ಲಜಪತ್‌ರಾಯ್ ಸೇರಿದಂತೆ ಅನೇಕ ಪ್ರಸಿದ್ಧ ವ್ಯಕ್ತಿಗಳು ಆರ್ಯಸಮಾಜದ ಅನುಯಾಯಿಗಳಾದರು. ದಯಾನಂದ ಸರಸ್ವತಿಯವರು ೧೮೮೩ರಲ್ಲಿ ತೀರಿಕೊಂಡರು. ಆ ವೇಳೆಗಾಗಲೇ ಆರ್ಯಸಮಾಜವು ಅತಿ ಶಕ್ತಿಯುತವಾದ ಚಳವಳಿಯಾಗಿತ್ತು. ಅದು ಅನೇಕ ಶೈಕ್ಷಣಿಕ ಸಂಸ್ಥೆಗಳು, ಧರ್ಮಾರ್ಥ ಸಂಸ್ಥೆಗಳು ಮತ್ತು ಸಮಾಜ ಸುಧಾರಣಾ ಸಂಸ್ಥೆಗಳನ್ನು ಹೊಂದಿತ್ತು. ತತ್ವಜ್ಞಾನ ಪ್ರಸಾರ ಚಳವಳಿ ಸಹ, ಜನರಲ್ಲಿ ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಧಾರ್ಮಿಕ ಹಾಗೂ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಬಹುಮಟ್ಟಿಗೆ ನೆರವಾಯಿತು. ಈ ಚಳವಳಿಯನ್ನು ೧೮೭೫ರಲ್ಲಿ ಮೇಡಮ್ ಬ್ಲಾವಟ್‌ಸ್ಕಿ ಮತ್ತು ಕರ್ನಲ್ ಆಲ್‌ಕಾಟ್ ನ್ಯೂಯಾರ್ಕ್‌ನಲ್ಲಿ ಆರಂಭಿಸಿದರು. ಆದರೆ ಅದು ತನ್ನ ಮುಖ್ಯ ಕೇಂದ್ರವನ್ನು ೧೮೮೨ರಲ್ಲಿ, ಮದ್ರಾಸ್‌ನ ಅಡ್ಯಾರ್‌ಗೆ ವರ್ಗಾಯಿಸಿತು. ಅಲ್ಲಿ ಇದೊಂದು ಪ್ರಭಾವಶಾಲಿ ಸೊಸೈಟಿಯಾಯಿತು. ೧೮೮೮ರಲ್ಲಿ ಈ ಸೊಸೈಟಿಯನ್ನು ಸೇರಿಕೊಂಡ ಶ್ರೀಮತಿ ಬೆಸೆಂಟ್ ೧೮೯೩ರಲ್ಲಿ ಭಾರತಕ್ಕೆ ಆಗಮಿಸಿದರು. ಮೇಲು ದರ್ಜೆಯ ಮಧ್ಯಮವರ್ಗಕ್ಕೆ ಸೇರಿದ ಇಂಗ್ಲಿಷ್ ಶಿಕ್ಷಿತ ವ್ಯಕ್ತಿಗಳೇ ಅತ್ಯಧಿಕ ಸಂಖ್ಯೆಯಲ್ಲಿ ಈ ಸೊಸೈಟಿಯ ಅನುಯಾಯಿಗಳಾದರು. ಥಿಯಸಾಫಿಕಲ್ ಸೊಸೈಟಿಯ ಶಾಖೆಗಳು ಭಾರತಾದ್ಯಂತ ಇದ್ದವು. ಆದರೆ ಈ ಚಳವಳಿ, ಅತಿ ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ತನ್ನ ಪ್ರಭಾವ ಬೀರಿತು. ಅಲ್ಲಿ ಪ್ರತಿಯೊಂದು ಜಿಲ್ಲಾ ಪಟ್ಟಣದಲ್ಲೂ, ಸೊಸೈಟಿ ತನ್ನ ಶಾಖೆಯನ್ನು ಹೊಂದಿರುತ್ತಿತ್ತು. ಈ ತತ್ವಜ್ಞಾನವು (Theosophy) ದೇವರ ಏಕೀಭಾವ

ಮತ್ತು ವಿಶ್ವಭ್ರಾತೃತ್ವವನ್ನು ಬೋಧಿಸುತ್ತಿತ್ತು. ಅದು, ಹಿಂದೂ ಧರ್ಮ ಮತ್ತು ಬೌದ್ಧ ಧರ್ಮದ ಹಿರಿಮೆಗೆ ವಿಶೇಷ ಮಹತ್ವ ನೀಡಿತ್ತು. ಈ ಎರಡು ಧರ್ಮಗಳ ಹಿರಿಮೆಯನ್ನು ಪ್ರಬಲವಾಗಿ ಸಾರುವ ಮೂಲಕ, ಕ್ರೈಸ್ತ ಮತ ಪ್ರಚಾರ ಕೆಲಸಕ್ಕೆ ತಡೆಯೊಡ್ಡಲಾಗುತ್ತಿತ್ತು; ಈ ರೀತಿ ಕ್ರೈಸ್ತ ಧರ್ಮ ಪ್ರಚಾರಕರನ್ನು ಪ್ರತಿರೋಧಿಸಲಾಗುತ್ತಿತ್ತು: ಶ್ರೀಮತಿ ಬೆಸೆಂಟ್ ಅವರು ತುಂಬ ಸಮರ್ಥಶಾಲಿಗಳಾಗಿದ್ದರು. ಅವರು ಅಮೋಘ ವಾಕ್‌ಪಟುತ್ವವನ್ನು ಹೊಂದಿದ್ದರು. ಆದ್ದರಿಂದ, ಅನಂತರ ಅವರ ಸೇವೆಯನ್ನು ಭಾರತದ ರಾಷ್ಟ್ರೀಯವಾದವನ್ನು ಜಾಗೃತಗೊಳಿಸುವ ಕಾರ್ಯಕ್ಕೆ ವಿನಿಯೋಗಿಸಿಕೊಳ್ಳಲಾಯಿತು. ಈ ವಿಷಯವನ್ನು ಮುಂದೆ ಪ್ರಸ್ತಾಪಿಸಲಾಗುತ್ತದೆ.

ರಾಮಕೃಷ್ಣ ಪರಮಹಂಸರು, ಪುರಾಣಗಳಲ್ಲಿ ಬರುವ ಹಿಂದೂ ಋಷಿ–ಮುನಿಗಳಿಗೆ ಸದೃಶರಾದಂತಹ ಮಹಾಪುರುಷರಾಗಿದ್ದರು. ಅವರು ಜನರಿಗೆ ಪ್ರೀತಿಯ ಸಂದೇಶ ನೀಡಿದರು. ಎಲ್ಲ ಧರ್ಮಗಳ ಜನರನ್ನು ಸಮಾನವಾಗಿ ಕಾಣಬೇಕೆಂಬ ಧರ್ಮಸಹಿಷ್ಣುತೆಯನ್ನು ಅವರು ಬೋಧಿಸಿದರು. ಸ್ವಾಮಿ ವಿವೇಕಾನಂದರು ಈ ಬೋಧನೆಗಳನ್ನು ಭಾರತದಲ್ಲಷ್ಟೇ ಅಲ್ಲದೆ, ಅಮೆರಿಕಾ ಮತ್ತು ಯೂರೋಪ್‌ನಲ್ಲಿ ಪ್ರಚುರಪಡಿಸಿದರು. ಕೆಲವು ರೀತಿಯಲ್ಲಿ, ಅವರು, ಭಾರತದ ಜನರ ಮೇಲೆ ಇತರ ಚಳವಳಿಗಳು ಬೀರಿದ್ದಕ್ಕಿಂತಲೂ ಅತಿ ಹೆಚ್ಚಿನ ಪ್ರಭಾವವನ್ನು ಬೀರಿದರು. ಅವರು ರಾಜಕೀಯಕ್ಕಿಳಿದು ಅದರಲ್ಲಿ ಚೆಲ್ಲಾಟವಾಡಲಿಲ್ಲ. ಅವರು ಜನರಿಗೆ ಧೈರ್ಯ, ಸ್ವಾತಂತ್ರ್ಯ, ಪರಿಶುದ್ಧ ಪ್ರೀತಿ ಮತ್ತು ವೇದಾಂತದಲ್ಲಿ ದೃಢ ನಂಬಿಕೆ – ಇವುಗಳನ್ನು ಬೋಧಿಸಿದರು. ಅವರ ಈ ಮಾತುಗಳನ್ನು ಕೇಳಿದ ಜನರಲ್ಲಿ ವಿದ್ಯುತ್ ಪ್ರವಹಿಸಿದಂತಾಗುತ್ತಿತ್ತು. ಇಂತಹ ಅಮೂಲ್ಯ ಸಂದೇಶಗಳನ್ನು ನೀಡುವ ಮೂಲಕ ವಿವೇಕಾನಂದರು ಭಾರತದ ರಾಷ್ಟ್ರೀಯವಾದದ ವಿಕಾಸಕ್ಕೆ ಹಿತಕರವಾದ ವಾತಾವರಣ ನಿರ್ಮಿಸಿದರು.

ವಿವೇಕಾನಂದರ ಬೋಧನೆಗಳು ಕೇವಲ ಹಿಂದೂಗಳನ್ನು ಮಾತ್ರ ಹುರಿದುಂಬಿಸಿತೆಂದು ಭಾವಿಸುವುದು ಸರಿಯಲ್ಲ. ಮುಸ್ಲಿಮರು ಸಹ ಅನೇಕ ಸುಧಾರಣಾ ಚಳವಳಿಗಳನ್ನು ಕೈಗೊಂಡರು ಮುಸ್ಲಿಮ್ ಗುರುಗಳೂ ಸಹ ಉಲೇಮ (Ulema) ಶಾಲೆಯನ್ನು ವ್ಯವಸ್ಥೆಗೊಳಿಸಿದರು. ಮುಸ್ಲಿಮರ ಪಾರಂಪರಿಕ ಮೌಲ್ಯಗಳನ್ನು ಉಳಿಸಿಕೊಂಡು ಬರುವುದು ಈ ಶಾಲೆಯ ಉದ್ದೇಶವಾಗಿತ್ತು: ಅತ್ಯಂತ ಶ್ರೀಮಂತ ಧಾರ್ಮಿಕ ಮನೆತನದ ಸೈಯೆದ್ ಅಹ್ಮದ್ ಖಾನ್ ಮೊದಲು ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿಕೊಂಡರು. ಅಲ್ಲಿ ಅವರು ಸದರ್ ಅಮೀನ್ ದರ್ಜೆಯ ಉನ್ನತ ಸ್ಥಾನಕ್ಕೆ ಏರಿದರು. ೧೮೭೬ರಲ್ಲಿ ಅವರು ಸರ್ಕಾರಿ ಸೇವೆಯಿಂದ ನಿವೃತ್ತರಾದರು. ನಿವೃತ್ತಿಯ ನಂತರ ಅವರು ಅಲಿಗಢದಲ್ಲಿ ನೆಲೆಸಿದರು. ಅವರು

೧೮೯೮ರಲ್ಲಿ, ತಮ್ಮ ೮೧ನೆಯ ವಯಸ್ಸಿನಲ್ಲಿ ನಿಧನರಾದರು. ೧೮೫೭ರ ಘಟನೆಗಳಿಂದ ಮತ್ತು ಅವು ಮುಸ್ಲಿಮ್ ಸಮುದಾಯದ ಮೇಲೆ ಉಂಟು ಮಾಡಿದ್ದ ವಿನಾಶಕಾರಿ ಪರಿಣಾಮದಿಂದ ಅವರು ತುಂಬ ಭಯಗ್ರಸ್ತರಾಗಿದ್ದರು. ತಮ್ಮ ಸಮುದಾಯವನ್ನು ಮೇಲಕ್ಕೆತ್ತಿ, ಮುಸ್ಲಿಮರು ಮತ್ತು ಬ್ರಿಟಿಷರ ನಡುವೆ ಮೈತ್ರಿಯನ್ನು ಏರ್ಪಡಿಸಲು ಅವರು ದೃಢ ಸಂಕಲ್ಪ ಮಾಡಿದ್ದರು. ಇಸ್ಲಾಮ್ ಧರ್ಮದ ಸುಧಾರಣೆ ಅವರ ಉದ್ದೇಶವಾಗಿತ್ತು. ಬ್ರಿಟಿಷರು ಈ ದೇಶಕ್ಕೆ ತಂದಿದ್ದ ಹೊಸ ವಿಚಾರಗಳು ಮತ್ತು ಚಿಂತನೆಗನುಗುಣವಾಗಿ ಇಸ್ಲಾಮ್ ಧರ್ಮದ ಸುಧಾರಣೆಯಾಗಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಸೈಯದ್ ಅಹ್ಮದ್ ಖಾನ್ ೧೮೭೫ರಲ್ಲಿ ಅಲಿಗಢ್ ಮುಹಮಡನ್ ಆ್ಯಂಗ್ಲೊ – ಓರಿಯೆಂಟಲ್ ಸ್ಕೂಲ್ ಅನ್ನು ಪ್ರಾರಂಭಿಸಿದರು. ೧೮೭೮ರಲ್ಲಿ ಅದು ಒಂದು ಕಾಲೇಜ್ ಆಗಿ ಮಾರ್ಪಟ್ಟಿತು. ಇದೇ, ಅನಂತರ ಅಲಿಗಢ್ ಮುಸ್ಲಿಮ್ ವಿಶ್ವವಿದ್ಯಾಲಯವಾಗಿ ಅಭಿವೃದ್ಧಿಗೊಂಡಿತು. ದೇಶದ ಏಳಿಗೆಗೆ ಸಹಾಯವಾಗಲೆಂಬ ದೃಷ್ಟಿಯಿಂದ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಪರಸ್ಪರ ಸಹಕಾರವನ್ನು ತರಲು ಅವರು ತುಂಬ ಉತ್ಸುಕರಾಗಿದ್ದರು. ಅವರು ೧೮೬೬ರಲ್ಲಿ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ, ಅವರು, ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಜನರ ಹಿತಾಸಕ್ತಿಗಳನ್ನು ಯೋಗ್ಯ ರೀತಿಯಲ್ಲಿ ನಿರೂಪಿಸಬೇಕೆಂದು ಒತ್ತಾಯಪಡಿಸಲಿಚ್ಛಿಸಿದರು. ಆದರೆ, ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಾಗ, ಮುಸ್ಲಿಮರ ಹಿತಾಸಕ್ತಿಗಳಿಗೆ ಬಾಧಕವುಂಟಾಗಬಹುದೆಂಬ ಶಂಕೆ, ಅವರಿಗೆ ಬಂದಿತ್ತು. ಆದ್ದರಿಂದ ಅವರು ಈ ಸಂಸ್ಥೆಯನ್ನು ಮತೀಯ ಆಧಾರದ ಮೇಲೆ ಪುನರ್‌ವ್ಯವಸ್ಥೆಗೊಳಿಸಲೆತ್ನಿಸಿದರು. ಅಷ್ಟು ಹೊತ್ತಿಗೆ, ಬ್ರಿಟಿಷರು ಮುಸ್ಲಿಮರ ಬಗ್ಗೆ ತಳೆದಿದ್ದ ವೈರಭಾವನೆಯಿಂದ ಮುಕ್ತರಾಗಿದ್ದರು. ಮತ್ತು ಮುಸ್ಲಿಮರಿಗೆ ಸಹಾನುಭೂತಿ ತೋರಲಾರಂಭಿಸಿದ್ದರು, ಅಷ್ಟೇ ಅಲ್ಲದೆ ಸೈಯದ್ ಅಹ್ಮದ್‌ಖಾನ್‌ಗೆ ಅವರ ಪ್ರತ್ಯೇಕತಾ ಚಳವಳಿಯಲ್ಲಿ ಸಹಾಯ ಮಾಡಲಾರಂಭಿಸಿದ್ದರು. ಲಾಲಾ ಲಜಪತ್‌ರಾಯ್ ಸೈಯದ್ ಅಹ್ಮದ್‌ಗೆ ಬಹಿರಂಗ ಪತ್ರಗಳನ್ನು ಬರೆಯುವ ಮೂಲಕ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಇದೊಂದು ಸ್ವಾರಸ್ಯಕರ ವಿಷಯವೆನಿಸಬಹುದು. ಈ ಪತ್ರಗಳಲ್ಲಿ ಅವರು ಹಿಂದೂಗಳು ಮತ್ತು ಮುಸ್ಲಿಮರ ನಡುವಣ ರಾಜಕೀಯ ಹಿತಾಸಕ್ತಿಗಳ ಸಂಘರ್ಷದ ಬಗ್ಗೆ ಸೈಯದ್ ಅಹ್ಮದ್‌ಖಾನ್ ಅವರ ಅಭಿಪ್ರಾಯಗಳನ್ನು ಪ್ರಶ್ನಿಸಿ, ತಮ್ಮ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದರು.

* * * *

೭. ರಾಷ್ಟ್ರೀಯತೆಯ ಆರಂಭ

ಮಹಾದಂಗೆಯಾದ ನಂತರ ಸುಮಾರು ೨೦ ವರ್ಷಗಳ ಕಾಲ ರಾಜಕೀಯ ಕಾರ್ಯ ಚಟುವಟಿಕೆಗಳು ಪತ್ರಿಕೆಗಳ ಮುಖಾಂತರ ನಡೆಯುತ್ತಿದ್ದವು. ಆ ಸಮಯದಲ್ಲಿ ಇಂಗ್ಲಿಷ್‌ನಲ್ಲಿ ಶಿಕ್ಷಣ ಪಡೆದ ಮಧ್ಯಮ ವರ್ಗಗಳ ಜನರಿಗೆ ಇದ್ದ ಉದ್ಯೋಗಗಳೆಂದರೆ ಸರ್ಕಾರಿ ಸೇವೆಯನ್ನು ಸೇರುವುದು, ವಕೀಲರಾಗುವುದು ಇಲ್ಲವೇ ಪತ್ರಿಕೆಗಳಲ್ಲಿ ಕೆಲಸ ಮಾಡುವುದು. ಅಂತಿಮವಾಗಿ ವಕೀಲರುಗಳು ಭಾರತೀಯ ರಾಜಕೀಯ ಕ್ಷೇತ್ರದ ಬೆನ್ನೆಲುಬಾದರು. ಆದರೆ ಮೊದಲು ಜನರ ಆಶೋತ್ತರಗಳನ್ನು ಪತ್ರಿಕೆಗಳಲ್ಲಿ ಪ್ರತಿಬಿಂಬಿಸಿದವರೆಂದರೆ ಪತ್ರಿಕಾಕರ್ತರು.

ಪತ್ರಿಕಾ ಕ್ಷೇತ್ರದಲ್ಲಿ ಆ್ಯಂಗ್ಲೊ–ಇಂಡಿಯನ್ ವೃತ್ತಪತ್ರಿಕೆಗಳು ಮುಂದಾದ ಸ್ಥಾನ ಪಡೆದಿದ್ದವು. ಈ ಪತ್ರಿಕೆಗಳು ಬ್ರಿಟಿಷ್ ಸರ್ಕಾರಕ್ಕೆ ಬೆಂಬಲ ನೀಡುತ್ತಿದ್ದುದರಿಂದ, ಅವು ಮೊದಲ ಸ್ಥಾನದಲ್ಲಿದ್ದುದು ಸಹಜವೇ ಹೌದು. ಈ ಪತ್ರಿಕೆಗಳು ಬ್ರಿಟಿಷ್ ಸರ್ಕಾರದಿಂದ ಎಲ್ಲ ರೀತಿಯ ಬೆಂಬಲ ಪಡೆಯುತ್ತಿದ್ದವು. ೧೮೬೧ರಲ್ಲಿ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯನ್ನು ಮತ್ತು ೧೮೭೫ ರಲ್ಲಿ "ಸ್ಟೇಟ್ಸ್‌ಮನ್" ಮತ್ತು "ಸಿವಿಲ್ ಅಂಡ್ ಮಿಲಿಟರಿ ಗೆಜೆಟ್" ಪತ್ರಿಕೆಗಳನ್ನು ಆರಂಭಿಸಲಾಯಿತು. ಗಿರೀಶ್‌ಚಂದ್ರ ಘೋಷ್, ೧೮೬೮ ರಲ್ಲಿ ''ಬೆಂಗಾಲಿ'' ಎಂಬ ಪತ್ರಿಕೆಯನ್ನಾರಂಭಿಸಿದರು. ಈ ಪತ್ರಿಕೆಯು ಭಾರತೀಯರ ಅಭಿಪ್ರಾಯಗಳನ್ನು ಹೊರಗೆಡಹುವ ಅತ್ಯಂತ ಪ್ರಬಲ ಸಾಧನವಾಯಿತು. ಅನಂತರ ಈ ಪತ್ರಿಕೆಯನ್ನು ಸುರೇಂದ್ರನಾಥ್ ಬ್ಯಾನರ್ಜಿ ತಮ್ಮ ವಶಕ್ಕೆ ತೆಗೆದುಕೊಂಡರು. ೧೮೬೮ರಲ್ಲಿ "ಅಮೃತಬಜಾರ್ ಪತ್ರಿಕ" ಅಸ್ತಿತ್ವಕ್ಕೆ ಬಂದಿತು. ಮೊದಲು ಇದು ಬಂಗಾಳಿ ಭಾಷೆಯ ಪತ್ರಿಕೆಯಾಗಿತ್ತು. ಅನಂತರ ಅದು ಇಂಗ್ಲಿಷ್ ಪತ್ರಿಕೆಯಾಗಿ ಪರಿವರ್ತನೆಗೊಂಡಿತು. ಮದ್ರಾಸ್‌ನ "ದಿ ಹಿಂದೂ" ಪತ್ರಿಕೆ ೧೮೭೮ರಲ್ಲಿ ಸ್ಥಾಪಿಸಲ್ಪಟ್ಟಿತು. ೧೮೭೭ರಲ್ಲಿ "ಮದ್ರಾಸ್ ಸ್ಟಾಂಡರ್ಡ್", ಒಂದು ಆ್ಯಂಗ್ಲೊ–ಇಂಡಿಯನ್ ಪತ್ರಿಕೆಯಾಗಿ ಪ್ರಾರಂಭವಾಯಿತು. ಅನಂತರ ೧೮೯೨ರಲ್ಲಿ ಜಿ. ಪಿಳ್ಳೈ, ಆ ಪತ್ರಿಕೆಯನ್ನು ಖರೀದಿಸಿದರು. ಈ ಪತ್ರಿಕೆ ಆಮೂಲಾಗ್ರ ಬದಲಾವಣೆಗಳಾಗಬೇಕೆಂಬ ಅಭಿಪ್ರಾಯಗಳನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿತ್ತು. ಭಾರತೀಯರ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸುತ್ತಿದ್ದ ಇತರ ಪ್ರಭಾವಶಾಲಿ ಇಂಗ್ಲಿಷ್ ಪತ್ರಿಕೆಗಳೆಂದರೆ,

ಕೆ. ನಟರಾಜನ್ ಅವರ "ದಿ ಸೋಷಿಯಲ್ ರೆಫಾರ್ಮರ್", ಬಾಂಬೆಯ "ದಿ ಇಂಡಿಯನ್ ಸ್ಪೆಕ್ಟೇಟರ್", ತಿಲಕ್ ಅವರ "ಮರಾಠ" ಮತ್ತು ಪಂಡಿತ್ ಅಯೋಧ್ಯಾನಾಥ್ ಅವರ "ಇಂಡಿಯನ್ ಹೆರಾಲ್ಡ್".

ಭಾರತೀಯ ಭಾಷೆಗಳಲ್ಲೂ ಅನೇಕ ಪತ್ರಿಕೆಗಳು ಪ್ರಾರಂಭವಾದವು. ಈ ಪತ್ರಿಕೆಗಳು ಹೆಚ್ಚು ಜಾಗರೂಕತೆ ವಹಿಸುತ್ತಿದ್ದ ಇಂಗ್ಲಿಷ್ ಪತ್ರಿಕೆಗಳಿಗಿಂತಲೂ ನಿರ್ಭೀತಿಯಿಂದ ಮತ್ತು ಬಿಚ್ಚುಮನಸ್ಸಿನಿಂದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದವು. ಬ್ರಿಟಿಷರ ಕ್ರಮಗಳನ್ನು ಟೀಕಿಸಲು ಅವು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ೧೮೭೫ ರಲ್ಲಿ, ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ ೩೭೪ ವೃತ್ತಪತ್ರಿಕೆಗಳಿದ್ದವು. ಇವುಗಳಲ್ಲಿ ಆ್ಯಂಗ್ಲೊ–ದೇಶಭಾಷೆ (Anglo Verncular) ಪತ್ರಿಕೆಗಳೂ ಸೇರಿದ್ದವು. ಇಂಗ್ಲಿಷ್ ಭಾಷೆಯ ೧೪೭ ವೃತ್ತಪತ್ರಿಕೆಗಳು ಮಾತ್ರ ಪ್ರಸರಣದಲ್ಲಿದ್ದವು. ಪ್ರದೇಶವಾರು ಪತ್ರಿಕೆಗಳ ಸಂಖ್ಯೆ ಕೆಳಗಿನಂತಿದ್ದವು :

ಬಂಗಾಳ....................................೧೦೨
ಬಾಂಬೆ.......................................೮೬
ಈಶಾನ್ಯ ಸರಹದ್ದು ಪ್ರಾಂತ್ಯ.........೬೫
ಮದ್ರಾಸ್....................................೫೮
ಪಂಜಾಬ್...................................೬೩

ಭಾರತೀಯ ಭಾಷೆಗಳ ಪತ್ರಿಕೆಗಳ ಸಂಖ್ಯೆ ಹೆಚ್ಚುತ್ತಿದ್ದಂತೆ, ಲಾರ್ಡ್ ಲಿಟ್ಟನ್‌ಗೆ ಕಳವಳ ಪ್ರಾರಂಭವಾಯಿತು. ಆದ್ದರಿಂದ ೧೮೭೮ರಲ್ಲಿ, ಆತನು ಪ್ರಾದೇಶಿಕ ಭಾಷಾ ಪತ್ರಿಕಾ ಕಾಯ್ದೆಯನ್ನು ಅಂಗೀಕರಿಸಲು ಬ್ರಿಟಿಷ್ ಸರ್ಕಾರದ ಅನುಮತಿ ಪಡೆದನು. ಈ ಕಾಯ್ದೆಯ ಪ್ರಕಾರ, ಆಕ್ಷೇಪಣೀಯ ವಿಷಯಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದಿಲ್ಲವೆಂದು ತಿಳಿಸುವ ಬಾಂಡ್ ಬರೆದುಕೊಡಬೇಕೆಂದು ಪತ್ರಿಕೆಗಳ ಸಂಪಾದಕರುಗಳನ್ನು ಕೇಳಲು ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಕೊಡಲಾಗಿತ್ತು. ಇಲ್ಲದಿದ್ದರೆ ಅಂತಹ ಆಕ್ಷೇಪಾರ್ಹ ವಿಷಯಗಳನ್ನು ಪ್ರಕಟಿಸುವುದಕ್ಕೆ ಮೊದಲು, ಪರೀಕ್ಷಿಸುವುದಕ್ಕಾಗಿ ಪ್ರೂಫ್ ಶೀಟ್‌ಗಳನ್ನು ಅವರಿಗೆ ಒಪ್ಪಿಸಬೇಕೆಂದು ಕಡ್ಡಾಯಪಡಿಸಲಾಗಿತ್ತು. ಇಂತಹ ಕಾಯ್ದೆಯ ಬಗ್ಗೆ, ಕೋಪೋದ್ರಿಕ್ತ ಪ್ರತಿಭಟನೆಗಳು ಕಂಡುಬಂದವು. ಈ ಪ್ರತಿಭಟನೆಯನ್ನು ನಿರ್ಲಕ್ಷಿಸಲು ಬ್ರಿಟಿಷರಿಗೆ ಸಾಧ್ಯವಿರಲಿಲ್ಲ. ಭಾರತೀಯ ಪತ್ರಿಕೆಗಳ ಸುಯೋಗದಿಂದ, ಲಾರ್ಡ್ ಲಿಟ್ಟನ್ ಅವರ ಸ್ಥಾನದಲ್ಲಿ ಲಾರ್ಡ್ ರಿಪ್ಪನ್ ಅಧಿಕಾರಕ್ಕೆ ಬಂದನು. ಆತನು ೧೮೮೨ರಲ್ಲಿ, ಈ ಕಾಯ್ದೆಯ ರದ್ದತಿಗಾಗಿ ಬ್ರಿಟಿಷ್ ಸರ್ಕಾರದಿಂದ ಅನುಮತಿ ಪಡೆದನು. ಕಡೆಗೆ ಈ ಕಾಯ್ದೆಯನ್ನು ರದ್ದುಪಡಿಸಲಾಯಿತು.

ಬಂಗಾಳ, ಮಹಾರಾಷ್ಟ್ರ ಮತ್ತಿತರ ಸ್ಥಳಗಳಲ್ಲಿ ಕಂಡುಬಂದ, ಸಾಹಿತ್ಯಕ್ಷೇತ್ರದ ಪುನರುಜ್ಜೀವನದ ಬಗ್ಗೆ ಪ್ರಸ್ತಾಪಿಸಬೇಕಾದರೆ, ತುಂಬ ದೀರ್ಘಸಮಯ ಹಿಡಿಯುತ್ತದೆ.

ಈ ಪುನರುಜ್ಜೀವನದ ಮುಖ್ಯ ಲಕ್ಷಣವೇನಾಗಿತ್ತೆಂದರೆ, ಕವಿತೆಗಳಿಗಿಂತ ಗದ್ಯ ಸಾಹಿತ್ಯ ಹೆಚ್ಚು ಪ್ರಾಧಾನ್ಯ ಪಡೆಯಿತು. ಹಿಂದಿನ ಕಾಲದಲ್ಲಿ ಎಲ್ಲದಕ್ಕೂ ಕವಿತೆಗಳನ್ನೇ ವಿಶೇಷವಾಗಿ ಬಳಸಲಾಗುತ್ತಿತ್ತು. ಈ ಸಾಹಿತ್ಯ, ಭಾಗಶಃ ಸಂಸ್ಕೃತದಿಂದ ಅನುವಾದಿಸಿದ ಕವಿತೆಗಳನ್ನೊಳಗೊಂಡಿರುತ್ತಿತ್ತು. ರಾಮಾಯಣ ಮತ್ತು ಮಹಾಭಾರತ ಆಧಾರಿತ ಪಾತ್ರಗಳ ಬಗ್ಗೆ ಕಾದಂಬರಿಗಳನ್ನು ಮತ್ತು ನಾಟಕಗಳನ್ನು ರಚಿಸಲಾಗುತ್ತಿತ್ತು. ಯೂರೋಪ್‌ನಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗಳ ವಿವರಗಳನ್ನೊಳಗೊಂಡ ಸಾಹಿತ್ಯ ಕಾಣಬರುತ್ತಿತ್ತು, ಮಜ್ಜಿನಿ ಮತ್ತು ಗ್ಯಾರಿಬಾಲ್ಡಿ ಮುಂತಾದ ನಾಯಕರುಗಳ ಜೀವನ ಚರಿತ್ರೆಗಳಿದ್ದವು. ಜನರಲ್ಲಿ ರಾಷ್ಟ್ರೀಯತಾ ಭಾವನೆಯನ್ನು ಜಾಗೃತಗೊಳಿಸುವುದೇ ಈ ಸಾಹಿತ್ಯದ ಉದ್ದೇಶವಾಗಿರುತ್ತಿತ್ತು. ಸಮಾಜ ಸುಧಾರಣೆಗಳೂ ಸಹ ಬರಹಗಾರರ ಗಮನ ಸೆಳೆದವು. ಸಮಾಜಸೇವೆಯನ್ನು ಪ್ರತಿಪಾದಿಸುವಂತಹ ಪ್ರಬಂಧಗಳೂ, ಕಾದಂಬರಿಗಳು ಮತ್ತು ನಾಟಕಗಳು ಅತಿ ಸಾಮಾನ್ಯವಾಗಿದ್ದವು.

ಆ ಕಾಲದ ಮಹಾನ್ ಬರಹಗಾರರಲ್ಲಿ ಬಂಗಾಳದ ಮೈಕೇಲ್ ಮಧುಸೂದನ ದತ್ತ, ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮ್‌ಚಂದ್ರ ಚಟರ್ಜಿ, ಮಹಾರಾಷ್ಟ್ರದ ವಿಷ್ಣುಶಾಸ್ತ್ರಿ ಚಿಪ್ಲಂಕರ್, ಲೋಕಮಾನ್ಯ ತಿಲಕ್ ಮತ್ತು ಎಸ್.ಎಮ್. ಪರಾಂಜಪೆ, ತಮಿಳುನಾಡಿನ ಮೀನಾಕ್ಷಿಸುಂದರಮ್ ಪಿಳ್ಳೈ, ವೇದನಾಯಕಮ್ ಪಿಳ್ಳೈ ಮತ್ತು ಯು.ವಿ. ಸ್ವಾಮಿನಾಥ ಐಯ್ಯರ್, ಆಂಧ್ರದ ಕಂದುಕೂರಿ ವೀರೇಶಲಿಂಗಮ್ – ಇವರುಗಳನ್ನು ನಮೂದಿಸಬಹುದಾಗಿದೆ. ಉರ್ದು ಭಾಷೆಯಲ್ಲೂ ಅನೇಕ ಉತ್ತಮ ಬರಹಗಾರರಿದ್ದರು. ಅವರಲ್ಲಿ ಹಲಿ, ಘಾಲಿಬ್ ಮತ್ತು ಸೈಯದ್ ಅಹ್ಮದ್‌ಖಾನ್ ಸೇರಿದ್ದರು.

೧೮೫೮ರ ಬಳಿಕ, ಬ್ರಿಟಿಷ್ ಸಾಮ್ರಾಜ್ಯವಾದಿಗಳು ಮತ್ತು ಭಾರತೀಯರ ನಡುವಣ ಮೊದಲ ಘರ್ಷಣೆ ಇಂಡಿಗೊ ಪ್ಲಾಂಟರ್‌ಗಳು ಮತ್ತು ಬೇಸಾಯಗಾರರ ನಡುವಣ ತಿಕ್ಕಾಟದಿಂದ ಉದ್ಭವಿಸಿದ್ದು, ಬಹಳ ವಿಚಿತ್ರ. ಈ ಪ್ಲಾಂಟರ್‌ಗಳು ಬೇಸಾಯಗಾರರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದರು. ಮಹಾತ್ಮ ಗಾಂಧಿ ೧೯೧೭ರ ಚಂಪಾರಣ್ ಸತ್ಯಾಗ್ರಹದೊಂದಿಗೆ, ಭಾರತೀಯ ರಾಜಕೀಯ ರಂಗವನ್ನು ಹಠಾತ್ತನೆ ಪ್ರವೇಶಿಸಿದರು. ಇಂಡಿಗೊ ಸಾಗುವಳಿದಾರರ ಅಂದರೆ ನೀಲಿ ಬೆಳೆಯುವ ರೈತರ ಪರಿಸ್ಥಿತಿ ಇತ್ತೀಚಿನ ವರ್ಷದಲ್ಲೇ ಅಷ್ಟೊಂದು ಕೆಟ್ಟಿರಬೇಕಾದರೆ, ೬೦ ವರ್ಷಗಳಿಗೆ ಮುಂಚೆ ಅವರ ಪರಿಸ್ಥಿತಿ ಹೇಗಿತ್ತೆಂಬುದನ್ನು ಯಾರಾದರೂ ಊಹಿಸಬಹುದು. ಚಂಪಾರಣ್ ವಿಷಯದಲ್ಲಿ ಆದಂತೆಯೇ, ಪ್ಲಾಂಟರ್‌ಗಳ ದಬ್ಬಾಳಿಕೆ, ಅಧಿಕಾರಿಗಳಿಗೆ ಚೆನ್ನಾಗಿ ತಿಳಿದಿತ್ತು. ನೀಲಿ ಸಾಗುವಳಿದಾರರ ಕೂಗು, ಮಧ್ಯಮ ವರ್ಗದ ಬುದ್ಧಿಜೀವಿಗಳ ಕಿವಿಗೆ ಮುಟ್ಟಿತು ಆಗ ಮಿತ್ರ ಎಂಬುವರೊಬ್ಬರು ನೀಲ್ ದರ್ಪಣ್

(ನೀಲಿಯ ಕನ್ನಡಿ) ಎಂಬ ನಾಟಕವನ್ನು ಬರೆದರು. ಈ ನಾಟಕವನ್ನು ಮೈಕೆಲ್ ಮಧುಸೂದನ ದತ್ತ ಎಂಬುವರು ಇಂಗ್ಲಿಷ್‌ಗೆ ಭಾಷಾಂತರಿಸಿದರು.

ಇನ್ನೂ ಅನೇಕ ದೊಡ್ಡ ಸಮಸ್ಯೆಗಳಿದ್ದವು. ಇವುಗಳ ಪರಿಹಾರಕ್ಕೆ ಸಂಘಟಿತ ಹಾಗೂ ಸುವ್ಯವಸ್ಥಿತ ರಾಜಕೀಯ ಕ್ರಮಗಳ ಅಗತ್ಯವಿತ್ತು. ಎಲ್ಲ ಉನ್ನತ ಹುದ್ದೆಗಳು ಬ್ರಿಟಿಷರ ಪಾಲಾಗಿದ್ದವು. ಇದರಿಂದ ಮಧ್ಯಮ ವರ್ಗಗಳ ಜನರ ಮನದಲ್ಲಿ ಅಸಂತೃಪ್ತಿ ತುಂಬಿತ್ತು. ತಮಗೆ ನ್ಯಾಯವಾಗಿ ದೊರೆಯಬೇಕಾಗಿರುವ ಅವಕಾಶಗಳು ದೊರೆಯುತ್ತಿಲ್ಲವೆಂಬ ಕೊರಗು ಅವರನ್ನು ಬಾಧಿಸುತ್ತಿತ್ತು.

ಲಾರ್ಡ್ ಲಿಟ್ಟನ್ ವೈಸ್‌ರಾಯ್ ಆಗಿದ್ದಾಗ (೧೮೭೬–೧೮೮೦) ಅನೇಕ ಪ್ರಚೋದನಕಾರಿ ಕ್ರಮಗಳನ್ನು ಕೈಗೊಳ್ಳಲಾಯಿತು. ಪ್ರಾದೇಶಿಕ ಭಾಷಾ ಪತ್ರಿಕೆಗಳ ಕಾಯ್ದೆ ಮತ್ತು ೧೮೭೮ರ ಶಸ್ತ್ರಾಸ್ತ್ರ ಕಾಯ್ದೆ – ಇವು ತುಂಬ ಹಾನಿಕಾರಕವಾಗಿದ್ದವು. ಬ್ರಿಟಿಷರು ಅವಿವೇಕತನದಿಂದ ನಡೆಸಿದ ಆಫ್‌ಘನ್ ಯುದ್ಧಗಳ ಮೇಲೆ, ಭಾರತೀಯರ ಹಣವನ್ನು ಅಪವ್ಯಯ ಮಾಡಲಾಯಿತು. ೧೮೭೭ ರಲ್ಲಿ ವಿಕ್ಟೋರಿಯಾ ರಾಣಿಯನ್ನು ಚಕ್ರವರ್ತಿನಿಯನ್ನಾಗಿ ಘೋಷಿಸಲಾಯಿತು. ಈ ಘೋಷಣೆಯ ಮೂಲಕ, ಬಿಳಿಯರ ಆಧಿಪತ್ಯಕ್ಕೆ ತದ್ವಿರುದ್ಧವಾಗಿ ಭಾರತೀಯರು ಸದಾ ಪಾರತಂತ್ರ್ಯದಲ್ಲೇ ಉಳಿಯಬೇಕೆಂಬುದನ್ನು ಸ್ಪಷ್ಟವಾಗಿ ಸೂಚಿಸಲಾಯಿತು. ಲಾರ್ಡ್ ಲಿಟ್ಟನ್‌ನ ವೈಸ್‌ರಾಯ್ ಅಧಿಕಾರ ಅಂತ್ಯಗೊಂಡ ನಂತರ "ಬೆಂಗಾಲಿ" ಎಂಬ ಪತ್ರಿಕೆ ಈ ರೀತಿ ಬರೆಯಿತು. "ಲಾರ್ಡ್ ಲಿಟ್ಟನ್ ತಮ್ಮ ದಮನಕಾರಿ ಕ್ರಮಗಳ ಮೂಲಕ, ತಮ್ಮ ದೇಶದಲ್ಲಿನ ಸಾರ್ವಜನಿಕ ಜೀವನವನ್ನು ಉದ್ದೀಪನಗೊಳಿಸಿದರು. ಆದ್ದರಿಂದ ಇದರ ಖ್ಯಾತಿ ಅವರಿಗೆ ಸಲ್ಲಬೇಕು. ಅವರ ಈ ಸೇವೆಗಾಗಿ ನಮ್ಮ ದೇಶದ ಜನರ ಕೃತಜ್ಞತೆಗೂ ಅವರು ಅರ್ಹರಾಗಿದ್ದಾರೆ."

೧೮೭೦ ರಿಂದ ೧೮೮೦ ರವರೆಗೆ ಅನೇಕ ಸ್ಥಳೀಯ ರಾಜಕೀಯ ಸಂಸ್ಥೆಗಳು ಆರಂಭವಾದವು. ೧೮೭೦ ರಲ್ಲಿ ರಾನಡೆಯವರ ಮಾರ್ಗದರ್ಶನದಲ್ಲಿ, ಪೂನಾದ ಸಾರ್ವಜನಿಕ ಸಭಾವನ್ನು ಆರಂಭಿಸಲಾಯಿತು. ಈ ಸಂಸ್ಥೆ ಮತ್ತು ಸುರೇಂದ್ರನಾಥ ಬ್ಯಾನರ್ಜಿ ಮತ್ತು ಅವರ ಗೆಳೆಯರು ಸ್ಥಾಪಿಸಿದ ಇಂಡಿಯನ್ ಅಸೋಸಿಯೇಷನ್ ಇವು ವಿಶೇಷ ಪ್ರಸ್ತಾಪಕ್ಕೆ ಅರ್ಹವಾಗಿವೆ. ೧೮೮೪ರಲ್ಲಿ ಮದ್ರಾಸ್ ಮಹಾಜನ ಸಭಾವನ್ನು ಆರಂಭಿಸಲಾಯಿತು ಆ ದಿನಗಳಲ್ಲಿ ಸುರೇಂದ್ರನಾಥ ಬ್ಯಾನರ್ಜಿ, ಉತ್ತರ ಭಾರತದ ಅನೇಕ ಪ್ರದೇಶಗಳಲ್ಲಿ ಸಂಚಾರ ಮಾಡಿ, ಜನರಲ್ಲಿ ರಾಜಕೀಯ ಜಾಗೃತಿಯನ್ನುಂಟುಮಾಡಿದರು.

೧೮೮೩ ರಲ್ಲಿ ಅವರು ಒಂದು ರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸಿದ್ದರು. ಈ ಸಮ್ಮೇಳನದಲ್ಲಿ ಪ್ರಾತಿನಿಧಿಕ ಮಂಡಳಿಗಳೂ, ಶಿಕ್ಷಣ, ಭಾರತೀಯರಿಗೆ ಉದ್ಯೋಗ ಮತ್ತು ಅಪರಾಧಗಳ ನ್ಯಾಯ ವಿಚಾರಣೆ ಇಂತಹ ಅನೇಕ ಪ್ರಶ್ನೆಗಳ ಚರ್ಚೆ

ನಡೆಸಲಾಯಿತು. ಯಾವುದೇ ಸುಸಂಘಟಿತ ಪ್ರಯತ್ನವಾಗಲಿ ಅಖಿಲ ಭಾರತ ಆಧಾರದ ಮೇಲೆ ನಡೆಯಬೇಕು. ಇಲ್ಲದಿದ್ದರೆ ಸರ್ಕಾರದ ಮುಂದಿರುವ ನಮ್ಮ ಕೋರಿಕೆಗಳಿಗೆ ಯಾವ ಮಹತ್ವವೂ ದೊರೆಯದೆ, ಅವು ನಿಷ್ಪ್ರಯೋಜಕವಾಗುತ್ತವೆ – ಎಂದು ಈ ಎಲ್ಲ ಸಂಸ್ಥೆಗಳ ನಾಯಕರು ಅಭಿಪ್ರಾಯಪಟ್ಟರು. ಇಂತಹ ಸಮಯದಲ್ಲಿ ಆ್ಯಲನ್ ಆಕ್ಟೇವಿಯನ್ ಹ್ಯೂಮ್, ಭಾರತದ ರಾಜಕಾರಣ ಕ್ಷೇತ್ರವನ್ನು ಸುಸಂಘಟಿತಗೊಳಿಸಲು ಮುಂದಾದರು. ಅವರು ೧೮೫೭ ರವರೆಗೂ ಸರ್ಕಾರಿ ಸೇವೆಯಲ್ಲಿದ್ದರು. ೧೮೮೨ ರಲ್ಲಿ ಅವರು ಸೇವೆಯಿಂದ ನಿವೃತ್ತರಾದರು. ಆಳುವವರ ಮತ್ತು ಪ್ರಜೆಗಳ ನಡುವೆ ಪರಿಣಾಮಕಾರಿಯಾದ ಸಂಪರ್ಕ ವ್ಯವಸ್ಥೆ ಇರಬೇಕು. ಅದು ಮನ್ನಣೆ ಪಡೆದ ವ್ಯವಸ್ಥೆಯಾಗಿದ್ದರೆ ಹೆಚ್ಚು ಪರಿಣಾಮಕಾರಿ – ಅಂತಹ ವ್ಯವಸ್ಥೆ ಇಲ್ಲದಿದ್ದರೆ, ಸರ್ಕಾರದ ಮೇಲೆ ಒತ್ತಡ ತರುವುದು ಅಸಾಧ್ಯವಾಗುತ್ತದೆ. ಎಂಬುದು ಹ್ಯೂಮ್ ಅವರ ಖಚಿತ ಅಭಿಪ್ರಾಯವಾಗಿತ್ತು. ಹ್ಯೂಮ್ ೧೮೮೩ರ ಮಾರ್ಚ್ ೧ ರಂದು ಕಲ್ಕತ್ತಾ ವಿಶ್ವವಿದ್ಯಾಲಯದ ಪದವೀಧರರಿಗೆ ಒಂದು ಪತ್ರ ಬರೆದರು. ಎಲ್ಲರೂ ಒಟ್ಟಾಗಿ, ಸಂವಿಧಾನಬದ್ಧ ಚಳವಳಿಯೊಂದನ್ನಾರಂಭಿಸುವಂತೆ, ಅವರು ಈ ಪದವೀಧರರಿಗೆ ಸಲಹೆ ನೀಡಿದ್ದರು, ೧೮೮೪ ರಲ್ಲಿ ಅವರು ಭಾರತೀಯ ಮುಖಂಡರ ಸಲಹೆ ಪಡೆದು ಇಂಡಿಯನ್ ನ್ಯಾಷನಲ್ ಯೂನಿಯನ್, ಯೋಜನೆಯನ್ನಾರಂಭಿಸಿದರು. ಅತಿ ಶೀಘ್ರದಲ್ಲೇ ಈ ಯೋಜನೆ ಭಾರತಾದ್ಯಂತ ವಿಸ್ತರಿಸಿತು. ಈ ಯೂನಿಯನ್‌ನ ಬೇಡಿಕೆಗಳು ಕೆಳಕಂಡಂತಿದ್ದವು: "ಇಂಡಿಯಾ ಕೌನ್ಸಿಲ್‌ಅನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸಬೇಕು ಇಲ್ಲವೆ ಅದು ಪೂರ್ಣ ಪರಿವರ್ತನೆಯಾಗಬೇಕು. ನ್ಯಾಯಾಂಗದಲ್ಲಿ ಮತ್ತು ಆಡಳಿತದ ಇತರ ವಿಭಾಗಗಳಲ್ಲಿ ಸ್ಥಳೀಯರಿಗೆ ಉನ್ನತ ಹುದ್ದೆಗಳನ್ನು ನೀಡದೆ ಅವರನ್ನು ಹೊರಗಿಟ್ಟಿರುವುದು, ತೆರಿಗೆಯ ಮೂಲಕ ಸಂಗ್ರಹವಾಗುವ ಹಣವನ್ನು ವಿನಿಯೋಗ ಮಾಡುವುದರಲ್ಲಿ ಭಾರತೀಯರಿಗೆ ತಮ್ಮ ಅಭಿಪ್ರಾಯ ಹೊರಸೂಸುವ ಅವಕಾಶ ಇಲ್ಲದಿರುವುದು, ಈಗಿರುವ ಲೆಜಿಸ್ಲೇಟಿವ್ ಕೌನ್ಸಿಲ್‌ಗಳು ಸ್ವಲ್ಪಮಟ್ಟಿಗೆ ಪ್ರಾತಿನಿಧಿಕವಾಗಿರುವಂತೆ ಮಾಡಲು, ಅವುಗಳನ್ನು ಮಾರ್ಪಡಿಸುವುದು–" ಈ ಎಲ್ಲ ವಿಷಯಗಳನ್ನೊಳಗೊಂಡ ಜ್ಞಾಪನಪತ್ರವೊಂದನ್ನು ಪಾರ್ಲಿಮೆಂಟಿಗೆ ಸಲ್ಲಿಸಲು ತೀರ್ಮಾನಿಸಲಾಯಿತು. ಹ್ಯೂಮ್ ಭಾರತದ ಹಿತೈಷಿಗಳಾಗಿದ್ದ ಸರ್. ವಿಲಿಯಮ್ ವೆಡ್ಡರ್ ಬರ್ನ್ ಮತ್ತು ಚಾರ್ಲೆಸ್ ಬ್ರ್ಯಾಡ್‌ಲಾ ಅವರೊಂದಿಗೆ ಸಮಾಲೋಚಿಸಿ, ಅವರ ಸಲಹೆ ಪಡೆಯಲು ಇಂಗ್ಲೆಂಡ್‌ಗೆ ತೆರಳಿದರು, ಈ ಮಹನೀಯರಿಂದ ಸಹಾಯದ ಆಶ್ವಾಸನೆ ಪಡೆದು ಭಾರತಕ್ಕೆ ಹಿಂದಿರುಗಿದ್ದರು. ಪೂನಾದಲ್ಲಿ ೧೮೮೫ರ ಡಿಸೆಂಬರ್ ೨೫ರಂದು ಆರಂಭವಾಗಬೇಕಾಗಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅವರು ಭಾರತಕ್ಕೆ ಹಿಂದಿರುಗಬೇಕಾಯಿತು. ಆದರೆ ಕಡೇ ಗಳಿಗೆಯಲ್ಲಿ ಸಮ್ಮೇಳನ

ನಡೆಯಬೇಕಾದ ಸ್ಥಳವನ್ನು ಪೂನಾದಿಂದ ಬಾಂಬೆಗೆ ಬದಲಾಯಿಸಬೇಕಾಯಿತು. ಈ ಸಮ್ಮೇಳನ ಕುರಿತು ತಾರಾಚಂದ್ ಹೀಗೆ ಹೇಳಿದ್ದಾರೆ. ಈ ಸಮ್ಮೇಳನಕ್ಕಾಗಿ ಎಲ್ಲ ಏರ್ಪಾಡುಗಳನ್ನು ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಷನ್ ನಡೆಸಿತ್ತು. ಈ ಸಭೆಗಳು ಗೋಕುಲ್‌ದಾಸ್ ತೇಜ್‌ಪಾಲ್ ಸಂಸ್ಕೃತ ಕಾಲೇಜಿನಲ್ಲಿ ನಡೆದವು. ಭಾರತದ ಎಲ್ಲ ಭಾಗಗಳಿಂದ ಬಂದಿದ್ದ ೭೨ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕಲ್ಕತ್ತಾದ ಪ್ರಸಿದ್ಧ ವಕೀಲರಾಗಿದ್ದ ಡಬ್ಲ್ಯು.ಸಿ. ಬ್ಯಾನರ್ಜಿ ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಅನಂತರ, ಸಂಸ್ಥೆಯ ಹೆಸರನ್ನು ಭಾರತದ ರಾಷ್ಟ್ರೀಯ ಕಾಂಗ್ರೆಸ್ (Indian National Congress) ಎಂದು ಬದಲಾಯಿಸಲಾಯಿತು. ರಾಷ್ಟ್ರದ ಏಕತೆಯನ್ನು ಪೂರ್ಣವಾಗಿ ಹೆಚ್ಚಿಸಿ, ಬಲಪಡಿಸುವುದೇ ಕಾಂಗ್ರೆಸ್‌ನ ಧ್ಯೇಯವೆಂದು ಅಧ್ಯಕ್ಷರು ಘೋಷಿಸಿದರು. ಕಾಂಗ್ರೆಸ್, ಸರ್ಕಾರಕ್ಕೆ ನಿಷ್ಠೆಯಿಂದಿರುವುದೆಂದು ಅಧ್ಯಕ್ಷರು ಆಶ್ವಾಸನೆ ನೀಡಿದರು. ಸರ್ಕಾರವು ವಿಶಾಲಾಧಾರ ಹೊಂದಿದ್ದು, ಅದರಲ್ಲಿ ಎಲ್ಲ ಜನರಿಗೂ ಸೂಕ್ತ ಹಾಗೂ ನ್ಯಾಯಬದ್ಧ ಸ್ಥಾನ ದೊರಕಿಸಿಕೊಡಬೇಕೆಂಬುದೇ ಕಾಂಗ್ರೆಸ್‌ನ ಬೇಡಿಕೆಯಾಗಿದೆ – ಎಂದು ಅವರು ಹೇಳಿದರು. ಲೆಜಿಸ್ಲೇಟಿವ್ ಕೌನ್ಸಿಲ್‌ಗಳ ಸುಧಾರಣೆಯಾಗಬೇಕೆಂದು ಸೂಚಿಸುವ ನಿರ್ಣಯವನ್ನು ಕೆ.ಟಿ. ತೆಲಂಗ್ ಮತ್ತು ಎಸ್. ಸುಬ್ರಹ್ಮಣ್ಯ ಐಯ್ಯರ್ ಮಂಡಿಸಿ, ಅನುಮೋದಿಸಿದರು. ತಾರಾಚಂದ್ ಅವರ ಪುಸ್ತಕದಿಂದ ಆಯ್ದ ಭಾಗವನ್ನು ಇಲ್ಲಿ ಉಲ್ಲೇಖಿಸಿ, ಸಮ್ಮೇಳನದ ಮಹತ್ವವನ್ನು ಸ್ಪಷ್ಟಪಡಿಸಲಾಗಿದೆ : "ಭಾರತದ ರಾಜಕೀಯ ಇತಿಹಾಸದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಜನನ ಒಂದು ಅಭೂತ ಪೂರ್ವ ಘಟನೆಯಾಗಿದೆ. ಇದರಿಂದ ಹೊಸಯುಗವೊಂದು ಆರಂಭವಾದಂತಾಗಿದೆ. ಇದು ರಾಜಕೀಯ ಏಕತೆಯ ಒಂದು ಯುಗವಾಗಿದೆ. ಇದು ಯಾರೂ ಮೇಲಿನಿಂದ ನಮ್ಮ ಮೇಲೆ ಹೇರಿದ್ದಲ್ಲ. ಇದು ತಾನಾಗಿಯೇ ಅಭಿವ್ಯಕ್ತವಾಗಿರುವ ಜನರ ದೃಢಸಂಕಲ್ಪವಾಗಿದೆ. ಕಾಂಗ್ರೆಸ್, ನೂತನ ಸಮಾಜವೊಂದರ ಕೇಂದ್ರ ಮಾಧ್ಯಮವಾಗಿದೆ. ಪ್ಲಾಸಿ ಕದನ ನಡೆದಾಗಿನಿಂದ ಒಂದು ನೂರು ವರ್ಷಗಳ ಅವಧಿಯಲ್ಲಿ ದೇಶದಲ್ಲುಂಟಾಗಿರುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳ ಫಲ ಸ್ವರೂಪವಾಗಿ ಕಾಂಗ್ರೆಸ್ ರೂಪುಗೊಂಡಿದೆ. ಇದು ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಎಲ್ಲ ಭಾರತೀಯರ ಮೇಲೆ ಪರಿಣಾಮ ಬೀರುವಂತಹ ಒಂದು ಕಾರ್ಯವಿಧಾನ ಪೂರ್ಣವಾಗಿರುವುದರ ಸಂಕೇತವಾಗಿದೆ".

ಈ ಸಮ್ಮೇಳನ ಸಣ್ಣದಾಗಿ ಆರಂಭವಾಯಿತು. ಆದರೂ ಇದು ಅಖಿಲ ಭಾರತ ಸಮಾವೇಶವಾಗಿದ್ದುದರಿಂದ, ಇಡೀ ದೇಶದಲ್ಲಿ ವಿದ್ಯುತ್ ಪ್ರವಹಿಸಿದಂತಾಯಿತು. ಕಲ್ಕತ್ತಾದಲ್ಲಿ ನಡೆದ ಎರಡನೆಯ ಅಧಿವೇಶನದಲ್ಲಿ ೪೩೪ ಪ್ರತಿನಿಧಿಗಳು ಮತ್ತು ಮದ್ರಾಸ್‌ನಲ್ಲಿ ನಡೆದ ಮೂರನೆಯ ಅಧಿವೇಶನದಲ್ಲಿ ೬೦೭

ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಪ್ರತಿನಿಧಿಗಳು ಎಲ್ಲ ಕೋಮುಗಳಿಗೆ ಸೇರಿದವರಾಗಿದ್ದರು. ಮುಸ್ಲಿಮರಾಗಿದ್ದ ಬದ್ರುದಿನ್ ತ್ಯಾಬ್‌ಜಿ, ಪಾರ್ಸಿಗಳಾಗಿದ್ದ ಸರ್ ಫಿರೋಜ್ ಷಾ ಮೆಹ್ತಾ, ಇಂಗ್ಲಿಷರಾಗಿದ್ದ ಎ. ಒ. ಹ್ಯೂಮ್ ಹಾಗೂ ಅನೇಕ ಹಿಂದೂ ನಾಯಕರು ಈ ಅಧಿವೇಶನದಲ್ಲಿ ಭಾಗವಹಿಸಿ, ಕಾಂಗ್ರೆಸ್ ಅನ್ನು ಕೋಮುಯೇತರ ಅಖಿಲ ಭಾರತ ಸಂಸ್ಥೆಯಾಗುವಂತೆ ಮಾಡಿದರು.

ಈ ಅಧಿವೇಶನಕ್ಕೆ ಸರ್ಕಾರದಿಂದ ವ್ಯಕ್ತವಾದ ಮೊದಲ ಪ್ರತಿಕ್ರಿಯೆ ಅಹಿತಕರವಾಗಿರಲಿಲ್ಲ. ೧೮೮೬ರಲ್ಲಿ ಕಲ್ಕತ್ತಾದಲ್ಲಿ ಕಾಂಗ್ರೆಸ್‌ನ ಅಧಿವೇಶನ ನಡೆದಾಗ, ವೈಸ್‌ರಾಯ್ ಆಗಿದ್ದ ಲಾರ್ಡ್ ಡಫರಿನ್, ಅದರಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳನ್ನು ಸತ್ಕಾರಕೂಟವೊಂದಕ್ಕೆ ಆಹ್ವಾನಿಸಿದ್ದರು. ಅದರ ಮುಂದಿನ ಅಧಿವೇಶನ ನಡೆದಾಗ, ಮದ್ರಾಸ್‌ನ ಗವರ್ನರ್ ಸಹ ಪ್ರತಿನಿಧಿಗಳಿಗೆ ಅಂತಹುದೇ ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಆದರೆ ಕಾಂಗ್ರೆಸ್ ಅಧಿವೇಶನವನ್ನು ಪ್ರೋತ್ಸಾಹಿಸುವ ಮನಸ್ಸು ಸರ್ಕಾರಕ್ಕೆ ಬಹಳ ಕಾಲ ಉಳಿಯಲಿಲ್ಲ. ೧೮೮೮ ರಲ್ಲಿ, ಅಧಿವೇಶನವು ಜವಾಬ್ದಾರಿ ಸರ್ಕಾರದ ರಚನೆಯಾಗಬೇಕೆಂದು ಒತ್ತಾಯಿಸಿ, ನಿರ್ಣಯಗಳನ್ನು ಅಂಗೀಕರಿಸಿದಾಗ ಮತ್ತು ಅಧಿಕಾರಿಗಳನ್ನು ಟೀಕಿಸುವ ಭಾಷಣಗಳನ್ನು ಮಾಡಿದಾಗ, ಅಧಿಕಾರಿಗಳು ಕೆರಳಿದರು ಮತ್ತು ತುಂಬ ಅಸಮಾಧಾನಗೊಂಡರು. ಆಗ ಅದೇ ಲಾರ್ಡ್ ಡಫರಿನ್, ಎ. ಒ. ಹ್ಯೂಮ್ ಅವರನ್ನು "ಕುತ್ಸಿತ ಬುದ್ಧಿಯ, ವಿವೇಚನಾರಹಿತ ವ್ಯಕ್ತಿ"ಯೆಂದು ಬಣ್ಣಿಸಿದರು, ಅವರೊಬ್ಬ ಅಸತ್ಯ ವ್ಯಕ್ತಿಯೆಂದು ಹೇಳಿದರು. ಈ ಪ್ರಕಾರ, ಭಾರತದ ರಾಷ್ಟ್ರೀಯವಾದ ಮತ್ತು ಬ್ರಿಟಿಷರ ಸಾಮ್ರಾಜ್ಯವಾದದ ನಡುವಣ ಘರ್ಷಣೆ ಆರಂಭವಾಯಿತು.

* * * *

೮. ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ಭಾರತದ ರಾಷ್ಟ್ರೀಯತೆಯ ನಡುವೆ ಸಂಘರ್ಷ

ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಯಿತು. ಸರ್ ವಿಲಿಯಮ್ ವೆಡ್ಡರ್‌ಬರ್ನ್, ದಾದಾಭಾಯ್ ನೌರೋಜಿ ಮತ್ತು ಇತರರನ್ನು ಒಳಗೊಂಡ ಬ್ರಿಟಿಷ್ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯ ಸದಸ್ಯರು, ಪಾರ್ಲಿಮೆಂಟ್ ಸದಸ್ಯರ ಗುಂಪೊಂದರ ಸಹಾನುಭೂತಿ ಪಡೆಯುವಲ್ಲಿ ಸಫಲರಾದರು. ಈ ಪಾರ್ಲಿಮೆಂಟ್ ಸದಸ್ಯರು ಭಾರತದ ವ್ಯವಹಾರಗಳಲ್ಲಿ ತುಂಬ ಆಸಕ್ತಿ ತೋರಿಸಿದರು. ಭಾರತದ ರಾಷ್ಟ್ರೀಯ ಭಾವನೆ ಹೆಚ್ಚುತ್ತಿದ್ದಂತೆ ಅದನ್ನು ತಡೆಯಲು ೧೮೯೨ರ ಭಾರತೀಯ ಮಂಡಳಿಗಳ ಕಾಯ್ದೆ (Indian Councils Act) ಯನ್ನು ಅಂಗೀಕರಿಸಲಾಯಿತು. ೧೮೬೧ರ ಭಾರತೀಯ ಮಂಡಳಿಗಳ ಕಾಯ್ದೆಯು ಗವರ್ನರ್ ಜನರಲ್ ಮಂಡಲಿಯ ಪೂರಕ ಸದಸ್ಯರ ಸಂಖ್ಯೆಯನ್ನು ಆರರಿಂದ ಹನ್ನೆರಡಕ್ಕೆ ಹೆಚ್ಚಿಸಲು ಅವಕಾಶ ಮಾಡಿಕೊಟ್ಟಿತ್ತು : ಈ ಹನ್ನೆರಡು ಮಂದಿಯಲ್ಲಿ, ಅರ್ಧದಷ್ಟು ಮಂದಿ ಅನಧಿಕೃತ ಸದಸ್ಯರಾಗಿ ನೇಮಕಗೊಳ್ಳುತ್ತಿದ್ದರು. ಮತ್ತು ಕಾಲುಭಾಗದಷ್ಟು ಸದಸ್ಯರು ಭಾರತೀಯರಾಗಿರುತ್ತಿದ್ದರು. ಅಂದರೆ, ಸಾಮಾನ್ಯವಾಗಿ ದೊಡ್ಡ ಜಮೀನುದಾರರುಗಳಾಗಿದ್ದ ಮೂವರು, ಆ ಭಾರತೀಯ ಸದಸ್ಯರಾಗಿರುತ್ತಿದ್ದರು. ಭಾರತೀಯರ ಅಭಿಪ್ರಾಯ ಪಡೆಯಲು, ಅವರ ಸಲಹೆಯನ್ನು ಸಹ ಕೇಳಲಾಗುತ್ತಿತ್ತೆಂಬ ಭಾವನೆ ಬರುವಂತೆ ಮಾಡುವುದೇ ಇದರ ಉದ್ದೇಶವಾಗಿತ್ತು. ೧೮೯೨ರಲ್ಲಿ ಅಂಗೀಕರಿಸಲಾದ ಕಾಯ್ದೆಯ ಪ್ರಕಾರ, ಗವರ್ನರ್ ಜನರಲ್ ಅವರ ಲೆಜಿಸ್ಲೇಟಿವ್ ಕೌನ್ಸಿಲ್, ೧೦ಕ್ಕಿಂತ ಕಡಿಮೆ ಸದಸ್ಯರನ್ನು ಹೊಂದಿರಬಾರದು. ಮತ್ತು ನಾಮಕರಣಗೊಂಡ ಪೂರಕ ಸದಸ್ಯರ ಸಂಖ್ಯೆ ೧೬ ಕ್ಕಿಂತ ಹೆಚ್ಚಾಗಿರಬಾರದು. ಇವರಲ್ಲಿ ನಾಲ್ವರನ್ನು ನಾಲ್ಕು ಪ್ರಾಂತೀಯ ಮಂಡಳಿಗಳ ಅನಧಿಕೃತ ಸದಸ್ಯರು ಆರಿಸಬೇಕು ಎಂದು ಸೂಚಿಸಲಾಗಿತ್ತು. ಪ್ರಾಂತೀಯ ಮಂಡಳಿಗಳ ಸದಸ್ಯರನ್ನು ಸಹ ಹೆಚ್ಚಿಸಲಾಯಿತು. ಇವರಲ್ಲಿ ಕೆಲವು ಸದಸ್ಯರನ್ನು, ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಚುನಾಯಿಸುತ್ತಿದ್ದವು. ಈ ಸ್ವಯಮಾಡಳಿತ ಸಂಸ್ಥೆಗಳು ಲಾರ್ಡ್ ರಿಪ್ಪನ್ ವೈಸ್‌ರಾಯ್ ಆಗಿದ್ದ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿದ್ದವು.

ಈ ಶಾಸಕೀಯ ಸಂಸ್ಥೆಗಳಲ್ಲಿ, ಪ್ರಶ್ನೆಗಳನ್ನು ಕೇಳುವ ಮತ್ತು ಸರ್ಕಾರದ ಕ್ರಮಗಳನ್ನು ಚರ್ಚಿಸುವ ಹಕ್ಕನ್ನು ಸದಸ್ಯರುಗಳಿಗೆ ಕೊಡಲಾಗಿತ್ತು.

ಒಲ್ಲದ ಮನಸ್ಸಿನಿಂದ ಕೊಡಲಾಗಿದ್ದ ಈ ರಿಯಾಯಿತಿಗಳಿಂದ ಮಿತವಾದಿಗಳು ಕೂಡ ಸಂತೃಪ್ತರಾಗಲಿಲ್ಲ. ಆದರೆ, ಸರ್ಕಾರಕ್ಕೆ ತಾನು ನಿಷ್ಠೆಯಿಂದಿರುವುದಾಗಿ ಕಾಂಗ್ರೆಸ್, ವಚನ ನೀಡಿತ್ತು. ಅಲ್ಲದೆ ಯಾವುದೇ ಚಳವಳಿಯನ್ನಾಗಲಿ ರಾಜ್ಯಾಂಗಬದ್ಧವಾಗಿ ನಡೆಸಲಾಗುವುದೆಂದು ಸಹ ಅದು ವಾಗ್ದಾನ ಮಾಡಿತ್ತು. ಆದ್ದರಿಂದ, ಅದು ಅಸಂತೃಪ್ತಿ ವ್ಯಕ್ತಪಡಿಸುವ ಹಾಗೂ ಭಾರತೀಯರಿಗೆ ಇನ್ನೂ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕೆಂದು ಮತ್ತು ಇನ್ನೂ ಹೆಚ್ಚು ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸುವ ನಿರ್ಣಯಗಳನ್ನು ಅಂಗೀಕರಿಸಿ, ಅಷ್ಟಕ್ಕೇ ತೃಪ್ತಿಪಟ್ಟುಕೊಂಡಿತು. ಈ ರೀತಿಯ ನಿಲುವಿನಿಂದ ತೀವ್ರ ಸುಧಾರಣಾವಾದಿಗಳ ಒಂದು ಗುಂಪಿಗೆ ಸಂತೃಪ್ತಿಯಾಗಲಿಲ್ಲ. ಈ ಗುಂಪು, ಯೂರೋಪಿಯನರ ಕ್ರಾಂತಿಕಾರಿ ರಾಷ್ಟ್ರೀಯವಾದದಿಂದ ಪ್ರೇರಿತವಾಗಿತ್ತು. ಬಾಲಗಂಗಾಧರ ತಿಲಕ್, ಈ ಗುಂಪಿನ ನಾಯಕರಾಗಿದ್ದರು. ಅವರ 'ಕೇಸರಿ' ಪತ್ರಿಕೆ, ಈ ಹೊಸ ವಿಚಾರ ಪರಂಪರೆಯ ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಯಿತು. ಬಂಗಾಳದಲ್ಲಿ ಅರವಿಂದ ಘೋಷ್ ಮತ್ತು ಬಿಪಿನ್‌ಚಂದ್ರಪಾಲ್ ಹಾಗೂ ಪಂಜಾಬ್‌ನಲ್ಲಿ ಲಾಲಾ ಲಜಪತ್‌ರಾಯ್, ತಿಲಕ್ ಅವರ ಪ್ರಬಲ ಬೆಂಬಲಿಗರಾದರು. ಈ ಮಧ್ಯೆ ಭಯೋತ್ಪಾದಕ ಚಳವಳಿಯೊಂದು ಸಹ ಆರಂಭವಾಗಿತ್ತು. ೧೮೯೭ ರಲ್ಲಿ ಪೂನಾದಲ್ಲಿ, ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವ ಆಚರಿಸುತ್ತಿದ್ದ ಸಂದರ್ಭದಲ್ಲಿ, ಪ್ಲೇಗು ನಿರೋಧಕ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು, ಚಾಪೆಕರ್ ಸೋದರರು ಕೊಲೆಗೈದರು. ಈ ಇಬ್ಬರು ಹತ್ಯಾಕಾರರನ್ನು ಗಲ್ಲಿಗೇರಿಸಲಾಯಿತು. ದೇಶದ್ರೋಹದ ಆರೋಪದ ಮೇಲೆ ತಿಲಕ್ ಅವರನ್ನು ವಿಚಾರಣೆಗೆ ಗುರಿಪಡಿಸಲಾಯಿತು, ಅನಂತರ ಅವರಿಗೆ ಎರಡು ವರ್ಷಗಳ ಸೆರೆವಾಸದ ಶಿಕ್ಷೆ ವಿಧಿಸಲಾಯಿತು. ತರಾತುರಿಯಲ್ಲಿ ಅಂಗೀಕರಿಸಲಾದ ದೇಶದ್ರೋಹ ಕಾಯ್ದೆಯನ್ವಯ ತಿಲಕರಿಗೆ ಈ ಶಿಕ್ಷೆ ನೀಡಲಾಯಿತು.

ಲಾರ್ಡ್ ಕರ್ಜನ್ ವೈಸ್‌ರಾಯ್ ಆಗಿದ್ದ ಕಾಲದಲ್ಲಿ (೧೮೯೯–೧೯೦೫) ರಾಷ್ಟ್ರೀಯವಾದಿ ಚಳವಳಿಗೆ ನವಚೈತನ್ಯ ದೊರೆಯಿತು. ಕರ್ಜನ್ ಉತ್ತಮ ಕುಲದಲ್ಲಿ ಜನಿಸಿದ್ದರು. ಪ್ರಬಲ ಹಾಗೂ ನ್ಯಾಯಯುತ ಆಡಳಿತದಿಂದ ಭಾರತೀಯರು ಸಂತೃಪ್ತರಾಗುವರೆಂದು ಅವರು ಭಾವಿಸಿದ್ದರು. ಭಾರತೀಯ ಮಧ್ಯಮ ವರ್ಗಗಳ ಅತಿ ಸ್ವಲ್ಪ ಜನರು ದೇಶದ್ರೋಹದ ಹಾದಿ ಹಿಡಿದಿದ್ದಾರೆ. ಆದ್ದರಿಂದ ಭಾರತದ ರಾಜಕಾರಣಿಗಳು ಪದೇಪದೇ ಬೇಡಿಕೆಗಳನ್ನು ಮಂಡಿಸುತ್ತಿದ್ದಾರೆಂಬುದು ಅವರ ಅಭಿಪ್ರಾಯವಾಗಿತ್ತು. ಅವರು ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯದ

ಮುಕುಟಮಣಿಯನ್ನಾಗಿ ಮಾಡಬಯಸಿದರು. ಅವರು ಶಿಕ್ಷಣದಲ್ಲಿ ಸೂಕ್ತ ಸುಧಾರಣೆಗಳನ್ನು ತರಲು ಪ್ರಯತ್ನಿಸಿದರು. ದೇಶದ್ರೋಹದ ಪ್ರವೃತ್ತಿಯುಳ್ಳ ರಾಜಕಾರಣಿಗಳನ್ನು ರೂಪಿಸುತ್ತಿದ್ದ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ ಅಗತ್ಯವೆಂದು ಅವರು ನಂಬಿದ್ದರು. ರಾಜಕೀಯ ಚಳವಳಿಯ ಮುಂಚೂಣಿಯಲ್ಲಿರುವ ಎಲ್ಲ ಮುಖಂಡರು ಬಂಗಾಳೀ ಬಾಬುಗಳೆಂದು ಅವರು ಭಾವಿಸಿದ್ದರು. ಈ ಮುಖಂಡರ ಬಲ ಮುರಿಯಲು ಹಾಗೂ ಸುಲಭವಾದ ಆಡಳಿತಕ್ಕೆ ಅನುಕೂಲ ಮಾಡಿಕೊಡಲು ಬಂಗಾಳವನ್ನು ಎರಡು ಭಾಗಗಳಾಗಿ ವಿಭಜಿಸಲಾಯಿತು. ಒಂದು ಭಾಗ ಪೂರ್ವಬಂಗಾಳ ಮತ್ತು ಅಸ್ಸಾಮ್‌ಗಳನ್ನು ಒಳಗೊಂಡಿತ್ತು. ಇನ್ನೊಂದು ಭಾಗ ಪಶ್ಚಿಮ ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳನ್ನು ಒಳಗೊಂಡಿತ್ತು. ಬಂಗಾಳದ ಈ ವಿಭಜನೆಯನ್ನು ಎಲ್ಲ ರಾಷ್ಟ್ರೀಯವಾದಿ ಪತ್ರಿಕೆಗಳು ಪ್ರಬಲವಾಗಿ ವಿರೋಧಿಸಿದವು. ಬ್ರಿಟಿಷ್ ಸರಕುಗಳನ್ನು ನಿಷೇಧಿಸಲು ಸ್ವದೇಶಿ ಚಳವಳಿ ಆರಂಭವಾಯಿತು. ಮೊದಲು, ಬ್ರಿಟನ್‌ನಲ್ಲಿ ತಯಾರಿಸಿದ ಬಟ್ಟೆಗಳನ್ನು ಸುಟ್ಟುಹಾಕಲಾಯಿತು. ಇದೇ ಸಮಯದಲ್ಲಿ ಜಪಾನ್, ರಷ್ಯಾದ ಮೇಲೆ ಗಳಿಸಿದ ವಿಜಯವು ಭಾರತದ ರಾಷ್ಟ್ರೀಯವಾದವನ್ನು ಉದ್ರಿಕ್ತಗೊಳಿಸಿತು. ಕೆಲವು ಗುಪ್ತ ಕ್ರಾಂತಿಕಾರಿ ಸೊಸೈಟಿಗಳು ಅಸ್ತಿತ್ವಕ್ಕೆ ಬಂದವು. ೧೯೦೮ರ ಏಪ್ರಿಲ್‌ನಲ್ಲಿ ಬಂಗಾಳಿ ಯುವಕನೊಬ್ಬನು ಮುಜಫರ್‌ಪುರದಲ್ಲಿ, ಸೆಷನ್ಸ್ ನ್ಯಾಯಾಧೀಶರೊಬ್ಬರ ಕೊಲೆಗೆ ಯತ್ನಿಸಿದನು. ಆದರೆ, ದುರದೃಷ್ಟವಶಾತ್ ಅವನು ಇಬ್ಬರು ಇಂಗ್ಲಿಷ್ ಮಹಿಳೆಯರನ್ನು ಕೊಂದನು. ಇದಾದ ಸ್ವಲ್ಪ ಸಮಯದಲ್ಲೇ ರೈಲು ನಿಲ್ದಾಣದಲ್ಲಿ ಮ್ಯಾಜಿಸ್ಟ್ರೇಟರೊಬ್ಬರ ಮೇಲೆ ಗುಂಡು ಹಾರಿಸಲಾಯಿತು. ಬಂಗಾಳದ ಲೆಫ್ಟಿನೆಂಟ್ ಗವರ್ನರ್ ಅವರ ಹತ್ಯೆಗಾಗಿ ಮತ್ತೊಂದು ಪ್ರಯತ್ನ ನಡೆಯಿತು. ಈ ಘಟನೆಗಳು ಅಲಿಪೂರ್ ಒಳಸಂಚು ಮೊಕದ್ದಮೆಯ ವಿಚಾರಣೆಗೆ ಎಡೆ ಮಾಡಿಕೊಟ್ಟವು. ಈ ಮಧ್ಯೆ ತೀವ್ರ ಸುಧಾರಣಾವಾದಿಗಳು ತಾಳ್ಮೆಗೆಟ್ಟರು. ಅವರು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನಗಳಲ್ಲಿ ತಮ್ಮ ಅಸಂತೃಪ್ತಿಯನ್ನು ಧ್ವನಿಯೇರಿಸಿ ವ್ಯಕ್ತಪಡಿಸಲಾರಂಭಿಸಿದರು. ಪಕ್ಷದಲ್ಲಿ ಒಡಕು ಹಾಗೂ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿದ್ದುದರಿಂದ ನಾಯಕರು ತುಂಬ ಕಳವಳಗೊಂಡು ೧೯೦೬ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಲು ದಾದಾಭಾಯ್ ನೌರೋಜಿಯುವರನ್ನು ಇಂಗ್ಲೆಂಡಿನಿಂದ ಕರೆತಂದರು. ೧೯೦೭ರಲ್ಲಿ ಉದಾರವಾದಿಗಳು, ತೀವ್ರವಾದಿಗಳನ್ನು ಹೊರಗಿಡಲು ತೀರ್ಮಾನಿಸಿದರು. ಮತ್ತು ಅದೇ ವರ್ಷ ಸೂರತ್‌ನಲ್ಲಿ ನಡೆದ ಅಧಿವೇಶನಕ್ಕೆ ರಾಸ್ ಬಿಹಾರಿ ಘೋಷ್ ಅವರನ್ನು ಅಧ್ಯಕ್ಷರಾಗಿ ಆರಿಸಿದರು. ಪ್ರಾರಂಭಿಕ ಅಧಿವೇಶನದಲ್ಲಿ, ತಿಲಕ್ ಎದ್ದುನಿಂತು, ಅಧ್ಯಕ್ಷತೆ ವಹಿಸಲು ಆಯ್ಕೆಯಾಗಿದ್ದ ವ್ಯಕ್ತಿಯನ್ನು ವಿರೋಧಿಸಿದರು. ಕಡೆಗೆ, ಏನನ್ನೂ ಸಾಧಿಸದೆ, ಈ ಅಧಿವೇಶನ ಅಂತ್ಯಗೊಂಡಿತು. ಆ ವರ್ಷದಿಂದ ಕಾಂಗ್ರೆಸ್

ಇಬ್ಭಾಗವಾಯಿತು. ಆದರೂ ಸಂಸ್ಥೆಯಲ್ಲಿ ಉದಾರವಾದಿಗಳೇ ಪ್ರಬಲರಾಗಿದ್ದರು. ತಿಲಕರನ್ನು ಪುನಃ ದೇಶದ್ರೋಹದ ಆಪಾದನೆಗೊಳಪಡಿಸಲಾಯಿತು. ಅವರಿಗೆ ಆರು ವರ್ಷಗಳ ಜೈಲುವಾಸದ ಶಿಕ್ಷೆಯನ್ನು ವಿಧಿಸಲಾಯಿತು. ಅವರನ್ನು ಮಾಂಡಲೆ ಜೈಲಿಗೆ ಕಳಿಸಲಾಯಿತು. ಈ ಮಧ್ಯೆ, ಇಂಗ್ಲೆಂಡಿನಲ್ಲಿ ಲಿಬರಲ್ ಪಕ್ಷದವರೇ ಅಧಿಕಾರಕ್ಕೆ ಬಂದರು. ಲಾರ್ಡ್ ಮಾರ್ಲೆ, ಸೆಕ್ರೆಟರಿ ಆಫ್ ಸ್ಟೇಟ್ ಆದರು. ಅವರು ಭಾರತದ ಉದಾರವಾದಿಗಳನ್ನು ಸಂತೈಸುವ ಪ್ರಾಮಾಣಿಕ ಇಚ್ಛೆ ಹೊಂದಿದ್ದರು. ಅವರು ಗೋಪಾಲಕೃಷ್ಣ ಗೋಖಲೆಯವರಿಂದ ತುಂಬ ಪ್ರಭಾವಿತರಾಗಿದ್ದರು. ಆದರೆ ಮಾರ್ಲೆಯವರಿಗೆ ಪರಿಸ್ಥಿತಿಯ ಮೇಲೆ ಸಂಪೂರ್ಣ ಪ್ರಭುತ್ವವಿರಲಿಲ್ಲ. ಭಾರತದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳು, ಪಾರ್ಲಿಮೆಂಟಿನಲ್ಲಿದ್ದ ಎರಡೂ ಪಕ್ಷಗಳ ಸಾಮ್ರಾಜ್ಯವಾದಿಗಳ ಪ್ರಬಲ ನೆರವಿನಿಂದ ಭಾರತದ ರಾಷ್ಟ್ರೀಯವಾದಿ ಚಳವಳಿಯನ್ನು ಅಂಕುಶದಲ್ಲಿಡಲು ಪ್ರಯತ್ನಿಸಿದರು. ಇದಕ್ಕಾಗಿ ಅವರು ಸೂಕ್ತ ತಂತ್ರವನ್ನು ರೂಪಿಸತೊಡಗಿದರು. ಅವರು ಸ್ವಲ್ಪಮಟ್ಟಿಗೆ ಪ್ರಜ್ಞಾಪೂರ್ವಕವಾಗಿ ಮತ್ತು ಸ್ವಲ್ಪಮಟ್ಟಿಗೆ ಆವಶ್ಯಕತೆಯ ನಿರ್ಬಂಧಕ್ಕೊಳಗಾಗಿ ಚತುರ್ವಿಧ ಧೋರಣೆಯನ್ನು ರೂಪಿಸಿದರು. ಸಾಮ್ರಾಜ್ಯವಾದಿಗಳ ಪ್ರಾಬಲ್ಯಕ್ಕೆ ಯಾವುದೇ ತೀವ್ರ ಬೆದರಿಕೆ ಉಂಟಾಗದ ರೀತಿಯಲ್ಲಿ, ಮಿತವಾದಿಗಳಿಗೆ ಕೆಲವು ರಿಯಾಯಿತಿಗಳನ್ನು ನೀಡಿ ಅವರನ್ನು ಸಂತೈಸುವುದು ಈ ತಂತ್ರಗಳಲ್ಲಿ ಒಂದಾಗಿತ್ತು. ಬ್ರಿಟಿಷರ ಸಾಮ್ರಾಜ್ಯವಾದದ ಸಂರಕ್ಷಣೆಗಾಗಿ, ಅವರ ಬೆಂಬಲಕ್ಕೆ ಬರುವಂತೆ ಭಾರತದ ರಾಜರುಗಳನ್ನು ಸಿದ್ಧವಾಗಿಟ್ಟಿರುವುದು ಎರಡನೆಯ ತಂತ್ರವಾಗಿತ್ತು. ವಿಶೇಷ ರಿಯಾಯಿತಿಗಳ ಮೂಲಕ ಭಾರತೀಯ ಮುಸ್ಲಿಮರನ್ನು ಇತರರಿಂದ ದೂರವಿಟ್ಟಿರಲು ಪ್ರಯತ್ನಿಸುವುದು ಮೂರನೆಯ ತಂತ್ರವಾಗಿತ್ತು. ತೀವ್ರವಾದಿಗಳಾಗಿದ್ದ ರಾಜಕಾರಣಿಗಳನ್ನು ಮತ್ತು ಪತ್ರಿಕೆಗಳನ್ನು ಕಠೋರವಾಗಿ ದಮನಗೊಳಿಸುವುದು ನಾಲ್ಕನೆಯ ತಂತ್ರವಾಗಿತ್ತು. ಈ ಧೋರಣೆಗನುಗುಣವಾಗಿಯೇ, ೧೯೦೬ರಲ್ಲಿ ಆಗಾಖಾನ್, ಲಾರ್ಡ್ ಮಿಂಟೊ ಅವರ ಬಳಿ ಒಂದು ನಿಯೋಗವನ್ನೊಯ್ದರು. ಮುಸ್ಲಿಮರಿಗಾಗಿಯೇ ಪ್ರತ್ಯೇಕ ಮತದಾರರಿರಬೇಕು ಮತ್ತು ಮುಸ್ಲಿಮರನ್ನು ಪ್ರತಿನಿಧಿಸುವ ಪ್ರತ್ಯೇಕ ಉಮೇದುವಾರರುಗಳಿರಬೇಕು ಎಂಬುದೇ ಅವರ ಬೇಡಿಕೆಯಾಗಿತ್ತು. ಇದು, ಅಲಿಗಢ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಆರ್ಕಿಬಾಲ್ಡ್ ಮತ್ತು ವೈಸ್‌ರಾಯ್‌ಗೆ ಆಪ್ತ ಕಾರ್ಯದರ್ಶಿಯಾಗಿದ್ದ ಡನ್‌ಲಪ್‌ಸ್ಮಿತ್ ಮತ್ತು ಇನ್ನೂ ಕೆಲವು ಮಂದಿ ಸೇರಿಕೊಂಡು ಸೃಷ್ಟಿಸಿದ್ದ ಯೋಜನೆಯಾಗಿತ್ತು. ಆಗಾಖಾನ್ ಅವರ ಬೇಡಿಕೆಯನ್ನು ತಕ್ಷಣವೇ ತತ್ವಶಃ ಒಪ್ಪಿಕೊಳ್ಳಲಾಯಿತು. ೧೯೦೯ರ ಮಿಂಟೊ–ಮಾರ್ಲೆ ಸುಧಾರಣೆಗಳ ಮೂಲಕ, ಈ ಬೇಡಿಕೆಯನ್ನು ಕಾರ್ಯಗತಗೊಳಿಸಲಾಗಿತ್ತು.

ಈ ಸುಧಾರಣೆಗಳು, ಭಾರತೀಯ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಸದಸ್ಯರ ಸಂಖ್ಯೆಯನ್ನು ೧೬ರಿಂದ ೬೦ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಇವರಲ್ಲಿ

೨೮ಕ್ಕೆ ಮೀರದಷ್ಟು ಸಂಖ್ಯೆಯ ಸದಸ್ಯರುಗಳು ಅಧಿಕಾರಿಗಳಾಗಿರಬೇಕೆಂದು ಸೂಚಿಸಲಾಗಿತ್ತು. ಉಳಿದ ೩೨ ಸದಸ್ಯರ ಪೈಕಿ ೨೭ ಸದಸ್ಯರನ್ನು, ವಿಶೇಷ ವಿದ್ಯಾರ್ಹತೆಗಳನ್ನು ಹೊಂದಿದ ಮತದಾರರಿರುವ ಕ್ಷೇತ್ರಗಳಿಂದ ಆರಿಸಬೇಕು, ಉಳಿದ ಐವರು, ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟ ಸದಸ್ಯರಾಗಿರಬೇಕು. ಮುಸ್ಲಿಮ್ ಪ್ರತಿನಿಧಿಗಳನ್ನು ಮುಸ್ಲಿಮ್ ಮತದಾರರಿರುವ ಕ್ಷೇತ್ರಗಳಿಂದಲೇ ಆರಿಸಬೇಕಾಗಿತ್ತು. ಆಯ–ವ್ಯಯ ಪತ್ರಗಳ ಬಗ್ಗೆ ಚರ್ಚೆ ನಡೆಸಲು ಮತ್ತು ವಿಧಿವತ್ತಾಗಿ ಶಾಸನವನ್ನು ಅಂಗೀಕರಿಸಲು ಅವಕಾಶ ಕಲ್ಪಿಸಲಾಗಿತ್ತು. ಪ್ರಾಂತ್ಯಗಳಲ್ಲಿದ್ದ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಲ್ಲೂ ಅದೇ ರೀತಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಅವಕಾಶ ಮಾಡಿಕೊಡಲಾಗಿತ್ತು. ಗವರ್ನರ್‌ಗಳ ಕಾರ್ಯನಿರ್ವಾಹಕ ಮಂಡಳಿಗಳಿಗೆ ಭಾರತೀಯ ಸದಸ್ಯರನ್ನು ನೇಮಕ ಮಾಡುವ ಬಗ್ಗೆ ಹೊಸ ಪದ್ಧತಿ ಜಾರಿಗೆ ತರಲಾಯಿತು. ಇದೇ ಸಮಯದಲ್ಲಿ ಭಾರತೀಯ ವೃತ್ತಪತ್ರಿಕೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು, ತೀವ್ರ ಸ್ವರೂಪದ ಕಾನೂನನ್ನು ಅಂಗೀಕರಿಸಲಾಯಿತು. ವೃತ್ತಪತ್ರಿಕೆಗಳು ಇಡಬೇಕಾಗಿದ್ದ ಸುರಕ್ಷತಾ ಠೇವಣಿಯ ಮೊತ್ತವನ್ನು ೫೦೦ ರೂ.ಗಳಿಂದ ೨೦೦೦ ರೂ.ಗಳಿಗೆ ಹೆಚ್ಚಿಸಲಾಯಿತು. ದೇಶದ್ರೋಹ ಮತ್ತು ಇತರ ಅಪರಾಧಗಳನ್ನು ಎಸಗಿದಲ್ಲಿ, ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆ ಪತ್ರಿಕೆಗಳ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸಲು ಅವಕಾಶವಿತ್ತು. "ಹಿಂದೂ" ಪತ್ರಿಕೆ ಮತ್ತು ಡಾ. ಬೆಸೆಂಟ್ ಹೊಸದಾಗಿ ಆರಂಭಿಸಿದ್ದ "ನ್ಯೂ ಇಂಡಿಯಾ" ಈ ಎರಡೂ ಪತ್ರಿಕೆಗಳ ಸುರಕ್ಷತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

ಕೆಲವು ವರ್ಷಗಳ ಕಾಲ, ಕಾಂಗ್ರೆಸ್‌ನ ತೀವ್ರ ಸುಧಾರಣಾವಾದಿಗಳ ಬಾಯಿ ಮುಚ್ಚಿಸಲಾಗಿತ್ತು. ತಿಲಕರನ್ನು ಮಾಂಡಲೆ ಸೆರೆಮನೆಯಲ್ಲಿ ಬಂಧಿಸಲಾಗಿತ್ತು. ಅರವಿಂದ ಘೋಷ್, ವಿಚಾರಣಾ ಕ್ರಮಗಳಿಂದ ಪಾರಾಗಿ ಪಾಂಡಿಚೆರಿಗೆ ಹೊರಟುಹೋದರು. ಅವರು ಅಲ್ಲಿ ಆಧ್ಯಾತ್ಮಿಕ ಜೀವನವಾಹಿನಿಯಲ್ಲಿ ತೊಡಗಿ, ಅದರಲ್ಲೇ ತಲ್ಲೀನರಾದರು. ಸೂರತ್‌ನಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಬಳಿಕ ಲಾಲಾ ಲಜಪತ್‌ರಾಯ್ ರಾಜಕೀಯ ಚಟುವಟಿಕೆಗಳಿಂದ ದೂರವಾದರು. ಅನಂತರ ಅವರು ಇಂಗ್ಲೆಂಡ್‌ಗೆ ಮತ್ತು ಅಮೆರಿಕಾಗೆ ಹೊರಟುಹೋದರು. ಆದರೆ ಈ ಶಾಂತ ಪರಿಸ್ಥಿತಿ ಬಹುಕಾಲ ಮುಂದುವರಿಯಲಿಲ್ಲ. ೧೯೧೪ರ ಬಳಿಕ, ಒಂದಾದ ಮೇಲೊಂದು ಘಟನೆ ನಡೆಯಲಾರಂಭಿಸಿತು. ಮಾಂಡಲೆ ಸೆರೆಮನೆಯಿಂದ ತಿಲಕರನ್ನು ಬಿಡುಗಡೆ ಮಾಡಲಾಯಿತು. ಡಾ. ಬೆಸೆಂಟ್, ತೀವ್ರ ಪ್ರಚಾರಾನಂತರ, "ಇಂಡಿಯನ್ ಹೋಮ್‌ರೂಲ್ ಲೀಗ್" ಅನ್ನು ಆರಂಭಿಸಿದರು. ಅನತಿ ಸಮಯದಲ್ಲೇ ಮೊದಲ ಮಹಾಯುದ್ಧ ಆರಂಭವಾಯಿತು. ಮಹಾತ್ಮ ಗಾಂಧಿ ಭಾರತಕ್ಕೆ ಹಿಂದಿರುಗಿದರು. ೧೯೧೫ರಲ್ಲಿ ಗೋಖಲೆಯವರ ನಿಧನದಿಂದಾಗಿ ಭಾರತದ

ಉದಾರವಾದಿ ಪಂಥದವರಿಗೆ ತುಂಬಲಾಗದ ನಷ್ಟವುಂಟಾಯಿತು.

ಲಾರ್ಡ್ ಮಿಂಟೊ ನಂತರ, ಲಾರ್ಡ್ ಹಾರ್ಡಿಂಜ್ (೧೯೧೦–೧೯೧೬) ಅಧಿಕಾರಕ್ಕೆ ಬಂದರು. ಮಾರ್ಕಿಸ್ ಆಫ್‌ಕ್ರೀವ್ (Marqries of Crewe) ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದರು. ಬಂಗಾಳದ ವಿಭಜನೆಯಿಂದ ಭಾರತೀಯರಲ್ಲಿ ಉಂಟಾಗಿದ್ದ ಆಕ್ರೋಶವನ್ನು ಹೋಗಲಾಡಿಸಿ, ಅವರನ್ನು ಸಾಂತ್ವನಗೊಳಿಸಲು ಅವರಿಬ್ಬರೂ ಸೇರಿ ಕೆಲವು ಕ್ರಮಗಳನ್ನು ಕೈಗೊಂಡರು. ೧೯೧೧ನೇ ಇಸ್ವಿಯಲ್ಲಿ ದೆಹಲಿಯಲ್ಲಿನ ದರ್ಬಾರ್‌ನಲ್ಲಿ ಐದನೆಯ ಜಾರ್ಜ್ ಅವರ ಕಿರೀಟಧಾರಣ ಮಹೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಇಂಗ್ಲೆಂಡಿನ ದೊರೆ ಮತ್ತು ರಾಣಿ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್ ಹಾಜರಿದ್ದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಕೆಲವು ಮುಖ್ಯ ವಿಷಯಗಳನ್ನು ಪ್ರಕಟಪಡಿಸಲಾಯಿತು. ಬಂಗಾಳದ ವಿಭಜನೆಯನ್ನು ರದ್ದುಗೊಳಿಸಲಾಗಿದೆಯೆಂದು ಪ್ರಕಟಿಸಲಾಯಿತು. ಬಂಗಾಳವು ಒಂದು ಪ್ರಾಂತ್ಯವಾಯಿತು. ಬಿಹಾರ್, ಒರಿಸ್ಸಾ ಮತ್ತು ಅಸ್ಸಾಮ್ ಪ್ರತ್ಯೇಕ ಪ್ರಾಂತ್ಯಗಳಾದವು. ಭಾರತದ ರಾಜಧಾನಿಯನ್ನು ಕಲ್ಕತ್ತಾದಿಂದ ದೆಹಲಿಗೆ ಬದಲಾಯಿಸಲಾಗುವುದೆಂದು ಸಹ ಪ್ರಕಟಿಸಲಾಯಿತು.

೧೯೧೩ ರಲ್ಲಿ, ಲಾರ್ಡ್ ಹಾರ್ಡಿಂಜ್, ದಕ್ಷಿಣ ಆಫ್ರಿಕಾದಲ್ಲಿದ್ದ ಭಾರತೀಯರ ಪರಿಸ್ಥಿತಿ ಬಗ್ಗೆ ತಮ್ಮ ಸಹಾನುಭೂತಿಯನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು. ಆಗ ಏಷಿಯಾಟಿಕ್ ಕಾಯ್ದೆಯ ವಿರುದ್ಧ ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ದೊಡ್ಡ ಸತ್ಯಾಗ್ರಹ ನಡೆಯುತ್ತಿತ್ತು. ೧೯೧೪ರಲ್ಲಿ ಮಹಾಯುದ್ಧ ಘೋಷಿತವಾದಾಗ, ಭಾರತವು ಬ್ರಿಟನ್ನಿನ ಪರವಾಗಿತ್ತು. ಇದಕ್ಕೆ ಕಾರಣ, ಬ್ರಿಟನ್ ಭಾರತದತ್ತ ಮೈತ್ರಿ ಬೆಳೆಸಿಕೊಳ್ಳುವ ಪ್ರಯತ್ನ ನಡೆಸುತ್ತಿತ್ತು. ಆದರೆ ದುರದೃಷ್ಟದಿಂದ, ಬ್ರಿಟನ್, ಬೆಲ್ಜಿಯಂ ಮತ್ತು ಇತರ ಸಣ್ಣ ದೇಶಗಳ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ ಯುದ್ಧಾನಂತರ ಭಾರತದ ಸ್ವಾತಂತ್ರ್ಯಕ್ಕೂ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುವುದೆಂಬ ಯಾವ ಆಶ್ವಾಸನೆಯನ್ನೂ ಅದು ಭಾರತದ ಜನರಿಗೆ ನೀಡಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದೆಂಬ ಒಂದು ಘೋಷಣೆಯನ್ನು ಹೊರಡಿಸುವಂತೆ ಬ್ರಿಟಿಷರನ್ನು ಒತ್ತಾಯಿಸಲು ತೀವ್ರ ರಾಜಕೀಯ ಚಳವಳಿಯೊಂದು ನಡೆಯಿತು.

ಈ ಚಳವಳಿಗೆ ಶ್ರೀಮತಿ ಬೆಸೆಂಟ್ ಅತಿ ಮುಖ್ಯ ನಾಯಕರಾಗಿದ್ದರು. ರಾಷ್ಟ್ರೀಯವಾದಿಗಳ ಎರಡು ಗುಂಪುಗಳನ್ನು ಒಗ್ಗೂಡಿಸುವುದು ಅವರ ಅಪೇಕ್ಷೆಯಾಗಿತ್ತು. ಉದಾರವಾದಿಗಳ ನೇತೃತ್ವದಲ್ಲಿನ ರಾಷ್ಟ್ರೀಯವಾದಿಗಳದು ಒಂದು ಗುಂಪಾಗಿದ್ದರೆ, ಮತ್ತೊಂದು ತಿಲಕರ ಗುಂಪಾಗಿತ್ತು. ೧೯೧೪ರಲ್ಲಿ ಶ್ರೀಮತಿ ಬೆಸೆಂಟ್ ಇಂಗ್ಲಿಷ್ ಸಾಪ್ತಾಹಿಕವೊಂದನ್ನು ಆರಂಭಿಸಿದರು. ನಂತರ ಅತಿ ಶೀಘ್ರದಲ್ಲೇ ಅವರು "ಸ್ಟ್ಯಾಂಡರ್ಡ್" ಎಂಬ ದಿನಪತ್ರಿಕೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು,

ಅದಕ್ಕೆ "ನ್ಯೂ ಇಂಡಿಯಾ" ಎಂದು ಪುನರ್ನಾಮಕರಣ ಮಾಡಿದರು. ಈ ಪತ್ರಿಕೆಯಲ್ಲಿ ಅವರು "ಹೊಮ್‌ರೂಲ್"ನ ಮಹತ್ವವನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿದರು. ಇದು ಸಾರ್ವಜನಿಕಾಭಿಪ್ರಾಯದ ಮೇಲೆ ಮಹತ್ತರ ಪರಿಣಾಮ ಬೀರಿತು. ಯುದ್ಧದ ತಾಜಾ ಸುದ್ದಿಯನ್ನು ನೀಡಲು ಪ್ರತಿದಿನ ಈ ಪತ್ರಿಕೆಯ ಎರಡು ಮೂರು ಸಂಚಿಕೆಗಳನ್ನು ಪ್ರಕಟಿಸಲಾಗುತ್ತಿತ್ತು. ಇವೆಲ್ಲವೂ ನನಗೆ ಚೆನ್ನಾಗಿ ನೆನಪಿದೆ. ನಾನು ವಿಕ್ಟೋರಿಯಾ ಹಾಸ್ಟೆಲ್‌ನಲ್ಲಿದ್ದೆ. "ನ್ಯೂ ಇಂಡಿಯಾ" ಪತ್ರಿಕೆಯ ಪ್ರತಿಯೊಂದು ಸಂಚಿಕೆಯನ್ನು ನಾವೆಲ್ಲರೂ ಬಹಳ ತವಕದಿಂದ ಓದುತ್ತಿದ್ದೆವು.

ಇದಕ್ಕೆ ಕೆಲವು ವರ್ಷಗಳಿಗೆ ಮುಂಚೆ ಇಂಡಿಯನ್ ಮುಸ್ಲಿಮ್ ಲೀಗ್ ಪ್ರಾರಂಭವಾಗಿತ್ತು. ಅದರ ನೇತೃತ್ವವನ್ನು ಮೊಹಮ್ಮದ್ ಅಲಿ ಜಿನ್ನಾ ವಹಿಸಿದ್ದರು. ಆ ದಿನಗಳಲ್ಲಿ ಜಿನ್ನಾ ಉತ್ಸಾಹಭರಿತ ರಾಷ್ಟ್ರೀಯವಾದಿಯಾಗಿದ್ದರು. ಅವರು ಮುಸ್ಲಿಮ್‌ಲೀಗ್ ಅನ್ನು ಕಾಂಗ್ರೆಸ್‌ನ ಸನಿಹಕ್ಕೆ ತರಬಯಸಿದರು. ಇದರಿಂದ, ಭಾರತದ ಸ್ವಾಯತ್ತ ಸರ್ಕಾರಕ್ಕಾಗಿ ಈ ಎರಡು ಸಂಸ್ಥೆಗಳೂ ಕೂಡಿ ಪ್ರಯತ್ನ ನಡೆಸಬಹುದೆಂದು ಅವರು ಭಾವಿಸಿದ್ದರು.

೧೯೧೫ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ನಾಯಕರ ಒಂದು ಗುಪ್ತ ಸಮ್ಮೇಳನ ಬಾಂಬೆಯಲ್ಲಿ ನಡೆಯಿತು. ಕಾಂಗ್ರೆಸ್ ಅಧಿವೇಶನಕ್ಕೆ ಮುಂಚೆ ನಡೆದ ಈ ಸಮ್ಮೇಳನವನ್ನು ಶ್ರೀಮತಿ ಬೆಸೆಂಟ್ ಕರೆದಿದ್ದರು. ಅದೇ ಸಮಯದಲ್ಲಿ ಮುಸ್ಲಿಮ್‌ಲೀಗ್‌ನ ಒಂದು ಅಧೀವೇಶನವನ್ನು ಸಹ ಕರೆಯಲಾಗಿತ್ತು. ಈ ಎರಡು ಸಂಸ್ಥೆಗಳು ಒಟ್ಟಿಗೆ ಸೇರಿರುವುದರಿಂದ, ಇದು ಅಪಾಯದ ಮುನ್ಸೂಚನೆಯಾಗಿರಬಹುದೆಂದು ಅಧಿಕಾರಿಗಳು ಭಾವಿಸಿದರು. ಕೆಲವು ಮಂದಿ ಮುಸ್ಲಿಮ್ ರೌಡಿಗಳು, ಬಾಂಬೆಯ ಪೊಲೀಸ್ ಕಮಿಷನರ ಸಹಾಯದಿಂದ ಮುಸ್ಲಿಮ್‌ಲೀಗ್ ಅಧಿವೇಶನವನ್ನು ಭಗ್ನಗೊಳಿಸಿದರು. ಶ್ರೀಮತಿ ಬೆಸೆಂಟ್ ೧೯೧೬ರ ಆರಂಭದಲ್ಲೇ ದೇಶಾದ್ಯಂತ ಸಂಚರಿಸಿ, ಭಾರತಕ್ಕಾಗಿ "ಹೋಮ್‌ರೂಲ್"ನ ವಿಚಾರವನ್ನು ಜನಪ್ರಿಯಗೊಳಿಸಿದರು. ೧೯೧೬ರ ಆಗಸ್ಟ್ ೧ರಂದು ಅವರು, ಆಲ್ ಇಂಡಿಯಾ ಹೋಮ್‌ರೂಲ್ ಲೀಗ್ ಆರಂಭಿಸಿದರು. ಅದೇ ಸಮಯದಲ್ಲಿ ತಿಲಕರು ಸಹ 'ಇಂಡಿಯನ್ ಹೋಮ್ ರೂಲ್ ಲೀಗ್' ಪ್ರಾರಂಭಿಸಿದರು.

೧೯೧೬ರ ನವೆಂಬರ್‌ನಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ನ ಮುಖಂಡರುಗಳು ಸಭೆ ಸೇರಿ, ಒಂದು ಒಪ್ಪಂದಕ್ಕೆ ಬಂದರು. ಇದನ್ನು 'ಲಖನೌ' ಒಪ್ಪಂದವೆಂದು ಕರೆಯಲಾಯಿತು. ಈ ಒಪ್ಪಂದದ ಪ್ರಕಾರ, ದೇಶದ ಸ್ವಾತಂತ್ರ್ಯ ಸಾಧನೆಗಾಗಿ, ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸ್– ಎರಡೂ ಜೊತೆಯಾಗಿ ಶ್ರಮಿಸಬೇಕೆಂದು ಒಪ್ಪಿಕೊಳ್ಳಲಾಯಿತು. ಈ ಜಂಟಿ ಪ್ರಯತ್ನಗಳಿಗೆ ಪ್ರತಿಯಾಗಿ, ಕಾಂಗ್ರೆಸ್, ಮುಸ್ಲಿಮರಿಗಾಗಿಯೇ ಪ್ರತ್ಯೇಕ ಮತದಾರ ವರ್ಗ ಅಥವಾ ನಿರ್ವಾಚನ

ವರ್ಗವಿರಲು ಒಪ್ಪಬೇಕೆಂದು ಸೂಚಿಸಲಾಗಿತ್ತು. ಈ ಎರಡೂ ಸಂಸ್ಥೆಗಳ ವಾರ್ಷಿಕ ಅಧಿವೇಶನಗಳಲ್ಲಿ ಈ ಒಪ್ಪಂದಕ್ಕೆ ಅನುಮೋದನೆ ದೊರೆಯಿತು. ಭಾರತ ಮತ್ತು ಇಂಗ್ಲೆಂಡ್ ಎರಡರಲ್ಲೂ ಈ ಒಪ್ಪಂದ ಸಾರ್ವಜನಿಕಾಭಿಪ್ರಾಯದ ಮೇಲೆ ಗಾಢ ಪ್ರಭಾವ ಬೀರಿತು.

* * * *

೯. ಸಾಂವಿಧಾನಿಕ ಚಳವಳಿಯ ಕೊನೆ ಹಂತ

ಯೂರೋಪ್‌ನಲ್ಲಿ ನಡೆಯುತ್ತಿದ್ದ ಯುದ್ಧ ಒಂದು ಸಂದಿಗ್ಧ ಹಂತಕ್ಕೆ ಬಂದಿತ್ತು. ಅಮೆರಿಕಾ ತನ್ನ ಮಿತ್ರದೇಶಗಳ ಪರವಹಿಸಿ, ಯುದ್ಧರಂಗವನ್ನು ಪ್ರವೇಶಿಸಿತ್ತು. ಯಾವ ಶಾಂತಿ ಒಪ್ಪಂದವಾಗಲಿ, ಸ್ವಯಂ ನಿರ್ಣಯಾಧಿಕಾರ ತತ್ವದ ಮೇಲೆ ಆಧಾರಿತವಾಗಿರಬೇಕೆಂದು ಅಧ್ಯಕ್ಷ ವಿಲ್ಸನ್ ಘೋಷಿಸಿದರು. ಭಾರತ ಇದೇ ಅವಕಾಶವನ್ನು ಕೂಡಲೇ ಉಪಯೋಗಿಸಿಕೊಂಡಿತು. ಭಾರತಕ್ಕೆ ಸ್ವಯಂ ನಿರ್ಣಯಾಧಿಕಾರ ದೊರೆಯಬೇಕೆಂದು ಅದು ಒತ್ತಾಯಪಡಿಸಿತು. ಲಾರ್ಡ್ ಹಾರ್ಡಿಂಜ್ ಅವರ ತರುವಾಯ ಲಾರ್ಡ್ ಚೆಲ್ಮ್‌ಸ್‌ಫೋರ್ಡ್ (೧೯೧೬–೧೯೨೧) ಅಧಿಕಾರಕ್ಕೆ ಬಂದರು. ಎಡ್ವಿನ್ ಮಾಂಟೆಗ್ಯೂ ಸೆಕ್ರೆಟರಿ ಆಫ್ ಸ್ಟೇಟ್ ಆದರು. ೧೯೧೭ರ ಜೂನ್‌ನಲ್ಲಿ, ಭಾರತದ ರಕ್ಷಣಾ ಕಾಯ್ದೆಯ ಅಡಿಯಲ್ಲಿ ಶ್ರೀಮತಿ ಬೆಸೆಂಟ್ ಸುಸ್ಪಷ್ಟಮಾತುಗಳಲ್ಲಿ ಕರೆ ಕೊಟ್ಟಿದ್ದರು. ಹಿಂಸಾಮಾರ್ಗ ತೊರೆದು ಸಾಂವಿಧಾನಿಕ ವಿಧಾನಗಳಲ್ಲೇ ಚಳವಳಿಗಳನ್ನು ನಡೆಸಬೇಕೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಶ್ರೀಮತಿ ಬೆಸೆಂಟ್ ಮತ್ತು ಅವರ ಸಹಕಾರ್ಯಕರ್ತರನ್ನು ಬಂಧಿಸಲಾಯಿತು. ಅವರುಗಳನ್ನು ಊಟಿಯಲ್ಲಿ ಬಂಧಿಸಿಡಲಾಗಿತ್ತು. ಹಿಂಸಾಮಾರ್ಗವನ್ನು ತ್ಯಜಿಸುವಂತೆ ಶ್ರೀಮತಿ ಬೆಸೆಂಟ್ ಅವರ ಬಂಧನವು ದೇಶಾದ್ಯಂತ ಚಳವಳಿಗೆ ಎಡೆ ಮಾಡಿಕೊಟ್ಟಿತ್ತು. ಅವರ ಬಂಧನವನ್ನು ವಿರೋಧಿಸಿ, ಎಲ್ಲೆಲ್ಲೂ ಚಳವಳಿ ಆರಂಭವಾಯಿತು. ಕಡೆಗೆ ಮದ್ರಾಸ್ ಸರ್ಕಾರ, ಎರಡು–ಮೂರು ತಿಂಗಳ ಬಳಿಕ ಶ್ರೀಮತಿ ಬೆಸೆಂಟ್ ಅವರನ್ನು ಬಂಧನದಿಂದ ಬಿಡುಗಡೆ ಮಾಡಬೇಕಾಯಿತು. ಬಂಧನದಿಂದ ಬಿಡುಗಡೆಯಾದ ನಂತರ ಮದ್ರಾಸ್‌ನಲ್ಲಿ ಬೆಸೆಂಟ್ ಮತ್ತು ಕಾರ್ಯಕರ್ತರಿಗೆ ಭವ್ಯ ಸ್ವಾಗತ ನೀಡಲಾಯಿತು. ಅವರಿಗೆ ನೀಡಲಾದ ಸಂಭ್ರಮದ ಸ್ವಾಗತ ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದೇ ಉಳಿದಿದೆ. ಅಡ್ಯಾರ್‌ವರೆಗೆ ಅವರುಗಳನ್ನು ಮೆರವಣಿಗೆಯಲ್ಲಿ ಕರೆದೊಯ್ದಾಗ, ಅದರಲ್ಲಿ ಸಹಸ್ರಾರು ಜನರು ಪಾಲ್ಗೊಂಡಿದ್ದರು.

ಭಾರತದ ಜನರಲ್ಲಿ ಉಂಟಾಗಿದ್ದ ಉದ್ರಿಕ್ತ ಭಾವನೆಯನ್ನು ಶಮನಗೊಳಿಸಲು ಏನನ್ನಾದರೂ ಮಾಡಬೇಕಾದ ಅಗತ್ಯವನ್ನು ಬ್ರಿಟಿಷ್ ಸರ್ಕಾರ ಮನಗಂಡಿತು. ೧೯೧೭ರ ಆಗಸ್ಟ್ ೨೦ ರಂದು, ಮಾಂಟೆಗ್ಯೂ ಒಂದು ಪ್ರಸಿದ್ಧ ಘೋಷಣೆ

ಮಾಡಿದರು. ಕಾಮನ್ಸ್ ಸಭೆಯಲ್ಲಿ ಮಾಡಿದ ಈ ಘೋಷಣೆಯಲ್ಲಿ, ಅವರು ಭಾರತದಲ್ಲಿನ ಬ್ರಿಟಿಷ್ ಸಕಾರದ ನೀತಿಯನ್ನು ವಿವರಿಸಿದರು. "ಆಡಳಿತ ವ್ಯವಸ್ಥೆಯ ಪ್ರತಿ ವಿಭಾಗದಲ್ಲೂ, ಭಾರತೀಯರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುವುದು. ಬ್ರಿಟಿಷ್ ಸಾಮ್ರಾಜ್ಯದ ಒಂದು ಸಮಗ್ರ ಭಾಗವಾಗಿ, ಭಾರತದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಕ್ರಮೇಣ ಅನುವು ಮಾಡಿಕೊಡಲಾಗುವುದು. ಈ ಅಂತಿಮ ಧ್ಯೇಯವನ್ನು ಸಾಧಿಸಲು, ಭಾರತದಲ್ಲಿ ಸ್ವಯಮಾಡಳಿತ ಸಂಸ್ಥೆಗಳನ್ನು ಕ್ರಮೇಣ ಅಭಿವೃದ್ಧಿಪಡಿಸಲಾಗುವುದು" ಎಂದು ಮಾಂಟೆಗ್ಯೂ ಸಾರಿದರು. ೧೯೧೭ರ ಡಿಸೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಬೆಸೆಂಟ್ ಅವರನ್ನು ಆರಿಸಲಾಯಿತು. ಈ ಅಧಿವೇಶನದಲ್ಲಿ 'ಹೋಮ್‌ರೂಲ್ ಅನ್ನು ಕಾಂಗ್ರೆಸ್ ಸಂಸ್ಥೆಯ ಭೂಮಿಕೆಯ ಅಂಶಗಳಲ್ಲಿ ಒಂದನ್ನಾಗಿ ಅಂಗೀಕರಿಸಲಾಯಿತು. ತಿಲಕರು ಮತ್ತು ಅವರ ಗುಂಪಿನ ಸದಸ್ಯರು ಪುನಃ ಕಾಂಗ್ರೆಸ್ ಸೇರಿಕೊಂಡರು. ಉದಾರವಾದಿಗಳು ಸಂಸ್ಥೆಯಿಂದ ಕಣ್ಮರೆಯಾಗತೊಡಗಿದರು. ಭಾರತಕ್ಕಾಗಿ ಇದ್ದ ಸೆಕ್ರೆಟರಿ ಆಫ್ ಸ್ಟೇಟ್ ಮಾಂಟೆಗ್ಯೂ, ಈ ದೇಶಕ್ಕೆ ಆಗಮಿಸಿದ ಕೂಡಲೇ, ಅವರು ಮತ್ತು ಚೆಲ್ಮ್ಸ್ ಫೋರ್ಡ್, ಎಲ್ಲ ಭಾರತೀಯ ನಾಯಕರನ್ನು ಭೇಟಿ ಮಾಡಿದರು. ಅನಂತರ ಅವರು ಬ್ರಿಟಿಷ್ ಪಾರ್ಲಿಮೆಂಟಿಗೆ ಒಂದು ವರದಿ ಸಲ್ಲಿಸಿ, ಭಾರತದಲ್ಲಿ ಸಾಂವಿಧಾನಿಕ ಸುಧಾರಣೆಗಳಾಗಬೇಕೆಂದು ಶಿಫಾರಸು ಮಾಡಿದರು. ಇದೇ ಮೊದಲ ಬಾರಿಗೆ ಈ ಶಿಫಾರಸುಗಳು ಭಾರತದಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಗಬೇಕೆಂಬ ಅಂಶವನ್ನೊಳಗೊಂಡಿದ್ದವು. ಜವಾಬ್ದಾರಿ ಸರ್ಕಾರದತ್ತ ಮೊದಲ ಕ್ರಮವನ್ನು ಪ್ರಾಂತ್ಯಗಳ ಮಟ್ಟದಲ್ಲಿ ಆರಂಭಿಸಬೇಕು. ಕೇಂದ್ರ ಸರ್ಕಾರವು, ಸರ್ವಾಧಿಕಾರದೊಂದಿಗೆ ಮುಂದುವರಿಯಬೇಕು. ಕೇಂದ್ರ ಸರ್ಕಾರ ಆ ರೀತಿ ಮುಂದುವರಿದರೂ, ಕೇಂದ್ರ ಶಾಸಕಾಂಗದ ಸದಸ್ಯರನ್ನು ಹೆಚ್ಚಿಸಬೇಕು. ಅದರ ಸದಸ್ಯರು ನೇರವಾಗಿ ಚುನಾಯಿತರಾಗಬೇಕು. ಶಾಸನ, ಆಯ–ವ್ಯಯ ಮತ್ತು ಧೋರಣೆಗಳ ಚರ್ಚೆ ಈ ವಿಷಯಗಳಲ್ಲಿ ಶಾಸಕಾಂಗಕ್ಕೆ ಗಣನೀಯ ಅಧಿಕಾರಗಳಿರಬೇಕು. ಪ್ರಾಂತ್ಯಗಳ ಸರ್ಕಾರದಲ್ಲಿ ವಿಷಯಗಳನ್ನು ಎರಡು ಪಟ್ಟಿಗಳಲ್ಲಿ ವಿಭಾಗಿಸಬೇಕು. ಒಂದು ಪಟ್ಟಿಯು ಸಾಮಾನ್ಯ ಆಡಳಿತ, ಪೊಲೀಸ್ ಮತ್ತು ನ್ಯಾಯಾಂಗದಂತಹ ಮೀಸಲಿಟ್ಟ ವಿಷಯಗಳನ್ನೊಳಗೊಂಡಿರಬೇಕು, ಮತ್ತೊಂದು ಪಟ್ಟಿಯು ಶಿಕ್ಷಣ, ಆರೋಗ್ಯ ಮತ್ತು ಸ್ಥಾನಿಕ ಸರ್ಕಾರದಂತಹ ಇತರ ರಾಷ್ಟ್ರನಿರ್ಮಾಣ ವಿಷಯಗಳನ್ನೊಳಗೊಂಡಿರಬೇಕು. ಮೇಲೆ ಸೂಚಿಸಿದಂತಹ ರಾಷ್ಟ್ರನಿರ್ಮಾಣದ ವಿಷಯಗಳನ್ನು ನೋಡಿಕೊಳ್ಳುವ ಮಂತ್ರಿ, ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿಗೆ ಜವಾಬ್ದಾರರಾಗಿರಬೇಕು. ಮೀಸಲು ವಿಷಯಗಳ ಆಡಳಿತ ನಿರ್ವಹಣೆ ಎಕ್ಸಿಕ್ಯುಟಿವ್

ಕೌನ್ಸಿಲರ್‌ಗಳ ಕೈಯ್ಯಲ್ಲಿರುತ್ತದೆ. ಈ ಕೌನ್ಸಿಲರ್‌ಗಳು, ಗವರ್ನರ್‌ಗೆ ಮತ್ತು ಬ್ರಿಟಿಷ್ ಸರ್ಕಾರಕ್ಕೆ ಮಾತ್ರ ಜವಾಬ್ದಾರರಾಗಿರುತ್ತಾರೆ. ಈ ವರದಿಗೆ ಸಮ್ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ೧೯೧೯ರಲ್ಲಿ ಇದನ್ನು ಒಂದು ಕಾಯ್ದೆಯನ್ನಾಗಿ ಮಾಡಿದಾಗ, ಅದು ತೀವ್ರ ವಿವಾದಕ್ಕೊಳಗಾಯಿತು. ಈ ಯೋಜನೆಯನ್ನು ಅಂಗೀಕರಿಸಿ, ಕಾರ್ಯಗತಗೊಳಿಸಬೇಕೇ ಅಥವಾ ಇದನ್ನು ಬಹಿಷ್ಕರಿಸಬೇಕೇ ಎಂಬ ಜಟಿಲ ಪ್ರಶ್ನೆ ಉದ್ಭವಿಸಿತು. ಈ ಕಾಯ್ದೆಯನ್ನು ಒಪ್ಪಿಕೊಳ್ಳಬೇಕೆಂಬುದು ಶ್ರೀಮತಿ ಬೆಸೆಂಟ್ ಅವರ ಪ್ರಬಲ ಅಭಿಪ್ರಾಯವಾಗಿತ್ತು. ಈ ಕಾಯ್ದೆಯನ್ನು ಒಪ್ಪಿಕೊಂಡು ಸಹಕರಿಸಬೇಕೆಂಬುದು ತಿಲಕರ ಅಭಿಪ್ರಾಯವಾಗಿತ್ತು. ಈ ಸುಧಾರಣೆಗಳು ಸಾಲದಾಗಿದ್ದು, ಅವು ಅಸಮರ್ಪಕ ಹಾಗೂ ನಿರಾಶಾದಾಯಕವೆಂದು ಕಾಂಗ್ರೆಸ್ ಘೋಷಿಸಬೇಕೆಂಬ ತೀವ್ರ ಇಚ್ಛೆಯನ್ನು ಅವರು ವ್ಯಕ್ತಪಡಿಸಿದರು. ಮಾಂಟ್‌ಫೋರ್ಡ್ ಸುಧಾರಣೆಗಳು ಪ್ರಗತಿಯ ನಿಟ್ಟಿನಲ್ಲಿ ಒಂದು ಉತ್ತಮ ಪ್ರಾರಂಭವಾಗಬಹುದಾದ ಅವಕಾಶಗಳಿದ್ದವು. ಆದರೆ ಎರಡು ಅಹಿತಕರ ಬೆಳವಣಿಗೆಗಳಿಂದಾಗಿ ಇಂತಹ ಪ್ರಗತಿಗೆ ಅಡಚಣೆಯುಂಟಾಗಿದ್ದು ದುರದೃಷ್ಟ.

ಯುದ್ಧದ ಸಮಯದಲ್ಲಿ ದೇಶವು ಭಾರತದ ರಕ್ಷಣಾ ಕಾಯ್ದೆಯ ಅಡಿಯಲ್ಲಿತ್ತು. ಭಯೋತ್ಪಾದಕರು, ರಾಜಕೀಯ ತೀವ್ರಗಾಮಿಗಳು ಮತ್ತು ತೀವ್ರಗಾಮಿ ಪತ್ರಿಕೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಈ ಕಾಯ್ದೆ ಸರ್ಕಾರಕ್ಕೆ ಅಧಿಕಾರ ನೀಡಿತ್ತು. ಯುದ್ಧ ಅಂತ್ಯಗೊಂಡ ಆರು ತಿಂಗಳಲ್ಲಿ ಭಾರತ ರಕ್ಷಣಾ ಕಾಯ್ದೆಯ ಅಸ್ತಿತ್ವದ ಅವಧಿ ಪೂರ್ಣಗೊಳ್ಳುತ್ತದೆ. ಆಗ, ಕಾನೂನುಭಂಗಗೊಳಿಸುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲು ತಮಗೆ ಸಾಧ್ಯವಾಗಲಾರದೆಂದು ಭಾರತದಲ್ಲಿನ ಅಧಿಕಾರಿಗಳು ಭಾವಿಸಿದ್ದರು. ಆದ್ದರಿಂದ ೧೯೧೭ರಲ್ಲಿ ಭಾರತ ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಿತು. ನ್ಯಾಯಾಧೀಶ ರೌಲಟ್, ಸಮಿತಿಯ ಅಧ್ಯಕ್ಷರಾಗಿದ್ದರು. ಇಬ್ಬರು ಬ್ರಿಟಿಷ್ ಅಧಿಕಾರಿಗಳು ಮತ್ತು ಇಬ್ಬರು ಭಾರತೀಯರು ಸಮಿತಿಯ ಸದಸ್ಯರಾಗಿದ್ದರು. ಕ್ರಾಂತಿಕಾರಿ ಚಳವಳಿಗೆ ಸಂಬಂಧಿಸಿದಂತೆ ಅಪರಾಧ ಕೃತ್ಯಗಳನ್ನೆಸಗಲು ನಡೆಯುತ್ತಿದ್ದ ಒಳಸಂಚುಗಳನ್ನು ಪತ್ತೆಹಚ್ಚಿ, ಅದರ ಸ್ವರೂಪದ ಬಗ್ಗೆ ತನಿಖೆ ನಡೆಸಿ, ವರದಿ ಸಲ್ಲಿಸುವುದು, ಇಂತಹ ಪಿತೂರಿ ಬಗ್ಗೆ ಕ್ರಮಗಳನ್ನು ಕೈಗೊಳ್ಳುವಲ್ಲಿ ಇರುವ ತೊಂದರೆಗಳನ್ನು ಪರಿಶೀಲಿಸುವುದು ಮತ್ತು ಇಂತಹ ಪಿತೂರಿಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಸರ್ಕಾರಕ್ಕೆ ಸೂಕ್ತ ಸಲಹೆ ನೀಡುವುದು ರೌಲಟ್ ಸಮಿತಿಯ ಉದ್ದೇಶವಾಗಿತ್ತು. ಈ ಸಮಿತಿ ೧೯೧೯ರ ಜನವರಿಯಲ್ಲಿ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ ಸಮಿತಿ ಕೆಲವು ವಿಧಾನಗಳನ್ನು ಸೂಚಿಸಿತ್ತು. ರೌಲಟ್ ಸಮಿತಿಯ ವರದಿಯನ್ನು ಅನುಮೋದಿಸಲಾಯಿತು. ರೌಲಟ್ ಕಾಯ್ದೆಯನ್ನು ಸಹ ಅಂಗೀಕರಿಸಲಾಯಿತು. ವಿಶೇಷ ನ್ಯಾಯಾಲಯವೊಂದರಿಂದ ಭಯೋತ್ಪಾದಕರ

ಕ್ಷಿಪ್ರ ವಿಚಾರಣೆ ನಡೆಸಲು ಈ ಕಾಯ್ದೆ ಅವಕಾಶ ಮಾಡಿಕೊಟ್ಟಿತು. ಈ ವಿಶೇಷ ನ್ಯಾಯಾಲಯ ರಹಸ್ಯವಾಗಿ ಸಮಾವೇಶಗೊಂಡು, ಭಾರತೀಯ ಸಾಕ್ಷ್ಯ ಕಾಯ್ದೆಯ ಅನ್ವಯ ಸಾಕ್ಷ್ಯಪರಿಶೀಲನೆಗೆ ಅವಕಾಶವಿರದಂತಹ ಸಾಕ್ಷ್ಯವನ್ನು ಸಹ ಪರಿಶೀಲಿಸಲು ಅದು ಅವಕಾಶ ನೀಡುತ್ತದೆ. ಈ ವಿಶೇಷ ನ್ಯಾಯಾಲಯ ನೀಡುವ ತೀರ್ಪಿನ ಮೇಲೆ ಯಾರೂ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ. ಭಾರತೀಯ ಶಾಸನ ಸಭೆಯ (Indian Legislative Assembly) ಎಲ್ಲ ಸದಸ್ಯರು ಈ ಮಸೂದೆಯನ್ನು ಉಗ್ರವಾಗಿ ಖಂಡಿಸಿದರು. ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ, ರೌಲಟ್ ಕಾಯಿದೆಯನ್ನು ಪ್ರಬಲವಾಗಿ ವಿರೋಧಿಸಿ ಮಾಡಿದ ಭಾಷಣದಲ್ಲಿ, ತಮ್ಮ ವಾಕ್ಪಟುತ್ವವನ್ನು ಅದ್ಭುತವಾಗಿ ಪ್ರದರ್ಶಿಸಿದರು.

ಈ ಕಾಯಿದೆ ಅಂಗೀಕೃತವಾದಾಗ, ರಾಷ್ಟ್ರೀಯವಾದಿಗಳಿಗೆ ಏನು ಮಾಡಬೇಕು ಎಂಬುದೇ ತೋಚದಂತಾಗಿತ್ತು. ಆಗ ಗಾಂಧೀಜಿ ಇದ್ದಕ್ಕಿದ್ದಂತೆ ರಾಜಕೀಯ ರಂಗದಲ್ಲಿ ಕಾಣಿಸಿಕೊಂಡರು. ಅವರು ಭಾರತಕ್ಕೆ ಹಿಂದಿರುಗಿದಾಗಿನಿಂದಲೂ, ಉದ್ದೇಶಪೂರ್ವಕವಾಗಿ, ರಾಜಕೀಯ ಚಟುವಟಿಕೆಗಳಿಗೆ ಕೈಹಾಕಿರಲಿಲ್ಲ. ಸೈನ್ಯಕ್ಕೆ ಹೊಸಬರನ್ನು ನೇಮಿಸಿಕೊಳ್ಳುವ ವಿಷಯದಲ್ಲಿ ಅವರು ಬ್ರಿಟಿಷ್ ಸರ್ಕಾರದೊಡನೆ ಸಹಕರಿಸಿದ್ದರು. ಅವರು ನೇರವಾಗಿ ರಾಜಕೀಯಕ್ಕೆ ಸಂಬಂಧಪಟ್ಟಿರದ ಇತರ ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಕ್ರಮೇಣ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಈ ಚಟುವಟಿಕೆಗಳು ನೇರವಾಗಿ ರಾಜಕೀಯ ಸ್ವರೂಪದ್ದಾಗಿರಲಿಲ್ಲವಾದರೂ, ಅವು ಜನರನ್ನು ಜಾಗೃತಗೊಳಿಸುವಂತಹ ಚಟುವಟಿಕೆಗಳಾಗಿರುತ್ತಿದ್ದವು. ಬನಾರಸ್‌ನಲ್ಲಿ ನಡೆದ ಹಿಂದೂ ವಿಶ್ವವಿದ್ಯಾಲಯದ (Benares Hindu University) ಉದ್ಘಾಟನಾ ಸಮಾರಂಭದಲ್ಲಿ ಗಾಂಧೀಜಿ ಭಾಗವಹಿಸಿದ್ದರು. ದೇಶದಲ್ಲಿರುವ ಬಡಜನರಿಗೆ ಉಪಕಾರ ಮಾಡಲು, ಎಲ್ಲ ಭಾರತೀಯ ರಾಜರುಗಳು ತಮ್ಮ ನಗನಾಣ್ಯಗಳನ್ನು ಒಪ್ಪಿಸಿ, ತಮ್ಮ ವೈಭವ ಪ್ರದರ್ಶನಕ್ಕಾಗಿ ಮಾಡುವ ದುಂದುವೆಚ್ಚವನ್ನು ಕಡಿಮೆ ಮಾಡಬೇಕೆಂದು, ಈ ಸಮಾರಂಭದಲ್ಲಿ ತಿಳಿಸಿದ ಗಾಂಧೀಜಿ, ಅಲ್ಲಿ ಸೇರಿದ್ದ ಎಲ್ಲ ಭಾರತೀಯ ರಾಜರುಗಳು ಮತ್ತು ಅಧಿಕಾರಿಗಳನ್ನು ಚಕಿತಗೊಳಿಸಿದರು. ಅನಂತರ, ಗಾಂಧೀಜಿ, ದಬ್ಬಾಳಿಕೆಗೊಳಗಾಗಿದ್ದ ಚಂಪಾರಣ್ ಪ್ರದೇಶದ ರೈತರ ಹಿತಕ್ಕಾಗಿ ಹೋರಾಟವನ್ನಾರಂಭಿಸಿದರು. ತಮ್ಮ ಭೂಮಿಯ ಅತಿ ಹೆಚ್ಚು ಭಾಗದಷ್ಟು ಪ್ರದೇಶದಲ್ಲಿ ನೀಲಿ (Indigo) ಸಾಗುವಳಿ ಮಾಡುವಂತೆ ಈ ರೈತರನ್ನು ಬಲಾತ್ಕರಿಸಲಾಗುತ್ತಿತ್ತು. ಇದಕ್ಕಾಗಿ ಅವರಿಗೆ ದೊರೆಯುತ್ತಿದ್ದ ಪ್ರತಿಫಲ ಅತಿ ಕಡಿಮೆಯಿತ್ತು, ಗಾಂಧಿ ಅವರ ನೇತೃತ್ವದಲ್ಲಿ ನಡೆದ ಚಂಪಾರಣ್ ಚಳವಳಿ, ಅನೇಕ ರೀತಿಯಲ್ಲಿ ವೈಶಿಷ್ಟ್ಯ ಪೂರ್ಣವಾಗಿತ್ತು. ಈ ಚಳವಳಿ ಅಂತ್ಯಗೊಳ್ಳುವ ಹೊತ್ತಿಗೆ, ಗಾಂಧೀಜಿ ಭಾರತದ

ಅತ್ಯಂತ ಶ್ರೇಷ್ಠಮಟ್ಟದ ನಾಯಕನೆಂಬುದು ಜನರಿಗೆ ಮನದಟ್ಟಾಗಿತ್ತು. ಮೊದಲು ಅವರು, ಬೇಸಾಯಗಾರರ ಪರಿಸ್ಥಿತಿಯ ಬಗ್ಗೆ ನಿಖರವಾದ ಮಾಹಿತಿಯನ್ನು ಸಂಗ್ರಹಿಸಲಾರಂಭಿಸಿದರು. ಅವರು ಕೊಟ್ಟ ಕರೆಗನುಗುಣವಾಗಿ ಕೆಲವು ವಕೀಲರುಗಳು ಮತ್ತು ಇತರ ಕಾರ್ಯಕರ್ತರು, ಬೇಸಾಯಗಾರರಿಂದ ಹೇಳಿಕೆಗಳನ್ನು ಪಡೆಯಲು ಮುಂದೆ ಬಂದರು. ಇದರಿಂದ ಪ್ಲಾಂಟರ್‌ಗಳಲ್ಲಿ ಭಯ ಮೂಡಿತು. ಚಂಪಾರಣ್ ಬಿಟ್ಟುಹೋಗುವಂತೆ ತಿಳಿಸುವ ಒಂದು ಆಜ್ಞೆಯನ್ನು ಗಾಂಧಿಯವರಿಗೆ ನೀಡಲಾಯಿತು. ಅವರು ಇದನ್ನು ಸವಿನಯದಿಂದ ತಿರಸ್ಕರಿಸಿದರು. ಅನಂತರ ಬಿಹಾರ್ ಸರ್ಕಾರ ಮತ್ತು ಭಾರತ ಸರ್ಕಾರ ತರಾತುರಿಯಲ್ಲಿ ಸಮಾಲೋಚನೆ ನಡೆಸಿದವು, ಗಾಂಧೀಜಿಯವರಿಗೆ ನೀಡಲಾಗಿದ್ದ ಆಜ್ಞೆಯನ್ನು ರದ್ದುಪಡಿಸಲಾಯಿತು. ಬೇಸಾಯಗಾರರ ಸಮಸ್ಯೆಗಳ ಬಗ್ಗೆ ಸುದೀರ್ಘ ತನಿಖೆ ನಡೆಸಲು, ಸರ್ಕಾರದ ಪರವಾಗಿ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಗಾಂಧಿಯವರನ್ನು ಈ ಸಮಿತಿಯ ಒಬ್ಬರು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು. ಇದು ಗಾಂಧಿ ಅವರ ಒಂದು ವಿಶೇಷ ಗುಣವಾಗಿತ್ತು. ಗಾಂಧಿ, ತಮಗೆ ನೀಡಲಾಗಿದ್ದ ಆಜ್ಞೆಯನ್ನು ತಿರಸ್ಕರಿಸಿದರೂ, ಸಮಿತಿಯ ಸದಸ್ಯರಾಗಿರಲು ಅವರು ಹಿಂಜರಿಯಲಿಲ್ಲ. ಎರಡೂ ಕಡೆಯವರ ಮನಸ್ಸಿನಲ್ಲಿ ಕಹಿ ಭಾವನೆ ಉಳಿಯದಂತಹ ಒಂದು ಉಪಾಯದಿಂದ, ಈ ವಿವಾದವನ್ನು ಬಗೆಹರಿಸುವಂತಹ ಶಿಫಾರಸು ಮಾಡುವಂತೆ, ಅವರು ಸಮಿತಿಯನ್ನು ಪ್ರೇರೇಪಿಸಿದರು. ಸಮಿತಿಯನ್ನು ಆ ರೀತಿ ಪ್ರೇರೇಪಿಸುವ ಪ್ರಯತ್ನದಲ್ಲಿ ಗಾಂಧೀಜಿ ಯಶಸ್ವಿಯಾದರು. ಅನಂತರ ಗಾಂಧೀಜಿ ಬಟ್ಟೆ ಗಿರಣಿಗಳ ಕಾರ್ಮಿಕರರು ಮತ್ತು ಅಹ್ಮದಾಬಾದ್ ಗಿರಣಿಗಳ ಆಡಳಿತ ವ್ಯವಸ್ಥೆ ನಡುವಣ ಒಂದು ವಿವಾದವನ್ನು ಬಗೆಹರಿಸುವ ಪ್ರಯತ್ನದಲ್ಲಿ ನಿರತರಾದರು. ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಮತ್ತು ಹಿಂಸಾಚರಣೆಯಲ್ಲಿ ತೊಡಗಬಾರದೆಂದು ಅವರು ಕಾರ್ಮಿಕರಿಗೆ ಪದೇ ಪದೇ ಹೇಳುತ್ತಿದ್ದರು. ಕಾರ್ಮಿಕರಲ್ಲಿ ಉತ್ಸಾಹ ಕುಗ್ಗತೊಡಗಿದಾಗ, ಅವರು ಉಪವಾಸವನ್ನಾರಂಭಿಸಿದರು. ಇದರಿಂದ ವಿವಾದಕ್ಕೆ ಒಂದು ಸೌಹಾರ್ದಯುತ ಪರಿಹಾರವನ್ನು ಕಂಡುಹಿಡಿಯಲಾಯಿತು. ಪುನಃ ಗಾಂಧೀಜಿ ನಾಯಕತ್ವದಲ್ಲಿ ಮತ್ತು ಮಾರ್ಗದರ್ಶನದಲ್ಲಿ ತೆರಿಗೆ–ಪಾವತಿ ಮಾಡಬಾರದೆಂಬ ಚಳವಳಿ ನಡೆಯಿತು. ಈ ಚಳವಳಿಯ ನಂತರ ಸರ್ದಾರ್ ಪಟೇಲ್, ತಮ್ಮ ಭೂಸುಧಾರಣಾ ನೀತಿಯನ್ನು ಪರಿಷ್ಕರಿಸುವಂತೆ ಬಾಂಬೆ ಸರ್ಕಾರವನ್ನು ಒತ್ತಾಯಪಡಿಸಿದರು. ಕೃಷಿ ಫಸಲು ತೀರ ಕಡಿಮೆಯಾಗಿ, ಸಂಕಷ್ಟಕ್ಕೆ ಸಿಲುಕಿದ್ದ ಬೇಸಾಯಗಾರರಿಗೆ ಸಾಕಷ್ಟು ಪರಿಹಾರವನ್ನೊದಗಿಸಬೇಕೆಂದು ಸಹ ಅವರು ಸರ್ಕಾರದ ಮೇಲೆ ಒತ್ತಾಯ ತಂದರು.

ರೌಲಟ್ ಕಾಯಿದೆಯನ್ನು ವಿರೋಧಿಸಲು ಭಾರತೀಯ ರಾಜಕೀಯ

ಮುಖಂಡರಿಗೆ ಯಾವುದೇ ವಿಧಾನವನ್ನೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲವೆಂಬುದನ್ನು ಗಾಂಧೀಜಿ ಕಂಡುಕೊಂಡರು. ಅದಕ್ಕಾಗಿ ಅವರು ಸತ್ಯಾಗ್ರಹವನ್ನಾರಂಭಿಸಲು ನಿರ್ಧರಿಸಿದರು. ಪರಿಣತರ ಸಮಿತಿಯೊಂದು, ಆರಿಸಿದ ಕಾನೂನುಗಳ ವಿರುದ್ಧ ವೈಯಕ್ತಿಕವಾಗಿ ಅಸಹಕಾರ ತೋರಿಸುವುದಕ್ಕೆ ಈ ಸತ್ಯಾಗ್ರಹ ಸೀಮಿತಗೊಂಡಿತ್ತು. ಪ್ರತಿಯೊಬ್ಬ ಸತ್ಯಾಗ್ರಹಿಯೂ ಸತ್ಯಾಗ್ರಹದ ಪ್ರತಿಜ್ಞಾವಚನ ಸ್ವೀಕರಿಸಬೇಕಾಗುತ್ತಿತ್ತು. ಸತ್ಯವನ್ನು ಬಿಟ್ಟು ಬೇರೇನನ್ನೂ ಹೇಳುವುದಿಲ್ಲವೆಂದು ಮತ್ತು ಅಹಿಂಸೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇನೆಂದು ಆತ ಪ್ರತಿಜ್ಞೆ ಮಾಡಬೇಕಾಗುತ್ತಿತ್ತು. ೧೯೧೯ರ ಏಪ್ರಿಲ್ ೬ ರಂದು ಹರತಾಳವನ್ನಾಚರಿಸಬೇಕೆಂದು ಇಡೀ ದೇಶಕ್ಕೆ ಕರೆ ಕೊಡಲಾಯಿತು. ಈ ರೀತಿಯ ಅಖಿಲ ಭಾರತ ಸಾಮೂಹಿಕ ಕ್ರಮ ಕೈಗೊಂಡಿದ್ದು, ಅದೇ ಮೊದಲ ಬಾರಿಯಾಗಿತ್ತು. ಏಪ್ರಿಲ್ ೮ನೇ ತಾರೀಖು, ಗಾಂಧೀಜಿ ಪಂಜಾಬ್‌ಗೆ ಹೋಗುವುದನ್ನು ತಡೆಯಲಾಯಿತು. ಅಲ್ಲಿ ಇಬ್ಬರು ಗಣ್ಯನಾಯಕರಾದ ಡಾ. ಕಿಚ್ಲು ಮತ್ತು ಸತ್ಯಪಾಲ್ ಅವರನ್ನು ದಸ್ತಗಿರಿ ಮಾಡಲಾಗಿತ್ತು. ಅವರ ಬಂಧನ ಅಮೃತಸರದಲ್ಲಿ ತೀವ್ರ ಆಕ್ರೋಶಕ್ಕೆ ಎಡೆ ಮಾಡಿಕೊಟ್ಟಿತ್ತು. ಅಲ್ಲಿ ಜನರ ಭಾರಿ ಗುಂಪೊಂದು, ಪೊಲೀಸ್ ಡೆಪ್ಯುಟಿ ಕಮಿಷನರ ಮನೆಯತ್ತ ಹೋಯಿತು. ಅಲ್ಲಿದ್ದ ದಂಡಿನ ಪೊಲೀಸರು ಜನರ ಮೇಲೆ ಗುಂಡು ಹಾರಿಸಲಾರಂಭಿಸಿದರು. ಈ ಗೋಲಿಬಾರಿನಲ್ಲಿ ಕೆಲವರು ಮೃತಪಟ್ಟರು. ಅವರ ಮರಣದಿಂದ ಕೋಪೋದ್ರಿಕ್ತರಾದ ಜನರು ಐವರು ಯೂರೋಪಿಯನರನ್ನು ಕೊಂದರು ಮತ್ತು ಎರಡು ಬ್ರಿಟಿಷ್ ಬ್ಯಾಂಕ್‌ಗಳನ್ನು ಲೂಟಿ ಮಾಡಿದರು. ಕೆಲವು ಸರ್ಕಾರಿ ಕಚೇರಿಗಳಿಗೆ ಬೆಂಕಿ ಹಚ್ಚಿದರು. ಏಪ್ರಿಲ್ ೧೩ ರಂದು ಜಲಿಯನ್‌ವಾಲಾ ಬಾಗ್‌ನಲ್ಲಿ ಒಂದು ದೊಡ್ಡ ಸಭೆಯನ್ನು ಕರೆಯಲಾಗಿತ್ತು. ಅದೊಂದು ದೊಡ್ಡ ತೆರೆದ ಬಯಲಾಗಿತ್ತು. ಬಯಲಿನ ಸುತ್ತಲೂ ಮೂರು ಕಡೆ ಕಟ್ಟಡಗಳಿದ್ದವು. ಅಂದು ಬೆಳಗ್ಗೆ ಈ ಬೃಹತ್ ಸಭೆಯನ್ನು ನಿಷೇಧಿಸುವ ಒಂದು ಆಜ್ಞೆಯನ್ನು ಹೊರಡಿಸಲಾಗಿತ್ತು. ಈ ನಿಷೇಧಾಜ್ಞೆ ಬಹಳ ಜನರಿಗೆ ಇನ್ನೂ ಗೊತ್ತಾಗಿರಲಿಲ್ಲ: ಆದ್ದರಿಂದ ಸಹಸ್ರಾರು ಜನರು ಜಲಿಯನ್‌ವಾಲಾಬಾಗ್‌ನಲ್ಲಿ ಸೇರತೊಡಗಿದರು. ಜನರಲ್ ಡೈಯೆರ್ ರೆಜಿಮೆಂಟ್ ಒಂದರೊಡನೆ ಅಲ್ಲಿಗೆ ಬಂದನು. ಅಲ್ಲಿ ಸೇರಿದ್ದ ಜನಸ್ತೋಮಕ್ಕೆ ಆತನು ಯಾವ ಮುನ್ಸೂಚನೆಯನ್ನು ಕೊಡದೆ, ಅವರ ಮೇಲೆ ಗುಂಡುಹಾರಿಸುವಂತೆ, ಸೈನಿಕರಿಗೆ ಆಜ್ಞಾಪಿಸಿದನು. ಬಂದೂಕಿನ ಗುಂಡುಗಳು ಮುಗಿದುಹೋಗುವವರೆಗೂ, ಅವರು ಬಂದೂಕದ ಮೇಲಿದ್ದ ತಮ್ಮ ಕೈ ಸಡಿಲಿಸಲಿಲ್ಲ. ಈ ಸಾಮೂಹಿಕ ಹತ್ಯೆಯಲ್ಲಿ, ೩೭೯ ಜನರು ಸ್ಥಳದಲ್ಲಿ ಮರಣವನ್ನಪ್ಪಿದರು. ಒಂದು ಸಾವಿರಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡರು ಈ ದುರಂತದ ಬಳಿಕ, ಲೆಫ್ಟಿನೆಂಟ್ ಗವರ್ನರ್ ಮೈಕೇಲ್ ಓ–ಡ್ವೈಯರ್ ಸೇರಿದಂತೆ ಪಂಜಾಬ್‌ನಲ್ಲಿದ್ದ ಅಧಿಕಾರಿಗಳು ನಿಜವಾಗಿಯೂ

ತಮ್ಮ ಬುದ್ಧಿಯ ಸ್ತಿಮಿತತೆಯನ್ನು ಕಳೆದುಕೊಂಡರು. ವರ್ಣಿಸಲು ಹೇಯವೆನಿಸುವಂತಹ ಅತ್ಯಾಚಾರಗಳನ್ನು ಮತ್ತು ದೌರ್ಜನ್ಯಗಳನ್ನು ಅವರು ಎಸಗಿದರು. ಜನರನ್ನು ತುಂಬ ಅಪಮಾನಗೊಳಿಸಿ, ಅವರೊಂದಿಗೆ ಅತಿ ಹೀನಾಯವಾಗಿ ನಡೆದುಕೊಂಡರು. ಅವರು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ಅನೇಕ ಗೌರವಾನ್ವಿತ ನಾಯಕರುಗಳನ್ನು ವಿಚಾರಣೆಗೆ ಗುರಿಪಡಿಸಿ, ಅವರು ದೀರ್ಘಾವಧಿ ಸೆರೆವಾಸದ ಶಿಕ್ಷೆಯನ್ನು ಅನುಭವಿಸುವಂತೆ ಮಾಡಿದರು.

ಪಂಜಾಬ್‌ನಲ್ಲಿ ನಡೆದ ಈ ದೌರ್ಜನ್ಯಗಳು ಬೆಳಕಿಗೆ ಬರಲು ಸ್ವಲ್ಪ ಕಾಲ ಹಿಡಿಯಿತು, ಭಾರತೀಯರ ಮೇಲೆ ನಡೆದಿರುವ ಈ ದೌರ್ಜನ್ಯದ ಸುದ್ದಿ ತಿಳಿಯುತ್ತಿದ್ದಂತೆ ಜನರಲ್ಲಿ ಭಯ ಮತ್ತು ಆತಂಕಗಳು ಮೂಡಿದವು. ಇದರಿಂದ ಜನರು ವಿಪರೀತ ಆಕ್ರೋಶಗೊಂಡರು. ಈ ಸಾಮೂಹಿಕ ಹತ್ಯೆಗಳು ಬ್ರಿಟಿಷರನ್ನು ಸಹ ದಿಗ್ಭ್ರಮೆಗೊಳಿಸಿದವು. ಜಲಿಯನ್ ವಾಲಾಬಾಗ್‌ನಲ್ಲಿ ನಡೆದ ಈ ಸಾಮೂಹಿಕ ಹತ್ಯೆಯ ಬಗ್ಗೆ ತನಿಖೆ ನಡೆಸಲು ಲಾರ್ಡ್ ಹಂಟರ್ ಅವರ ನೇತೃತ್ವದಲ್ಲಿ ಒಂದು ತನಿಖಾ ಆಯೋಗವನ್ನು ನೇಮಿಸಲಾಯಿತು. ರೌಲಟ್ ಸತ್ಯಾಗ್ರಹದ ಸಂಬಂಧದಲ್ಲಿ ನಡೆದ ಕೆಲವು ಘಟನೆಗಳು ಸಹ ಈ ಆಯೋಗದ ವಿಚಾರಣಾ ವ್ಯಾಪ್ತಿಗೊಳಪಟ್ಟಿದ್ದವು. ಈ ಆಯೋಗದ ಪರಿಶೀಲನೆಗೆ ಸೂಚಿಸಲಾಗಿದ್ದ ವಿಷಯಗಳ ಬಗ್ಗೆ ಕಾಂಗ್ರೆಸ್‌ಗೆ ಸಮಾಧಾನವಿರಲಿಲ್ಲ. ಈ ಬಗ್ಗೆ ಅದು ತನ್ನ ಅಸಂತೃಪ್ತಿಯನ್ನು ವ್ಯಕ್ತಪಡಿಸಿತು. ಆಯೋಗದ ರಚನೆಯೂ ತೃಪ್ತಿಕರವಾಗಿರಲಿಲ್ಲ. ಆದ್ದರಿಂದ, ಕಾಂಗ್ರೆಸ್ ಪಕ್ಷ ಗಾಂಧೀಜಿ ಮತ್ತು ಚಿತ್ತರಂಜನ್‌ದಾಸ್ ಒಳಗೊಂಡಿದ್ದ ತನ್ನದೇ ಆದ ಒಂದು ಸಮಿತಿಯನ್ನು ರಚಿಸಿತು. ಕಡೆಗೆ ಎರಡೂ ಸಮಿತಿಗಳ ವರದಿಗಳು ಪ್ರಕಟಗೊಂಡವು. ಜಲಿಯನ್‌ವಾಲಾಬಾಗ್ ಹತ್ಯೆಗಳು ಬಹಳ ಭೀಕರವಾದವೆಂದು ಮತ್ತು ಅವು ಸಂಪೂರ್ಣವಾಗಿ ಅಸಮರ್ಥನೀಯವಾದ ದೌರ್ಜನ್ಯಗಳೆಂದು ವರದಿಗಳಲ್ಲಿ ತಿಳಿಸಲಾಗಿತ್ತು. ಅನಂತರ ಜನರಲ್ ಡೈಯರ್‌ನನ್ನು ಅಧಿಕಾರದಿಂದ ತೆಗೆದು ಹಾಕಲಾಯಿತು. ಜನರಲ್ ಡೈಯರ್ ಪದಚ್ಯುತಗೊಂಡ ನಂತರ ಇಂಗ್ಲೆಂಡ್‌ನಲ್ಲಿ ಭಾರಿ ಪ್ರದರ್ಶನಗಳು ನಡೆದವು. ಅವರ ಬೆಂಬಲಕ್ಕಾಗಿ ಅಲ್ಲಿ ನಡೆದ ಈ ಪ್ರದರ್ಶನಗಳು ಭಾರತೀಯರಿಗೆ ತೀವ್ರ ದಿಗ್ಭ್ರಮೆಯನ್ನುಂಟುಮಾಡಿದವು. ಜಲಿಯನ್‌ವಾಲಾಬಾಗ್ ದುರಂತದ ಬಗ್ಗೆ ಅವರಲ್ಲಿ ಉಂಟಾಗಿದ್ದುದಕ್ಕಿಂತಲೂ ಹೆಚ್ಚಿನ ದಿಗ್ಭ್ರಮೆಯನ್ನು ಇವು ಉಂಟು ಮಾಡಿದ್ದವೆಂದರೆ, ಅತಿಶಯವಲ್ಲ. ಈ ದೌರ್ಜನ್ಯಗಳನ್ನೆಸಗುವ ಮೂಲಕ ಅಪರಾಧಿಗಳಾಗಿರುವ ಓಡ್ವೈಯರ್ ಮತ್ತು ಇತರ ಅಧಿಕಾರಿಗಳನ್ನು ಸಹ ಹುದ್ದೆಯಿಂದ ವಜಾ ಮಾಡಬೇಕೆಂದು ಕಾಂಗ್ರೆಸ್‌ನ ವರದಿಯಲ್ಲಿ ಒತ್ತಾಯಪಡಿಸಲಾಗಿತ್ತು.

ಪಂಜಾಬ್‌ಗೆ ಹೋಗುವ ಮಾರ್ಗದಲ್ಲಿದ್ದಾಗ ಗಾಂಧಿಯವರನ್ನು ದಸ್ತಗಿರಿ

ಮಾಡಿದ್ದಕ್ಕಾಗಿ, ಬಾಂಬೆ ಮತ್ತು ಅಹ್ಮದಾಬಾದ್‌ನಲ್ಲಿ ಜನರು ತುಂಬ ಉದ್ರೇಕಗೊಂಡಿದ್ದರು. ಅವರು ಕಾನೂನುಭಂಗ ಚಳವಳಿಯನ್ನು ಹಿಂತೆಗೆದುಕೊಂಡರು. ಅವರು ತಮ್ಮ ಅತಿ ಹೆಚ್ಚಿನ ಸಮಯವನ್ನು ಗಲಭೆಗೀಡಾಗಿದ್ದ ಪ್ರದೇಶಗಳಲ್ಲಿ ಶಾಂತಿಯನ್ನು ಮರಳಿ ಸ್ಥಾಪಿಸುವ ಮತ್ತು ಅಹಿಂಸಾ ಭಾವನೆಯನ್ನು ಮತ್ತೆ ಮತ್ತೆ ಹೇಳಿ ಅದು ಜನರ ಮನಸ್ಸಿನಲ್ಲಿ ಬೇರೂರುವಂತೆ ಮಾಡುವ ಪ್ರಯತ್ನದಲ್ಲಿ ನಿರತರಾದರು.

ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ನಂತರವೂ, ಬ್ರಿಟಿಷ್ ಸರ್ಕಾರದೊಡನೆ ಯಾವುದಾದರೊಂದು ಗೌರವಯುತ ಇತ್ಯರ್ಥವನ್ನು ಏರ್ಪಡಿಸಿಕೊಳ್ಳಬೇಕೆಂಬುದು ಗಾಂಧಿಯವರ ತೀವ್ರ ಅಭಿಲಾಷೆಯಾಗಿತ್ತು. ಆ ವರ್ಷ ಅಮೃತಸರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ತಮ್ಮ ಮನೋಭಾವದಿಂದ, ಈ ಅಭಿಲಾಷೆಯನ್ನು ಶ್ರುತಪಡಿಸಿದರು. ಮುನ್ಷಿಯವರ "ಪಿಲಿಗ್ರಿಮೇಜ್ ಟು ಫ್ರೀಡಮ್" ಎಂಬ ಪುಸ್ತಕದ ಮೊದಲ ಅಧ್ಯಾಯದಿಂದ ಆಯ್ದ ಭಾಗವನ್ನು ಇಲ್ಲಿ ಉಲ್ಲೇಖಿಸಲಾಗಿದ್ದು, ಅದು ಬಹಳ ಸ್ವಾರಸ್ಯಕರವಾಗಿದೆ: "೧೯೧೯ರ ಕ್ರಿಸ್‌ಮಸ್ ವಾರದಲ್ಲಿ, ಮಾಂಟ್‌ಫೋರ್ಡ್ ಸುಧಾರಣೆಗಳು ಮತ್ತು ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಇವೆರಡರ ಕರಾಳ ಛಾಯೆಯಲ್ಲಿ ಕಾಂಗ್ರೆಸ್ ಸಮಾವೇಶ ನಡೆಯಿತು. ನಾನೂ ವಿಷಯಗಳ ಸಮಿತಿಯ ಒಬ್ಬ ಸದಸ್ಯನಾಗಿದ್ದೆ. ನಾನು ಕಂಡಿರುವ ಸಮಿತಿಗಳಲ್ಲೇ ಇದು ಅತ್ಯಂತ ಮಹತ್ವದ್ದಾಗಿತ್ತು. ಪಂಡಿತ್ ಮೋತಿಲಾಲ್ ನೆಹರೂ ಮತ್ತು ಶ್ರೀಮತಿ ಬೆಸೆಂಟ್ ಒಂದು ಗುಂಪಿನಲ್ಲಿದ್ದರು. ಸಿ. ಆರ್. ದಾಸ್ ಅವರ ಬೆಂಬಲ ಪಡೆದಿದ್ದ ತಿಲಕ್ ಮತ್ತು ಬಿಪಿನ್‌ಚಂದ್ರಪಾಲ್, ಉಳಿದೆಲ್ಲಾ ಸದಸ್ಯರಿಗೆ ಮುಖಂಡರಾಗಿದ್ದರು. ಗಾಂಧೀಜಿ ಸಹ ಅಲ್ಲಿದ್ದರು. ಅವರು ಒಂಟಿಯಾಗಿ ಕುಳಿತು, ಮೌನವಾಗಿದ್ದರು. ಅವರಲ್ಲಿ ನಿಗೂಢತೆ ಕಾಣಬರುತ್ತಿತ್ತು.... ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡ ಮತ್ತು ಅಮೃತಸರದ ಗಲಭೆಗಳಲ್ಲಿ ಜನರ ಗುಂಪು ತೋರಿಸಿದ ಹುಚ್ಚು ಆವೇಶವನ್ನು ಖಂಡಿಸುವ ಒಂದು ನಿರ್ಣಯವನ್ನು ವಿಷಯಗಳ ಸಮಿತಿಯಲ್ಲಿ, ಮಂಡಿಸಲಾಯಿತು. ಈ ನಿರ್ಣಯದ ಉತ್ತರಾರ್ಧದ ಭಾಗದ ಬಗ್ಗೆ ನಮ್ಮಲ್ಲಿ ಅನೇಕರ ಮನಸ್ಸು ಕೋಪಾವೇಶದಿಂದ ಕುದ್ದುಹೋಯಿತು, ಒಂದಿಬ್ಬರು ಯೂರೋಪಿಯನರ ಕೊಲೆಗಳನ್ನು ಮತ್ತು ನೂರಾರು ಮಂದಿ ನಿರಪರಾಧಿ ಗಂಡಸರು ಮತ್ತು ಹೆಂಗಸರ ಭೀಕರ ಕೊಲೆಗಳನ್ನು ಸಮಾನದೃಷ್ಟಿಯಿಂದ, ಒಂದೇ ಮಟ್ಟದಲ್ಲಿ ನೋಡುವುದು ನ್ಯಾಯವೇ? ಇದು ಶ್ರೀಮತಿ ಬೆಸೆಂಟ್ ಅವರ ಕೆಲಸವೇ ಇರಬೇಕು. ಎಷ್ಟಾದರೂ ಆಕೆ ಬ್ರಿಟಿಷ್ ಮಹಿಳೆಯಲ್ಲವೇ? ಎಂದು ವಿಷಯಸಮಿತಿಯ ಅನೇಕ ಸದಸ್ಯರು ಭಾವಿಸಿದ್ದರು. ಪಂಜಾಬ್‌ನ ಮುಖಂಡರೊಬ್ಬರು ಒರಟಾದ ರೀತಿಯಲ್ಲಿ ತಮ್ಮ

ಭಾವನೆಯನ್ನು ಹೀಗೆ ವ್ಯಕ್ತಪಡಿಸಿದರು : "ಭಾರತದ ತಾಯಿಯೊಬ್ಬಳಿಗೆ ಜನಿಸಿದ ಯಾರೇ ಆಗಲಿ ಇಂತಹ ಒಂದು ನಿರ್ಣಯವನ್ನು ರೂಪಿಸಲಾರರು. ಲೋಕಮಾನ್ಯ ತಿಲಕರೂ ಈ ನಿರ್ಣಯದ ಬಗ್ಗೆ ಅಸಂತೃಪ್ತರಾಗಿದ್ದರು, ಮತ್ತು ಕುಪಿತಗೊಂಡಿದ್ದರು. ಬಿಪಿನ್‌ಚಂದ್ರಪಾಲ್ ಮತ್ತು ಸಿ. ಆರ್. ದಾಸ್ ಅವರು ಸಹ ನಿರ್ಣಯದ ಬಗ್ಗೆ ಕೋಪೋದ್ರಿಕ್ತರಾಗಿದ್ದರು. ಅನಂತರ ನಿರ್ಣಯದ ಉತ್ತರಾರ್ಧಭಾಗವನ್ನು ಅತ್ಯಧಿಕ ಬಹುಮತದಿಂದ ತಿರಸ್ಕರಿಸಲಾಯಿತು."

ಇದರ ಮರುದಿನ, ಗಾಂಧೀಜಿ ಈ ನಿರ್ಣಯವನ್ನು ಮರುಪರಿಶೀಲಿಸಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದಾರೆಂದು ಅಧ್ಯಕ್ಷರು ಪ್ರಕಟಿಸಿದರು. ನಿರ್ಣಯದ ಮರುಪರಿಶೀಲನೆಯನ್ನು ಸದಸ್ಯರು ವಿರೋಧಿಸಿದರು. ಈ ಕ್ರಮವನ್ನು ಅವರು ಪ್ರಬಲವಾಗಿ ಪ್ರತಿಭಟಿಸಿದರು. ಮುನ್ಷಿಯವರ ಪುಸ್ತಕದಿಂದ ಕೆಲವು ವಿಷಯಗಳನ್ನು ಇಲ್ಲಿ ಪುನಃ ಉಲ್ಲೇಖಿಸಲಾಗಿದೆ "ಭಾರತದ ತಾಯಿಗೆ ಜನಿಸಿದ ಮಗನೊಬ್ಬ ಎಂದಿಗೂ ಇಂತಹ ಒಂದು ನಿರ್ಣಯವನ್ನು ಸಿದ್ಧಪಡಿಸಲಾರ ಎಂದು ಪಂಜಾಬ್ ಮುಖಂಡರೊಬ್ಬರು ಆಡಿದ ಮಾತಿನ ಬಗ್ಗೆ ಗಾಂಧೀಜಿ ಪ್ರಸ್ತಾಪಿಸಿ, 'ಒಬ್ಬ ಭಾರತೀಯನಾಗಿ ಇಂತಹ ಒಂದು ನಿರ್ಣಯವನ್ನು ಸಿದ್ಧಪಡಿಸಬಹುದೇ ಎಂಬುದನ್ನು ತಾವು ಸುದೀರ್ಘವಾಗಿ ಮತ್ತು ಬಹುಕಾಲದವರೆಗೆ ಪರಿಶೀಲಿಸಿದ್ದಾಗಿಯೂ, ನಿಜವಾಗಿಯೂ ತಾವೇ ನಿರ್ಣಯವನ್ನು ಸಿದ್ಧಪಡಿಸಿದ್ದುದಾಗಿಯೂ" ಅವರು ತಿಳಿಸಿದರು. ಆದರೆ ಬಹಳ ಕಾಲದವರೆಗೆ ಆತ್ಮಶೋಧನೆ ಮಾಡಿಕೊಂಡ ಬಳಿಕ, ಭಾರತೀಯ ತಾಯಿಗೆ ಹುಟ್ಟಿದ ಮಗನೇ ನಿರ್ಣಯವನ್ನು ಸಿದ್ಧಪಡಿಸಿರಬಹುದು ಎಂಬ ತೀರ್ಮಾನಕ್ಕೆ ತಾವು ಬಂದುದಾಗಿ ಅವರು ಹೇಳಿದರು. ಅನಂತರ ಬಿಟ್ಟುಹೋಗಿದ್ದ ಭಾಗವನ್ನು ಮತ್ತೆ ಸೇರಿಸಲಾಯಿತು. ಮಾಂಟ್‌ಫೋರ್ಡ್ ಸುಧಾರಣೆಗಳ ಬಗ್ಗೆಯೂ ಅವರು ಮುಕ್ತ ಮನಸ್ಸಿನಿಂದ ಪರಿಶೀಲಿಸಿ, ಕಾರ್ಯಗತಗೊಳಿಸಬಹುದು ಎಂದು ವಾದಿಸಿದರು.

ಮುಂದಿನ ಆರು ತಿಂಗಳಲ್ಲಿ ಅವರು ಒಂದು ದೊಡ್ಡ ಬದಲಾವಣೆಯನ್ನು ಎದುರಿಸಬೇಕಾಯಿತು. ಶಾಂತಿ ಒಪ್ಪಂದದ ಪ್ರಕಾರ, ಇಸ್ಲಾಮ್‌ನ ಎಲ್ಲ ಪವಿತ್ರ ಕ್ಷೇತ್ರಗಳು, ಬ್ರಿಟಿಷರ ಚಕ್ರಾಧಿಪತ್ಯದೊಳಗೆ ಬರುವುದರಿಂದ ಎಲ್ಲ ಭಾರತೀಯ ಮುಸ್ಲಿಮರು ತುಂಬ ಕಳವಳಗೊಂಡಿದ್ದರು. ಖಿಲಾಫತ್ ಚಳವಳಿ ಆರಂಭವಾಯಿತು. ಮುಸ್ಲಿಮರ ಬೇಡಿಕೆಗಳು ನ್ಯಾಯಸಮ್ಮತವಾಗಿದ್ದುದರಿಂದ, ಅವಕ್ಕೆ ಗಾಂಧೀಜಿ ಹೃತ್ಪೂರ್ವಕ ಬೆಂಬಲ ವ್ಯಕ್ತಪಡಿಸಿದರು. ಭಾರತೀಯ ಮುಸ್ಲಿಮರೊಡನೆ ನಿಕಟ ಸಂಬಂಧವಿಟ್ಟುಕೊಂಡು, ಅವರ ಬಗ್ಗೆ ತಮಗೆ ಸಂಪೂರ್ಣ ಕಾಳಜಿ ಇದೆಯೆಂಬುದನ್ನು ಪ್ರದರ್ಶಿಸಬೇಕೆಂದು ಅವರು ಬಯಸಿದರು. ಪಂಜಾಬ್‌ನಲ್ಲಿ ನಡೆದ ದೌರ್ಜನ್ಯಗಳ ಬಗ್ಗೆ ಬ್ರಿಟಿಷ್ ಸರ್ಕಾರ ಪುನಃ ಅನುಸರಿಸಿದ ರೀತಿ–ನೀತಿ, ಅವರ ಮನಸ್ಸಿಗೆ

ಆಘಾತವುಂಟುಮಾಡಿತು. ಇವುಗಳ ಆಧಾರದ ಮೇಲೆ ಅವರು ಅಸಹಕಾರ ಯೋಜನೆಯೊಂದನ್ನು ರೂಪಿಸಿದರು. ಈ ಯೋಜನೆಯನ್ನು ಜುಲೈನಲ್ಲಿ ಪ್ರಕಟಿಸಲಾಯಿತು. ಈ ಯೋಜನೆಯ ಬಗ್ಗೆ ಗಾಂಧೀಜಿಯನ್ನು ವಿರೋಧಿಸಬಹುದಾಗಿದ್ದ ಏಕೈಕ ಭಾರತೀಯ ನಾಯಕ ಲೋಕಮಾನ್ಯ ತಿಲಕ್ ಆಗಸ್ಟ್ ೧ರಂದು ನಿಧನಹೊಂದಿದರು. ಕಾಂಗ್ರೆಸ್‌ನ ವಿಶೇಷ ಅಧಿವೇಶನ ೧೯೨೦ರ ಸೆಪ್ಟೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಅಸಹಕಾರ ನಿರ್ಣಯವನ್ನು ಅತ್ಯಧಿಕ ಬಹುಮತದಿಂದ ಅಂಗೀಕರಿಸಲಾಯಿತು. ಈ ನಿರ್ಣಯವನ್ನು ಸಿ. ಆರ್. ದಾಸ್, ಲಾಲಾ ಲಜಪತ್‌ರಾಯ್, ಜಿನ್ನಾ, ಶ್ರೀಮತಿ ಬೆಸೆಂಟ್ ಮತ್ತು ಶ್ರೀನಿವಾಸ ಶಾಸ್ತ್ರಿ ವಿರೋಧಿಸಿದರು. ಆದರೂ ಪ್ರಯೋಜನವಾಗಲಿಲ್ಲ. ಅವರು ಗಾಂಧೀಜಿಯ ಕಡು ವಿರೋಧಿಗಳಾದರು. ಅನಂತರ, ಪಂಡಿತ್ ಮೋತಿಲಾಲ್ ನೆಹರೂ, ಸಿ. ಆರ್. ದಾಸ್, ಲಾಲಾ ಲಜಪತ್‌ರಾಯ್, ಸಿ. ರಾಜಗೋಪಾಲಾಚಾರಿ ಮತ್ತು ಇತರರು ತಮ್ಮ ವಿರೋಧವನ್ನು ತ್ಯಜಿಸಿ, ಗಾಂಧೀಜಿಯವರ ಕಟ್ಟಾ ಬೆಂಬಲಿಗರಾದರು. ದೇಶದ ಸ್ವಾತಂತ್ರ್ಯಕ್ಕಾಗಿ ವಿಶಿಷ್ಟವಾದ ಅಹಿಂಸಾತ್ಮಕ ಸಮರ ಹೀಗೆ ಆರಂಭವಾಯಿತು. ಮುಂದಿನ ೨೭ ವರ್ಷಗಳ ಕಾಲ, ಅನೇಕ ಹೋರಾಟಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದಕ್ಕೆ ಜಯ ಲಭಿಸಿತಾದರೂ, ಅಂತಿಮವಾಗಿ ಅದು ಸೋಲಲೇ ಬೇಕಾಯಿತು. ಬ್ರಿಟಿಷರ ಸಾಮ್ರಾಜ್ಯವಾದ ೧೯೪೭ರ ಆಗಸ್ಟ್ ೧೫ರಂದು ತನ್ನ ಅಂತ್ಯವನ್ನು ಕಂಡುಕೊಂಡಿತು.

ಬ್ರಿಟಿಷ್ ಸಾಮ್ರಾಜ್ಯವಾದ, ಭಾರತದಲ್ಲಿ ಬಿಟ್ಟುಹೋದ ಪರಿಣಾಮಗಳ ಮತ್ತು ಭಾರತದ ರಾಷ್ಟ್ರೀಯವಾದದ ಸಾಧಕ–ಬಾಧಕಗಳ ಸಂಕ್ಷಿಪ್ತ ಪರಾಮರ್ಶೆಯೊಂದಿಗೆ ನಾನು ನನ್ನ ಉಪನ್ಯಾಸವನ್ನು ಸಮಾಪ್ತಿಗೊಳಿಸುತ್ತೇನೆ. ಅಂತಿಮವಾಗಿ ಭಾರತದ ರಾಷ್ಟ್ರೀಯವಾದವೇ ಯಶಸ್ವಿಯಾಯಿತೆಂದು ಹೇಳಬೇಕಾಗಿಲ್ಲ.

ಅನೇಕ ಮಧ್ಯಕಾಲೀನ ಪಟ್ಟಭದ್ರ ಹಿತಾಸಕ್ತಿಗಳನ್ನು ನಿರ್ನಾಮಗೊಳಿಸುವ ಮತ್ತು ನಿಗ್ರಹಿಸುವ ಮೂಲಕ, ಬ್ರಿಟಿಷ್ ಸಾಮ್ರಾಜ್ಯವಾದವು, ಆಧುನಿಕ ಭಾರತದ ಉಗಮಕ್ಕೆ ಮಾರ್ಗವನ್ನು ಸುಗಮಗೊಳಿಸಿತು. ಅದು ಶಾಂತಿ ಸ್ಥಾಪನೆ ಮಾಡಿತು. ಶಾಸನಬದ್ಧ ಆಡಳಿತ ಜಾರಿಗೆ ಬರುವಂತೆ ಮಾಡಿತು. ಅದು ಪೀನಲ್ ಕೋಡ್, ಸಿವಿಲ್ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗಳು ಮತ್ತು ಇಡೀ ದೇಶಕ್ಕೆ ಸಾಮಾನ್ಯವಾಗಿ ಅನ್ವಯವಾಗುತ್ತಿದ್ದ ಮದುವೆ, ದತ್ತುಸ್ವೀಕಾರ, ಪಿತ್ರಾರ್ಜಿತ ಬಾಧ್ಯತೆ ಮತ್ತು ಉತ್ತರಾಧಿಕಾರ ಇವುಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಬಿಟ್ಟು, ಇತರ ನಾಗರಿಕ ಕಾನೂನುಗಳನ್ನು ರೂಪಿಸಿತು. ಬ್ರಿಟಿಷ್ ಸಾಮ್ರಾಜ್ಯವಾದದ ಅಡಿಯಲ್ಲಿ ಇಂಗ್ಲಿಷ್ ಶಿಕ್ಷಣ ಪ್ರಬಲವಾಗಿ ಉಳಿದುಕೊಂಡಿತು. ಈ ಕಾರಣದಿಂದ ಜನರ ಮನದಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ವಿಚಾರಗಳು ಒಡಮೂಡಿದವು.

ಅದು ಭಾರತೀಯ ರಾಷ್ಟ್ರೀಯವಾದ ಹುಟ್ಟಿಕೊಳ್ಳಲು ಹಿತಕರವಾದಂತಹ ವಾತಾವರಣವನ್ನು ಮೂಡಿಸಿತು. ಅದು ರೈಲು ಮಾರ್ಗಗಳನ್ನು ನಿರ್ಮಿಸಿತು. ರೈಲ್ವೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿತು. ಭಾರತದ ಅರ್ಥವ್ಯವಸ್ಥೆಗೆ ಅತ್ಯಮೂಲ್ಯ ಸ್ವತ್ತುಗಳಾಗಿರುವ ಟೀ ಮತ್ತು ಕಾಫಿಯ ಪ್ಲಾಂಟೇಷನ್ ಉದ್ಯಮಗಳನ್ನು ಪ್ರೋತ್ಸಾಹಿಸಿತು. ಈ ಶತಮಾನದ ಆರಂಭದಲ್ಲಿ ಸೆಣಬು ಹತ್ತಿ ಮತ್ತು ಸಕ್ಕರೆಯಂತಹ ಆಧುನಿಕ ಉದ್ಯಮಗಳ ಸ್ಥಾಪನೆಗೆ ಅನುಮತಿ ನೀಡಿತು. ಯಾವಾಗಲಾದರೂ ಒಮ್ಮೊಮ್ಮೆ ಈ ಉದ್ಯಮಗಳ ಅಭಿವೃದ್ಧಿಗೆ ಪ್ರೋತ್ಸಾಹ ಸಹ ನೀಡಿತು. ೧೯೦೯ರಲ್ಲಿ ಪ್ರಾತಿನಿಧಿಕ ಸರ್ಕಾರದ ತತ್ವವನ್ನು, ೧೯೧೯–೨೦ ಮತ್ತು ೧೯೩೫ರಲ್ಲಿ ಜವಾಬ್ದಾರಿ ಸರ್ಕಾರವನ್ನು ಅದು ಬಲಾತ್ಕಾರ ಮತ್ತು ಒತ್ತಡದಿಂದ ಸ್ಥಾಪಿಸಬೇಕಾಗಿ ಬಂದರೂ, ಭಾರತೀಯರಿಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಅಮೂಲ್ಯ ತತ್ವಗಳನ್ನು ಮತ್ತು ವಿಧಾನಗಳನ್ನು ಪರಿಚಯ ಮಾಡಿಕೊಟ್ಟಿತು. ಇದುವರೆಗೆ ಹೇಳಿದ್ದೆಲ್ಲವೂ ಭಾರತೀಯರಿಗೆ ಲಾಭದಾಯಕವಾದ ಅಂಶಗಳಾಗಿದ್ದವು. ಭಾರತೀಯರಿಗೆ ಅನಾನುಕೂಲವುಂಟು ಮಾಡಿದ ಅಂಶಗಳು ಇವಕ್ಕಿಂತಲೂ ಹೆಚ್ಚಾಗಿದ್ದವು. ಭಾರತದಲ್ಲಿನ ಕುಟೀರ ಕೈಗಾರಿಕೆಗಳು ನಾಶವಾದವು. ಯಂತ್ರದಲ್ಲಿ ತಯಾರಿಸಿದ ಅಗ್ಗದರದ ವಿದೇಶೀ ಸಾಮಗ್ರಿಗಳನ್ನು ಭಾರತಕ್ಕೆ ಒತ್ತಾಯಪೂರ್ವಕವಾಗಿ ತರಲಾಯಿತು. ಇದರಿಂದ ಭಾರತೀಯ ಅರ್ಥವ್ಯವಸ್ಥೆಗೆ ಬಲವಾದ ಪೆಟ್ಟು ಬಿದ್ದಿತು. ಇದರಿಂದ ಕುಟೀರ ಕೈಗಾರಿಕೆಗಳಲ್ಲಿ ನಿರತರಾಗಿದ್ದ ಲಕ್ಷಾಂತರ ಜನರು ಜೀವನೋಪಾಯಕ್ಕಾಗಿಕೃಷಿಯನ್ನು ಅವಲಂಬಿಸಬೇಕಾಯಿತು. ಆ ವೇಳೆಗಾಗಲೇ ಕೃಷಿಯನ್ನವಲಂಬಿಸಿದ್ದ ಜನರ ಸಂಖ್ಯೆ ಅತ್ಯಧಿಕವಾಗಿತ್ತು. ಇದರಿಂದ ಕೃಷಿ ಕ್ಷೇತ್ರದ ಮೇಲಿನ ಒತ್ತಡ ತುಂಬ ಹೆಚ್ಚಾಗಿತ್ತು. ಆಧುನಿಕ ಕೈಗಾರಿಕೆಗಳ ಬೆಳವಣಿಗೆಗೆ ಯಾವ ಉತ್ತೇಜನವೂ ಇರಲಿಲ್ಲ: ಉದ್ದೇಶಪೂರ್ವಕವಾಗಿ ಈ ಕೈಗಾರಿಕೆಗಳನ್ನು ನಿರುತ್ತೇಜಿಸಲಾಗುತ್ತಿತ್ತು ; ಹೀಗೆ ಮಾಡಿದ್ದರಿಂದ ಭಾರತದ ಆರ್ಥಿಕ ವ್ಯವಸ್ಥೆಯು ಯೂರೋಪ್ ಮತ್ತು ಅಮೆರಿಕಾದ ಅರ್ಥವ್ಯವಸ್ಥೆಗಿಂತಲೂ ಒಂದು ಶತಮಾನದಷ್ಟು ಹಿಂದುಳಿದಿತ್ತು. ಭಾರತದ ಬಂಡವಾಳ ಸಂಪನ್ಮೂಲಗಳು ವ್ಯವಸ್ಥಿತವಾಗಿ ದೇಶದ ಹೊರ ಹೋಗುತ್ತಿತ್ತು. ಇಲ್ಲಿನ ಬಂಡವಾಳ ಬಂದಾಗುತ್ತಿತ್ತು. ಈ ಕಾರಣಗಳಿಂದ ಭಾರತೀಯರು, ಬಡತನದಿಂದ ಬವಣೆಪಡುವಂತಾಗಿತ್ತು. ಜನರನ್ನು ವಿಭಜಿಸಿ, ಆಳುವುದು ಬ್ರಿಟಿಷ್ ಸಾಮ್ರಾಜ್ಯವಾದಿಗಳ ನೀತಿಯಾಗಿತ್ತು. ಈ ನೀತಿಯು ಹಿಂದೂಗಳು ಮತ್ತು ಮುಸ್ಲಿಮರ ನಡುವಣ ದ್ವೇಷಕ್ಕೆ ಎಡೆ ಮಾಡಿಕೊಟ್ಟಿತ್ತು. ಈ ದ್ವೇಷ ಉಲ್ಬಣಗೊಳ್ಳುತ್ತಲೇ ಹೋಗಿ ಭಾರತದ ವಿಭಜನೆಯಲ್ಲಿ ಪರ್ಯವಸಾನಗೊಂಡಿತು. ಬ್ರಿಟಿಷರ ಸಾಮ್ರಾಜ್ಯವಾದದ ಪರಿಣಾಮವಾಗಿ, ಭಾರತದ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಪರಿಸ್ಥಿತಿ ಗತಿಶೀಲವಾಗಿರದೇ, ಇದ್ದ ಸ್ಥಿತಿಯಲ್ಲೇ ಇತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ,

ಸ್ವಾತಂತ್ರ್ಯ ಬಂದು ಎರಡು ದಶಕಗಳು ಕಳೆದಿದ್ದರೂ, ಸಾಮ್ರಾಜ್ಯವಾದದ ಪರಿಣಾಮ ಇನ್ನೂ ಉಳಿದುಕೊಂಡೇ ಇದೆ.

ಹಿಂದೂಗಳಲ್ಲಿ ಒಂದು ಬಗೆಯ ಧಾರ್ಮಿಕ ಸ್ವರೂಪದ ರಾಷ್ಟ್ರೀಯವಾದ ಯಾವಾಗಲೂ ಇದ್ದೇ ಇತ್ತು. ಈ ರಾಷ್ಟ್ರೀಯವಾದ, ದೇವಾಲಯಗಳು ಮತ್ತು ಹರಿದ್ವಾರ, ಬೆನಾರಸ್, ಬದರಿನಾಥ್ ಮತ್ತು ಅಮರನಾಥ್, ಪುರಿ ಮತ್ತು ರಾಮೇಶ್ವರದಂತಹ ಪುಣ್ಯಕ್ಷೇತ್ರಗಳ ಸುತ್ತ ಕೇಂದ್ರೀಕೃತವಾಗಿತ್ತು. ಆದರೆ ಭಾರತೀಯನಿಗೆ ತನ್ನ ಈ ಪುಣ್ಯಭೂಮಿ ಮೇಲಿನ ಈ ವ್ಯಾಮೋಹ ರಾಜಕೀಯ ಸ್ವರೂಪದ್ದಾಗಿರಲಿಲ್ಲ. ಆದರೆ ಈ ವ್ಯಾಮೋಹ ಹಿಂದೂಗಳಲ್ಲಿ ಒಂದು ಬಗೆಯ ಏಕತೆಯನ್ನು ತರಲು ನೆರವೇನೂ ಆಗಲಿಲ್ಲ. ಆದರೆ ಇದು ಹಿಂದೂಗಳನ್ನು ಮುಸ್ಲಿಮರಿಂದ ತೀವ್ರವಾಗಿ ಪ್ರತ್ಯೇಕಿಸಿತ್ತು. ಭಾರತದ ಮುಸ್ಲಿಮರು, ಸುಮಾರು ೮೦೦ ವರ್ಷಗಳಿಂದ ಭಾರತದೊಡನೆ ಹೊಂದಿದ್ದ ಸಂಬಂಧದಿಂದಾಗಿ ಅವರು ಭಾರತದತ್ತ ಒಲವು ಬೆಳೆಸಿಕೊಂಡಿದ್ದರು. ಆದರೆ, ಈ ಒಲವು ಧರ್ಮಾಂಧತೆ ಮತ್ತು ಸಾಮ್ರಾಜ್ಯವಾದಿ ನೆನಪುಗಳಿಂದ ಹೊಸ ರಂಗು ಪಡೆದಿತ್ತು.

ಆದ್ದರಿಂದ ರಾಜಕೀಯ ಸ್ವರೂಪದ ರಾಷ್ಟ್ರೀಯವಾದ ಮಹಾದಂಗೆಯ ನಂತರವೇ ರೂಪು ತಳೆದಿದೆಯೆಂದು ಹೇಳಬಹುದು. ಮುಂಚಿನ ಹಂತಗಳಲ್ಲಿ ವಿವೇಚನೆಯಿಂದ ಕೂಡಿದ್ದ, ಜಾತ್ಯತೀತ ರಾಷ್ಟ್ರೀಯ ವಾದವಿತ್ತು. ಇದಕ್ಕೆ ಭಾವೋದ್ವೇಗ ಸೇರಿಕೊಂಡಾಗ, ಜನರ ಧಾರ್ಮಿಕ ಭಾವನೆಗಳ ದುರುಪಯೋಗ ಪಡೆಯುವ ಪ್ರವೃತ್ತಿಯುಂಟಾಯಿತು. ಮತ್ತು ಭಯೋತ್ಪಾದಕತೆಯ ಲೇಪ ಕೂಡ ಅದಕ್ಕೆ ಬಂದಿತ್ತು. ಬಹು ದೀರ್ಘ ಕಾಲದವರೆಗೆ ಮೇಲಣ ಮಧ್ಯಮ ವರ್ಗಕ್ಕೆ ಸೇರಿದ ಬುದ್ಧಿಜೀವಿಗಳು ಹಾಗೂ ತಿಲಕರು ಮತ್ತು ಅರವಿಂದ ಘೋಷ್ ಈ ರಾಷ್ಟ್ರೀಯ ವಾದಕ್ಕೆ ಪೂರ್ಣ ನಿಷ್ಠರಾಗಿದ್ದರು. ಅನಂತರ, ರಾಷ್ಟ್ರೀಯವಾದ, ಕೆಳಗಣ ಮಧ್ಯಮ ವರ್ಗಗಳಿಗೆ ಮಾತ್ರ ವಿಸ್ತರಿಸಿತು. ಗಾಂಧೀಜಿ ಅವರ ಪ್ರವೇಶವಾದ ನಂತರ ಮಹಿಳೆಯರು ಮತ್ತು ಬೇಸಾಯಗಾರರು ಸಹ ರಾಷ್ಟ್ರೀಯವಾದದ ಬೆಂಬಲಿಗರಾದರು. ಹಿಂದೂ–ಮುಸ್ಲಿಮ್ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಆಗಾಗ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಇವೆರಡೂ ಧರ್ಮಗಳ ಜನರನ್ನೊಳಗೊಂಡ ಐಕ್ಯ ರಾಷ್ಟ್ರೀಯವಾದವನ್ನು ನಿರ್ಮಿಸುವುದೇ ಈ ಪ್ರಯತ್ನಗಳ ಉದ್ದೇಶವಾಗಿತ್ತು. ಜನರನ್ನು ವಿಭಜಿಸಿ ಆಳುವುದೇ ಬ್ರಿಟಿಷ್ ನೀತಿಯಾಗಿತ್ತು. ಆದ್ದರಿಂದ ಅಂತಹ ನೀತಿಯನ್ನು ಪೂರ್ಣವಾಗಿ ತಡೆಗಟ್ಟಲು ಭಾರತೀಯ ನಾಯಕರಿಗೆ ಸಾಧ್ಯವಾಗಲಿಲ್ಲ; ಮುಸ್ಲಿಮರಿಗಂತೂ ಪಾಕಿಸ್ತಾನ ದೊರೆಯಿತು. ಆದರೂ, ಭಾರತ, ಕೋಮುಭಾವನೆ, ಜಾತೀಯತೆ ಮತ್ತು ಇತರ ವಿಭಜನಕಾರಿ ಶಕ್ತಿಗಳ ಉಪಟಳದಿಂದ ಇನ್ನೂ ಮುಕ್ತವಾಗಿಲ್ಲ.

ಬ್ರಿಟಿಷರಿಂದ ಭಾರತದ ಶೋಷಣೆ ನಡೆಯಿತು. ಭಾರತದಲ್ಲಿ ಅವರ ಪಟ್ಟಭದ್ರ

ಹಿತಾಸಕ್ತಿಗಳಿದ್ದವು. ಇದರಿಂದಾಗಿ ಆರ್ಥಿಕವಾಗಿಯೂ ಭಾರತೀಯರು ರಾಷ್ಟ್ರೀಯ ವಾದವನ್ನು ಬೆಳೆಸಿಕೊಳ್ಳುವಂತಾಯಿತು. ಈ ಕಾರಣದಿಂದ ವಿದೇಶಿ ಬಂಡವಾಳ, ವಿದೇಶೀಯರಿಂದ ಬಂಡವಾಳ ಹೂಡಿಕೆ ಮತ್ತು ತಂತ್ರಜ್ಞಾನ ಇವುಗಳ ಆಮದು ಸಾಧ್ಯವಾಗುವುದೋ ಇಲ್ಲವೋ ಎಂಬ ಭಯ ಮತ್ತು ಶಂಕೆ ಭಾರತವನ್ನು ಕಾಡುತ್ತಿವೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರವೂ, ಇವುಗಳಿಂದ ಭಾರತದ ಆರ್ಥಿಕ ಪ್ರಗತಿಗೆ ಬಾಧಕವುಂಟಾಗಿದೆ.

ಈ ಉಪನ್ಯಾಸಗಳಿಗಾಗಿ ನನ್ನನ್ನು ಆಮಂತ್ರಿಸುವ ಮೂಲಕ, ನನಗೆ ಸಂದಿರುವ ಗೌರವಕ್ಕಾಗಿ, ಮಧುರೈ ವಿಶ್ವವಿದ್ಯಾಲಯಕ್ಕೆ ಮತ್ತು ಅದರ ಉಪಕುಲಪತಿಯವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆಂದು ಮತ್ತೊಮ್ಮೆ ತಿಳಿಸಬಯಸುತ್ತೇನೆ.

* * * *